ನೀನಾಸಮ್

ಮಾತುಕತೆ

೮೨

ಮಾತುಕತೆ ೮೨

ನೀನಾಸಮ್ ಹೆಗ್ಗೋಡು (ಸಾಗರ) ಕರ್ನಾಟಕ ೫೭೭ ೪೧೭

ದೂರವಾಣಿ: ೦೮೧೮೩-೨೬೫೬೪೬

ಖಾಸಗಿ ಪ್ರಸಾರದ ತ್ರೈಮಾಸಿಕ ಸಂಪರ್ಕಪತ್ರ

(ಫೆಬ್ರವರಿ-ಮೇ-ಆಗಸ್ಟ್-ನವೆಂಬರ್)

ಸಂಪಾದಕ: ಜಸವಂತ ಜಾಧವ್

ಸಹ ಸಂಪಾದಕ: ವೆಂಕಟರಮಣ ಐತಾಳ ಬಿ. ಆರ್.

ವಾರ್ಷಿಕ ವರ್ಗಣಿ: ಐವತ್ತು ರೂಪಾಯಿ

ಅಕ್ಷರ ಜೋಡಣೆ: ಅಕ್ಷರ ಗಣಕ, ಹೆಗ್ಗೋಡು, ಮುದ್ರಣ: ಅಚ್ಚುಮೆಚ್ಚು, ಹೆಗ್ಗೋಡು

ಮೇ ೨೦೦೭ ವರ್ಷ ಇಪ್ಪತ್ತೊಂದು ಸಂಚಿಕೆ ಎರಡು

---

೧. ಕನ್ನಡ ನುಡಿ ನಡೆದು ಬಂದ ದಾರಿ: ಮುನ್ನೋಟ
ಡಿ.ಎನ್. ಶಂಕರ ಭಟ್ — ಪುಟ ೦೨

೨. ಶಬ್ದ ಮತ್ತು ಜಗತ್ತು:
ಅನುವಾದ ಮತ್ತು ಭರ್ತೃಹರಿಯ ಭಾಷಾಕಲ್ಪನೆ
ಬಿ.ಕೆ. ಮತಿಲಾಲ್; ಕನ್ನಡಕ್ಕೆ: ಎಂ.ಎ. ಹೆಗಡೆ — ಪುಟ ೨೨

೪. ನೀನಾಸಮ್ ವರದಿಗಳು — ಪುಟ ೪೦

MAATHUKATHE MAY 2007 (YEAR 21 ISSUE 2)
NINASAM QUARTERLY NEWS LETTER
PUBLISHED EVERY FEB;MAY;AUG;NOV.
ANNUAL SUBSCRIPTION: Rs.50 (FIFTY ONLY)
FOR PRIVATE CIRCULATION
NINASAM HEGGODU (SAGAR) KARNATAKA 577 417

ನೀನಾಸಮ್ ಸಂಸ್ಕೃತಿ ಶಿಬಿರ

ಅಕ್ಟೋಬರ್ ೨೦೦೭

ಕಳೆದ ೨೫ ವರ್ಷಗಳಿಂದ ನೀನಾಸಮ್ ಪ್ರತಿ ಅಕ್ಟೋಬರ್‌ನಲ್ಲಿ ಚಲನಚಿತ್ರ-ಸಂಸ್ಕೃತಿ ಶಿಬಿರಗಳನ್ನು ನಡೆಸುತ್ತ ಬಂದಿದೆ. ಈ ವರ್ಷದ ಸಂಸ್ಕೃತಿ ಶಿಬಿರವೂ ಅದೇ ಮಾದರಿಯಲ್ಲಿ ಯೋಜಿತವಾಗಿದ್ದು, ಅಕ್ಟೋಬರ್ ೭ರಿಂದ ೧೩ರವರೆಗೆ – ಏಳು ದಿನ – ನಡೆಯುತ್ತದೆ.

ಈ ಶಿಬಿರದಲ್ಲಿ ರಂಗಭೂಮಿ, ಸಾಹಿತ್ಯ, ಸಂಗೀತ, ನೃತ್ಯ, ಚಲನಚಿತ್ರ ಮುಂತಾದ ಸಾಂಸ್ಕೃತಿಕ ಮಾಧ್ಯಮಗಳ ಸ್ವರೂಪ, ವೈವಿಧ್ಯ, ಮೀಮಾಂಸೆ, ವಿಮರ್ಶೆ, ಈ ಮಾಧ್ಯಮಗಳ ಪರಸ್ಪರ ಸಂಬಂಧ ಹಾಗೂ ಒಟ್ಟು ಸಮಾಜದೊಂದಿಗೆ ಸಂಸ್ಕೃತಿಯ ಸಂಪರ್ಕ – ಈ ವಿಷಯಗಳ ಬಗ್ಗೆ ಅಭ್ಯಾಸ, ಚರ್ಚೆ, ವಿಚಾರವಿನಿಮಯ ನಡೆಯುತ್ತದೆ. ಜತೆಗೆ ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳ ಉತ್ಸವ ನಡೆಯುತ್ತದೆ. ಶಿಬಿರ ಪ್ರಾರಂಭವಾಗುವುದು ಒಟ್ಟು ಕಾರ್ಯಕ್ರಮದ ಸ್ಥೂಲ ಸ್ವರೂಪವನ್ನು ಪರಿಚಯಿಸುವ ಕಿರು ಅಧಿವೇಶನದಿಂದ. ಆಮೇಲಿನ ದಿನಗಳಲ್ಲಿ ರಂಗಭೂಮಿಯ ಬಗ್ಗೆ, ಸಂಗೀತ-ನೃತ್ಯ ಮಾಧ್ಯಮಗಳ ಬಗ್ಗೆ, ಸಾಹಿತ್ಯದ ವಿವಿಧ ಪ್ರಕಾರಗಳ ಬಗ್ಗೆ, ಚಲನಚಿತ್ರ ಸಹೃದಯತೆಯ ಬಗ್ಗೆ ಮತ್ತು ಒಟ್ಟು ಸಂಸ್ಕೃತಿ-ಸಂವಹನದ ಪ್ರಕ್ರಿಯೆಯ ಬಗ್ಗೆ ಉಪನ್ಯಾಸ ಪ್ರಾತ್ಯಕ್ಷಿಕೆ-ಚರ್ಚೆಗಳು ನಡೆಯುತ್ತವೆ. ಪ್ರತಿಯೊಂದು ವಿಷಯದ ಬಗ್ಗೆ ಶಿಬಿರ ನಡೆಯುವಾಗಲೂ ಆಯಾ ಮಾಧ್ಯಮದ ಆಯ್ದ ಕೃತಿಗಳನ್ನು ಪ್ರಾಯೋಗಿಕವಾಗಿ ಬಳಸಿಕೊಳ್ಳಲಾಗುತ್ತದೆ. ಶಿಬಿರ ಪ್ರತಿನಿತ್ಯ ಬೆಳಿಗ್ಗೆ ೯ ಗಂಟೆಯಿಂದ ೧ ಗಂಟೆ ಹಾಗೂ ಮಧ್ಯಾಹ್ನ ೨-೩೦ರಿಂದ ೬ರತನಕ ನಡೆಯುತ್ತದೆ. ಇದಲ್ಲದೆ ಪ್ರತಿದಿನ ಸಂಜೆ ರಂಗ ಪ್ರದರ್ಶನಗಳು (ತಿರುಗಾಟ ೨೦೦೭ರ ಪ್ರಥಮ ಪ್ರದರ್ಶನಗಳು), ಸಂಗೀತ, ನೃತ್ಯ ಇತ್ಯಾದಿ ಕಾರ್ಯಕ್ರಮಗಳು – ಶಿಬಿರಾರ್ಥಿಗಳು ಮತ್ತು ಸಾರ್ವಜನಿಕರಿಗಾಗಿ ನಡೆಯುತ್ತವೆ.

ಶಿಬಿರಾರ್ಥಿಗಳ ಊಟೋಪಚಾರಗಳಿಗಾಗಿ ನಿಗದಿಪಡಿಸಿದ ಶುಲ್ಕ ರೂ. ೧,೦೦೦=೦೦.

ಆಸಕ್ತ ಅಭ್ಯರ್ಥಿಗಳು ಕೆಳಗಿನ ವಿಳಾಸಕ್ಕೆ

೨೦೦೭ ಸೆಪ್ಟೆಂಬರ್ ೨೫ರೊಳಗೆ ಅಭ್ಯರ್ಥಿಪತ್ರ ಕಳಿಸಬೇಕು.

ನೀನಾಸಮ್ ಸಂಸ್ಕೃತಿ ಶಿಬಿರ, ಹೆಗ್ಗೋಡು, ಸಾಗರ ಕರ್ನಾಟಕ ೫೭೭೪೧೭

ಕನ್ನಡ ನುಡಿ ನಡೆದು ಬಂದ ದಾರಿ: ಮುನ್ನೋಟ

ಡಿ. ಎನ್. ಶಂಕರ ಬಟ್

ಪ್ರಸಿದ್ಧ ಭಾಷಾಶಾಸ್ತ್ರಜ್ಞ ಡಾ. ಡಿ.ಎನ್. ಶಂಕರ ಭಟ್ಟರು ಕನ್ನಡ ನುಡಿ, ಲಿಪಿ ಹಾಗೂ ವ್ಯಾಕರಣದ ಕುರಿತು ಹಲವು ಗ್ರಂಥಗಳನ್ನು ಬರೆದು ಪ್ರಕಟಿಸಿದ್ದಾರೆ. ತಮ್ಮ 'ಕನ್ನಡ ಬರಹವನ್ನು ಸರಿಪಡಿಸೋಣ' ಎಂಬ ಗ್ರಂಥದಲ್ಲಿ ಕನ್ನಡ ಬರಹವನ್ನು ನಾವು ಮಾತನಾಡುವಂತೆಯೇ ಅಂದರೆ, ಉಚ್ಚರಿಸುವಂತೆಯೇ ಹೇಗೆ ಬರೆಯಬಹುದು ಎಂಬ ಬಗೆಗೆ ಚರ್ಚಿಸಿದ್ದಾರೆ. ಆ ಬರವಣಿಗೆಯ ಮುಂದಿನ ಹಂತವಾಗಿ 'ಕನ್ನಡ ನುಡಿ ನಡೆದು ಬಂದ ದಾರಿ' ಎಂಬ ಇನ್ನೊಂದು ಪುಸ್ತಕವನ್ನು ಬರೆದಿದ್ದಾರೆ. ಈ ಹೊಸ ಪುಸ್ತಕದಲ್ಲಿ ತಾವು ಪ್ರತಿಪಾದಿಸಿದಂತೆಯೇ ಹೊಸ ಬರಹವನ್ನು ಅಳವಡಿಸಿದ್ದಾರೆ. ಅದರ ಮೊದಲನೆಯ ಅಧ್ಯಾಯವನ್ನು ಇಲ್ಲಿ ಕೊಡಲಾಗಿದೆ. ಈ ಪುಸ್ತಕವು ಸದ್ಯದಲ್ಲಿಯೇ ಭಾಷಾ ಪ್ರಕಾಶನ, ಹೆಗ್ಗೋಡು ಇವರಿಂದ ಪ್ರಕಟವಾಗಲಿದೆ.

೧.೧ ನಡೆದು ಬಂದ ದಾರಿ

ಇವತ್ತು ನಾವು ಮಾತನಾಡಲು ಮತ್ತು ಬರೆಯಲು ಬಳಸುವ ಕನ್ನಡ ನುಡಿ ಯಾವ ದಾರಿಯಾಗಿ ನಡೆದು ಬಂದಿದೆ, ಎಂದರೆ ಮೂಲದ್ರಾವಿಡ ನುಡಿಯು ಒಂದು ಕವಲಿನಲ್ಲಿ ಯಾವ ರೀತಿಯ ಬದಲಾವಣೆಗಳು ನಡೆಯುವುದರ ಮೂಲಕ ಅದು 'ಹೊಸಗನ್ನಡ' ಎಂಬ ಇವತ್ತಿನ ರೂಪವನ್ನು ಪಡೆದಿದೆ ಎಂಬುದನ್ನು ತಿಳಿಯುವ ಒಂದು ಪ್ರಯತ್ನವನ್ನು ಈ ಪುಸ್ತಕದಲ್ಲಿ ಮಾಡಲಾಗಿದೆ.

ಇದಕ್ಕಾಗಿ ಕನ್ನಡವನ್ನು ಅದರೊಂದಿಗೆ 'ನಂಟಸ್ತನ'ವನ್ನು ತೋರಿಸುವ ತಮಿಳು, ಮಲಯಾಳ, ತೆಲುಗು, ತುಳು, ಗೋಂಡಿ, ಕೊಯಿ, ಕುಡುಕ್ ಮೊದಲಾದ ಬೇರೆ ಇಪ್ಪತ್ತು-ಇಪ್ಪತ್ತೈದು ದ್ರಾವಿಡ ನುಡಿಗಳೊಂದಿಗೆ ಹೋಲಿಸಿ ನೋಡಲಾಗಿದೆ. ಈ ಎಲ್ಲಾ ನುಡಿಗಳೂ 'ಮೂಲದ್ರಾವಿಡ' ಎಂಬ ಒಂದು ಮೂಲನುಡಿಯಿಂದ ಬೆಳೆದು ಬಂದಿರಬೇಕೆಂಬ ಕಲ್ಪನೆಯೇ ಈ ಪ್ರಯತ್ನಕ್ಕೆ ಅಡಿಗಲ್ಲಾಗಿದೆ.

ಬರಹ ಕನ್ನಡವನ್ನು ಈ ರೀತಿ ಅದರೊಂದಿಗೆ ನಂಟಸ್ತನವಿರುವ ಬೇರೆ ಹಲವು

ನುಡಿಗಳೊಂದಿಗೆ ಹೋಲಿಸುವುದು ಮಾತ್ರವಲ್ಲದೆ ಕನ್ನಡದ್ದೇ ಆದ ಹಲವು ಒಳನುಡಿಗಳೊಂದಿಗೂ ಹೋಲಿಸುವ ಮೂಲಕ ಕನ್ನಡ ನುಡಿ ತನ್ನತನವನ್ನು ಪಡೆದ ಮೇಲೆ ಅದರಲ್ಲಿ ಎಂತಹ ಬದಲಾವಣೆಗಳೆಲ್ಲ ನಡೆದಿವೆ ಎಂಬುದನ್ನು ಇಲ್ಲಿ ತಿಳಿಯಲು ಪ್ರಯತ್ನಿಸಲಾಗಿದೆ.

ಇದಕ್ಕಾಗಿ ಹಿಂದಿನ ಕಾಲದಿಂದ ಉಳಿದು ಬಂದಿರುವ ಶಾಸನಗಳಲ್ಲಿ ಮತ್ತು ಇತರ ಬರಹಗಳಲ್ಲಿ ಕಾಣಿಸುವ ಕನ್ನಡದ ರೂಪಗಳನ್ನು ಮತ್ತು ಇವತ್ತು ಕನ್ನಡ ನಾಡಿನ ಬೇರೆ ಬೇರೆ ಊರುಗಳಲ್ಲಿ (ಅದರಲ್ಲೂ ಮುಕ್ಯವಾಗಿ ಕರಾವಳಿ ಮತ್ತು ಒಳನಾಡುಗಳಲ್ಲಿ ಕಾಣಸುವ ಒಳನುಡಿಗಳಲ್ಲಿ) ಬಳಕೆಯಲ್ಲಿರುವ ಕನ್ನಡದ ರೂಪಗಳನ್ನು (ಎಂದರೆ ಕನ್ನಡದ 'ಒಳನುಡಿ'ಗಳನ್ನು) ಬಳಸಿಕೊಳ್ಳಲಾಗಿದೆ.

೧.೧.೧ ನುಡಿಗಳ ನಡುವಿನ ನಂಟಸ್ತಿಕೆ

ಜನರ ನಡುವೆ ಕಾಣಿಸುವ ನಂಟಸ್ತಿಕೆಯ ಹಾಗೆ ಅವರಾಡುವ ನುಡಿಗಳ ನಡುವೆಯೂ ನಂಟಸ್ತಿಕೆಗಳಿರಬಲ್ಲುವು ಎಂಬುದಾಗಿ ವಿದ್ವಾಂಸರು ಕಲ್ಪಿಸಿಕೊಂಡಿದ್ದಾರೆ. ಕೆಲವು ನುಡಿಗಳ ನಡುವೆ ಹತ್ತಿರದ ನಂಟಸ್ತಿಕೆಯಿದೆಯೆಂದು ಹೇಳಬಲ್ಲೆವು ಮತ್ತು ಬೇರೆ ಕೆಲವು ನುಡಿಗಳ ನಡುವೆ ದೂರದ ನಂಟಸ್ತಿಕೆಯಿದೆಯೆಂದು ಹೇಳಬಲ್ಲೆವು.

ಆದರೆ ಇನ್ನು ಕೆಲವು ನುಡಿಗಳ ನಡುವೆ ಯಾವ ರೀತಿಯ ನಂಟಸ್ತಿಕೆಯೂ ಇದೆಯೆಂದು ಹೇಳಲು ಸಾದ್ಯವಾಗುವುದಿಲ್ಲ. ಹಾಗೆ ಹೇಳಲು ಯಾವ ರೀತಿಯ ಆದಾರವೂ ದೊರಕದಿರುವುದೇ ಇದಕ್ಕೆ ಕಾರಣ.

ಉದಾಹರಣೆಗಾಗಿ, ಕನ್ನಡಕ್ಕೆ ತಮಿಳು ನುಡಿಯೊಂದಿಗೆ ಹತ್ತಿರದ ನಂಟಸ್ತಿಕೆಯಿದೆಯೆಂದು ಮತ್ತು ತೆಲುಗು ನುಡಿಯೊಂದಿಗೆ ಇದಕ್ಕಿಂತ ಸ್ವಲ್ಪ ದೂರದ ನಂಟಸ್ತಿಕೆಯಿದೆಯೆಂದು ಹೇಳಬಲ್ಲೆವು.

ಆದರೆ ಸಂಸ್ಕ್ರುತದೊಂದಿಗೆ ಕನ್ನಡಕ್ಕೆ ಯಾವ ರೀತಿಯ ನಂಟಸ್ತಿಕೆಯೂ ಇದೆಯೆಂದು ಹೇಳಲು ಸಾದ್ಯವಾಗುವುದಿಲ್ಲ. ಇದಕ್ಕೆ ಕಾರಣವೇನೆಂದರೆ, ಆ ಎರಡು ನುಡಿಗಳ ನಡುವೆ ನಂಟಸ್ತಿಕೆಯಿದೆಯೆಂದು ಹೇಳಲು ಬೇಕಾಗುವ ಯಾವ ಆದಾರವೂ ನಮಗೆ ಸಿಗುವುದಿಲ್ಲ.

ಹತ್ತಿರದ ಇಲ್ಲವೇ ದೂರದ ನಂಟಸ್ತಿಕೆಯಿರುವ ನುಡಿಗಳೆಲ್ಲ ಒಂದು ಮೂಲನುಡಿಯಿಂದ ಅದು ಬೇರೆ ಬೇರೆ ದಿಕ್ಕುಗಳಲ್ಲಿ ಬದಲಾದುದರಿಂದಾಗಿ ಉಂಟಾದವುಗಳೆಂದು ಕಲ್ಪಿಸಲಾಗುತ್ತದೆ. ಕನ್ನಡ, ತಮಿಳು, ಮಲಯಾಳ, ತೆಲುಗು ಮೊದಲಾದುವಕ್ಕೆ 'ಮೂಲದ್ರಾವಿಡ' ಎಂಬ ಮೂಲನುಡಿಯನ್ನು ಕಲ್ಪಿಸಿಕೊಂಡಿರುವ

ಹಾಗೆ ಸಂಸ್ಕೃತಕ್ಕೆ (ಮತ್ತು ಅದರೊಂದಿಗೆ ಹತ್ತಿರದ ನಂಟಸ್ತಿಕೆಯಿರುವ ಹಿಂದಿ, ಮರಾಟಿ, ಗುಜರಾತಿ, ಬಂಗಾಲಿ, ಒಡಿಯಾ ಮೊದಲಾದವುಗಳಿಗೆ ಮತ್ತು ದೂರದ ನಂಟಸ್ತಿಕೆಯಿರುವ ಇಂಗ್ಲಿಶ್, ರಶ್ಯನ್, ಜರ್ಮನ್, ಅಯ್ರಿಶ್, ಮೊದಲಾದವುಗಳಿಗೆ) 'ಮೂಲ ಇಂಡೋ- ಯುರೋಪಿಯನ್' ಎಂಬ ಮೂಲನುಡಿಯನ್ನು ಕಲ್ಪಿಸಿಕೊಳ್ಳಲಾಗಿದೆ.

೧.೧.೨ ಒಡೆದುಕೊಳ್ಳುವ ವಿದಾನಗಳು

ಎರಡು ನುಡಿಗಳ ನಡುವೆ ಕಾಣಿಸುವ ವ್ಯತ್ಯಾಸಗಳು ಒಂದು ವಿಶಿಶ್ಟವಾದ ರೂಪದಲ್ಲಿದೆಯಾದರೆ ಮಾತ್ರ ಅವನ್ನು ಈ ರೀತಿ ಒಂದೇ ಮೂಲನುಡಿಯಿಂದ ಬದಲಾಗಿ ಬಂದವುಗಳೆಂಬುದಾಗಿ ಕಲ್ಪಿಸಿಕೊಳ್ಳಬಲ್ಲೆವು.

ಅದಕ್ಕಾಗಿ ಈ ವ್ಯತ್ಯಾಸ ಯಾವ ರೀತಿ ಇರಬೇಕು ಎಂಬುದನ್ನು ಸರಿಯಾಗಿ ತಿಳಿದುಕೊಳ್ಳಬೇಕಿದ್ದಲ್ಲಿ ಮೊದಲಿಗೆ ಒಂದು ನುಡಿ ಎರಡು (ಇಲ್ಲವೇ ಅದಕ್ಕಿಂತ ಹೆಚ್ಚು) ನುಡಿಗಳಾಗಿ ಬದಲಾಗುವುದು, ಇಲ್ಲವೇ ಒಡೆದುಕೊಳ್ಳುವುದು ಹೇಗೆ ಎಂಬುದನ್ನು ತಿಳಿಯುವುದು ಅವಶ್ಯ.

೧. ಒಂದು ಊರಿನಲ್ಲಿರುವ ಜನರಲ್ಲಿ ಕೆಲವರು ದೂರದಲ್ಲಿರುವ ಬೇರೊಂದು ಊರಿಗೆ ಹೋಗಿ ನೆಲೆಸಿದರಾದರೆ, ಅವರಿಗೂ ಹಿಂದೆ ಉಳಿದವರಿಗೂ ನಡುವಿದ್ದ ಸಂಪರ್ಕ ಪೂರ್ತಿ ಕಡಿದುಹೋಗುತ್ತದೆ ಮತ್ತು ಇದರಿಂದಾಗಿ ಅವರು ಬಳಸುವ ನುಡಿಯಲ್ಲಿ ಹಿಂದೆ ಉಳಿದವರ ನುಡಿಯಲ್ಲಿ ನಡೆಯುವ ಬದಲಾವಣೆಗಳಿಗಿಂತ ತೀರ ಬೇರಾಗಿರುವ ಬದಲಾವಣೆಗಳು ನಡೆಯತೊಡಗುತ್ತವೆ.

ಇದರಿಂದಾಗಿ, ಆ ಎರಡು ಊರುಗಳಲ್ಲಿ ನೆಲೆಸಿರುವ ಜನರ ನುಡಿ ಮೊದಲಿಗೆ ಒಂದು ಇದ್ದುದು ಸಮಯ ಕಳೆದಂತೆ ಎರಡಾಗಿ ಒಡೆದುಕೊಳ್ಳುತ್ತದೆ ಮತ್ತು ಅನಂತರ ಈ ಎರಡು ಒಳನುಡಿಗಳು ಎರಡು ಸ್ವತಂತ್ರವಾದ ನುಡಿಗಳೆನಿಸುತ್ತವೆ.

ಉದಾಹರಣೆಗಾಗಿ, ಕನ್ನಡ ನುಡಿಯನ್ನಾಡುತ್ತಿದ್ದ ಕೆಲವು ಜನರು ಸುಮಾರು ನಾನೂರು ವರ್ಶಗಳಶ್ಟು ಹಿಂದೆ ಮಯ್ಸೂರನ್ನು ಬಿಟ್ಟು ನೀಲಗಿರಿಯಲ್ಲಿ ಹೋಗಿ ನೆಲೆಸಿರಬೇಕು ಮತ್ತು ಅನಂತರ ಅವರಿಗೂ ಮಯ್ಸೂರಿನ ಕನ್ನಡಿಗರಿಗೂ ನಡುವಿದ್ದ ಸಂಪರ್ಕ ಪೂರ್ತಿ ತಪ್ಪಿಹೋಗಿರಬೇಕು.

ಈ ರೀತಿ ಸಂಪರ್ಕ ತಪ್ಪಿಹೋದುದರಿಂದಾಗಿ ಮಯ್ಸೂರಿನಲ್ಲೇ ಉಳಿದಿದ್ದ ಕನ್ನಡಿಗರ ನುಡಿಯಲ್ಲಿ ನಡೆದ ಬದಲಾವಣೆಗಳಿಗಿಂತ ತೀರ ಬೇರಾಗಿರುವ ಹಲವು ಬದಲಾವಣೆಗಳು ನೀಲಗಿರಿಯಲ್ಲಿ ನೆಲಸಿದವರ ನುಡಿಯಲ್ಲಿ ನಡೆದಿರಬೇಕು ಮತ್ತು

ಇದರಿಂದಾಗಿ ನೀಲಗಿರಿಯಲ್ಲಿ ನೆಲಸಿದವರ ಕನ್ನಡ ಮಾತು ಬಡಗ ಎಂಬ ಹೆಸರಿನ ಬೇರೆಯೇ ಒಂದು ಒಳನುಡಿಯಾಗಿ ಬದಲಾಗಿರಬೇಕು.

ಕೆಲವರ ಅಬಿಪ್ರಾಯದಂತೆ ಬಡಗ ಎಂಬುದು ಇವತ್ತು ಕನ್ನಡಕ್ಕಿಂತ ಬೇರಾಗಿರುವ ಒಂದು ಸ್ವತಂತ್ರವಾದ ನುಡಿಯಾಗಿದೆ (ಹೋಕಿಂಗ್ಸ್ ಮತ್ತು ಪಯ್ಲಟ್-ರಯ್ಚೂರ್ ೧೯೭೨ ನೋಡಿ).

೨. ಒಂದು ನುಡಿಯನ್ನಾಡುವ ಜನರು ವಿಸ್ತಾರವಾದ ಒಂದು ಪ್ರದೇಶದಲ್ಲಿ ನೆಲೆಸಿರುವವರಾದರೆ, ಅದರ ಬೇರೆ ಬೇರೆ ಬಾಗಗಳಲ್ಲಿ ಬೇರೆ ಬೇರೆ ರೀತಿಯ ಬದಲಾವಣೆಗಳು ನಡೆಯಬಲ್ಲುವು. ಆ ಬಾಗಗಳಲ್ಲಿ ನೆಲೆಸಿದ ಜನರ ನಡುವೆ ಎಂತಹ ಸಂಪರ್ಕವಿತ್ತು ಎಂಬುದರ ಮೇಲೆ ಇದು ಅವಲಂಬಿಸಿದೆ.

ಉದಾಹರಣೆಗಾಗಿ, ಕನ್ನಡವನ್ನಾಡುವ ಪ್ರದೇಶವನ್ನು 'ಕರಾವಳಿ' ಮತ್ತು 'ಒಳನಾಡು' ಎಂಬುದಾಗಿ ಮತ್ತು ಒಳನಾಡನ್ನು 'ಬಡಗು ಒಳನಾಡು' ಮತ್ತು 'ತೆಂಕು ಒಳನಾಡು' ಎಂಬುದಾಗಿ ವಿಂಗಡಿಸಬಲ್ಲೆವು. ಇವುಗಳಲ್ಲಿ ಕರಾವಳಿ ಮತ್ತು ಒಳನಾಡುಗಳ ನಡುವೆ ದುರ್ಗಮವಾದ ಪಶ್ಚಿಮಗಟ್ಟಗಳು ತಡೆಯಾಗಿ ನಿಂತಿವೆ ಮತ್ತು ಈ ತಡೆಯಿಂದಾಗಿ ಆ ಎರಡು ಬಾಗಗಳಲ್ಲಿ ನೆಲೆಸಿದ್ದ ಜನರ ನಡುವೆ ಹಿಂದಿನ ಕಾಲದಲ್ಲಿ ಬಹಳ ಕಡಿಮೆ ಸಂಪರ್ಕವಿದ್ದಿರಬೇಕು.

ಬಡಗು ಮತ್ತು ತೆಂಕು ಒಳನಾಡುಗಳ ನಡುವೆ ಇಂತಹ ದುರ್ಗಮವಾದ ತಡೆಯಿಲ್ಲವಾದರೂ, ಅವುಗಳ ಎರಡು ತುದಿಗಳ ನಡುವಿರುವ ಅಂತರದಿಂದಾಗಿ ಸಂಪರ್ಕಕ್ಕೆ ಸ್ವಲ್ಪಮಟ್ಟಿಗಿನ ತಡೆ ಬಂದಿರಬೇಕು.

ಕರಾವಳಿ ಮತ್ತು ಒಳನಾಡುಗಳ ನಡುವೆ ಸಂಪರ್ಕ ಬಹಳ ಕಡಿಮೆಯಿದ್ದುದರಿಂದಾಗಿ, ಕರಾವಳಿಯ ಕನ್ನಡಿಗರ ನುಡಿಯಲ್ಲಿ ನಡೆದ ಹಲವು ಬದಲಾವಣೆಗಳು ಒಳನಾಡಿನ ಕನ್ನಡಿಗರ ನುಡಿಯಲ್ಲಿ ನಡೆಯಲಿಲ್ಲ ಮತ್ತು ಒಳನಾಡಿನಲ್ಲಿ ನಡೆದ ಹಲವು ಬದಲಾವಣೆಗಳು ಕರಾವಳಿಯಲ್ಲಿ ನಡೆಯಲಿಲ್ಲ (೧.೨.೪ ನೋಡಿ).

ಇದರಿಂದಾಗಿ ಇವತ್ತು ಕರಾವಳಿಯ ಕನ್ನಡ ಮತ್ತು ಒಳನಾಡಿನ ಕನ್ನಡಗಳ ನಡುವೆ ಒಂದು ನಿಶ್ಚಿತವಾದ ಗಡಿಯಿರುವುದನ್ನು ಕಾಣಬಹುದು. ಕರಾವಳಿಯಿಂದ ಒಳನಾಡಿನ ಬಡಗು ಇಲ್ಲವೇ ತೆಂಕು ಕರ್ನಾಟಕದ ಕಡೆಗಾಗಿ ಸಂಚರಿಸಿದಾಗ, ಪಶ್ಚಿಮಗಟ್ಟಗಳನ್ನು ದಾಟುತ್ತಿದ್ದಂತೆ ಒಮ್ಮೆಗೇನೇ ಕರಾವಳಿಯ ಒಳನುಡಿ ಮುಗಿದು ಒಳನಾಡಿನ ಒಳನುಡಿ ಸುರುವಾಗುವುದು ಕಾಣಿಸುತ್ತದೆ.

ಇದಕ್ಕೆ ಬದಲು, ಒಳನಾಡಿನ ಬಡಗು ಮತ್ತು ತೆಂಕು ಒಳನುಡಿಗಳ ನಡುವೆ

ಇಂತಹ ಒಂದು ನಿಶ್ಚಿತವಾದ ಗಡಿಯನ್ನು ಕಾಣಲು ಸಾದ್ಯವಾಗುವುದಿಲ್ಲ. ಅವು ಬಡಗಿನಿಂದ ತೆಂಕಕ್ಕೆ ಹಂತ ಹಂತವಾಗಿ ಬೇರಾಗುತ್ತಾ ಹೋಗುತ್ತವೆ. ಅವುಗಳ ನಡುವಿನ ಯಾವುದೇ ಒಂದು ಊರಲ್ಲಿ ಬಡಗು ಕನ್ನಡದ ಒಳನುಡಿ ಮುಗಿದು ತೆಂಕು ಕನ್ನಡದ ಒಳನುಡಿ ಸುರುವಾಗುತ್ತಿದೆಯೆಂದು ನಿಶ್ಚಿತವಾಗಿ ಹೇಳಲು ಸಾದ್ಯವಾಗುವುದಿಲ್ಲ.

ಮೇಲೆ ಸೂಚಿಸಿದ ಹಾಗೆ, ಒಳನಾಡಿನಲ್ಲಿ ಬಡಗು ಮತ್ತು ತೆಂಕು ಕರ್ನಾಟಕಗಳ ನಡುವೆ ದುರ್ಗಮವಾದ ತಡೆ ಯಾವುದೂ ಇಲ್ಲದಿರುವುದೇ ಈ ರೀತಿ ಆ ಎರಡು ಒಳನುಡಿಗಳ ನಡುವೆ ನಿಶ್ಚಿತವಾದ ಗಡಿಯಿಲ್ಲದಿರಲು ಕಾರಣ. ಬರಿಯ ಅಂತರ ಮಾತ್ರವೇ ಅವನ್ನು ಬೇರ್ಪಡಿಸಬಲ್ಲುದು. ಹಾಗಾಗಿ, ಒಳನಾಡಿನ ಜನರ ನುಡಿಯಲ್ಲಿ ನಡೆದ ಬದಲಾವಣೆಗಳ ಹರಹು ಬೇರೆಯೇ ಒಂದು ರೂಪದಲ್ಲಿದೆ.

ಅವುಗಳಲ್ಲಿ ನಡೆದ ಕೆಲವು ಬದಲಾವಣೆಗಳು ಇಡೀ ಒಳನಾಡನ್ನೇ ವ್ಯಾಪಿಸಿವೆಯಾದರೆ, ಬೇರೆ ಕೆಲವು ಬದಲಾವಣೆಗಳು ಬಡಗು ಪ್ರದೇಶದಲ್ಲಿ ಮಾತ್ರ ನಡೆದಿವೆ ಇಲ್ಲವೇ ತೆಂಕು ಪ್ರದೇಶದಲ್ಲಿ ಮಾತ್ರ ನಡೆದಿವೆ. ಇನ್ನು ಕೆಲವು ಬದಲಾವಣೆಗಳು ಇವೆರಡರ ನಡುವಿನ ಪ್ರದೇಶದಲ್ಲಿ ಮಾತ್ರ ನಡೆದಿವೆ. ಇದರಿಂದಾಗಿ ಇವತ್ತು ಕನ್ನಡದ ಒಳನಾಡಿನ ಒಳನುಡಿಗಳು ಊರಿಂದೂರಿಗೆ ಹಂತ ಹಂತವಾಗಿ ಬೇರಾಗುತ್ತಿರುವುದನ್ನು ಕಾಣಬಹುದು.

ಮೂಲದ್ರಾವಿಡವೆಂಬ ಒಂದು ನುಡಿ ಕನ್ನಡ ಮತ್ತು ಅದರೊಂದಿಗೆ ನಂಟಸ್ತಿಕೆಯನ್ನು ತೋರಿಸುವ ತಮಿಳು, ಮಲಯಾಳ, ತೆಲುಗು, ತುಳು, ಕೊಡಗು, ಗೋಂಡಿ, ಕುಡುಕ್ ಮೊದಲಾದ ಸುಮಾರು ಇಪ್ಪತ್ತಾರು ದ್ರಾವಿಡ ನುಡಿಗಳಾಗಿ ಒಡೆದುಕೊಳ್ಳಲು ಮೇಲೆ ವಿವರಿಸಿದ ಎರಡು ರೀತಿಯ ವಿದಾನಗಳಲ್ಲಿ ಯಾವುದು ಕಾರಣವಿರಬಹುದು ಎಂಬುದನ್ನು ಈಗ ಹೇಳುವುದು ಕಶ್ಟ. ಈ ಎರಡು ರೀತಿಯ ವಿದಾನಗಳೂ ಒಟ್ಟಾಗಿ ಇದಕ್ಕೆ ಕಾರಣವಾಗಿರಬಹುದು.

ಉದಾಹರಣೆಗಾಗಿ, ಇವತ್ತು ಬಲೂಚಿಸ್ತಾನ (ಪಾಕಿಸ್ತಾನ)ದಲ್ಲಿ ನೆಲೆಸಿರುವ ಬ್ರಾಹುಯೀ ಜನಾಂಗದ ನುಡಿ ಒಂದು ಸ್ವತಂತ್ರ ನುಡಿಯಾಗಿ ಬದಲಾಗಲು ಅದನ್ನಾಡುವ ಜನರು ಬಾರತದಿಂದ ಬಲೂಚಿಸ್ತಾನಕ್ಕೆ ವಲಸೆ ಹೋದುದೇ ಕಾರಣವಾಗಿರಬಹುದು. ಆದರೆ, ತಮಿಳು ಮತ್ತು ಮಲಯಾಳ ನುಡಿಗಳು ಎರಡು ಸ್ವತಂತ್ರ ನುಡಿಗಳಾಗಿ ಬದಲಾಗಲು ಅಂತಹ ವಲಸೆಗಿಂತಲೂ ಅವನ್ನಾಡುವ ಜನರು ವಾಸಿಸುವ ಜಾಗಗಳ ನಡುವಿರುವ ಅಂತರವೇ ಕಾರಣವಿರಬೇಕು.

೧.೧.೩ ಮೂಲನುಡಿಯ ಕಲ್ಪನೆ

ಎರಡು ನುಡಿಗಳು ಒಂದೇ ಮೂಲನುಡಿಯಿಂದ ಬೆಳೆದುಬಂದಿವೆಯೆಂದು ವಾದಿಸಬೇಕಿದ್ದಲ್ಲಿ ಅವುಗಳ ನಡುವೆ ಎಂತಹ ವ್ಯತ್ಯಾಸಗಳಿರಬೇಕು ಎಂಬುದು ಮೇಲಿನ ವಿವರಣೆಯಿಂದ ಸ್ಪಷ್ಟವಾಗುತ್ತದೆ. ಆ ವ್ಯತ್ಯಾಸಗಳೆಲ್ಲ ಮೂಲನುಡಿಯನ್ನಾಡುತ್ತಿದ್ದ ಎರಡು ಗುಂಪುಗಳಲ್ಲಿ ಬೇರ ಬೇರ ರೀತಿಯ ಬದಲಾವಣೆಗಳು ನಡೆದುದರಿಂದಾಗಿ ಮೂಡಿಬಂದಿವೆ ಎಂಬುದಾಗಿ ತೋರಿಸಿಕೊಡಲು ಸಾಧ್ಯವಿದ್ದಲ್ಲಿ ಮಾತ್ರ ಆ ಎರಡು ನುಡಿಗಳು ಒಂದೇ ಮೂಲನುಡಿಯಿಂದ ಬೆಳೆದುಬಂದಿವೆಯೆಂಬುದಾಗಿ ವಾದಿಸಲು ಸಾಧ್ಯವಾಗುತ್ತದೆ.

ಉದಾಹರಣೆಗಾಗಿ. ಕನ್ನಡ ಮತ್ತು ತಮಿಳು ನುಡಿಗಳು ತೆಂಕುದ್ರಾವಿಡವೆಂಬ ಮೂಲನುಡಿಯಿಂದ ಬೆಳೆದುಬಂದಿವೆಯೆಂಬುದಾಗಿ ವಾದಿಸಲು ನಮಗೆ ಸಾಧ್ಯವಾಗಿದೆ. ಎಂದರೆ, ಈ ಎರಡು ನುಡಿಗಳ ನಡುವೆ ಕಾಣಿಸುವ ವ್ಯತ್ಯಾಸಗಳೆಲ್ಲ ಕಲ್ಪಿತವಾಗಿರುವ ತೆಂಕುದ್ರಾವಿಡವೆಂಬ ಮೂಲನುಡಿಯ ಎರಡು ಕವಲುಗಳಲ್ಲಿ ಬೇರ ಬೇರ ರೀತಿಯ ಬದಲಾವಣೆಗಳು ನಡೆದುದರಿಂದಾಗಿ ಮೂಡಿಬಂದಿವೆಯೆಂಬುದಾಗಿ ತೋರಿಸಿಕೊಡಲು ಸಾಧ್ಯವಾಗಿದ.

ಈ ಮೂಲನುಡಿಯನ್ನಾಡುತ್ತಿದ್ದ ಜನರ ಒಂದು ಗುಂಪಿನಲ್ಲಿ ಒಂದು ರೀತಿಯ ಬದಲಾವಣೆಗಳಾದುದರಿಂದಾಗಿ ಕನ್ನಡ ನುಡಿ ಸಿದ್ಧವಾಗಿದೆ ಮತ್ತು ಇನ್ನೊಂದು ಗುಂಪಿನಲ್ಲಿ ಬೇರೆಯೇ ಒಂದು ರೀತಿಯ ಬದಲಾವಣೆಗಳಾದುದರಿಂದಾಗಿ ತಮಿಳು ನುಡಿ ಸಿದ್ಧವಾಗಿದ ಎಂಬುದಾಗಿ ತೋರಿಸಿಕೊಡಲು ಸಾಧ್ಯವಾಗಿದೆ.

ಇದೇ ರೀತಿಯಲ್ಲಿ ತೆಲುಗು, ಕೊಡಗು, ತುಳು ಮೊದಲಾದ ಇತರ ದ್ರಾವಿಡ ನುಡಿಗಳೂ ಮೂಲದ್ರಾವಿಡ ನುಡಿಯನ್ನಾಡುತ್ತಿದ್ದ ಜನರ ಬೇರೆ ಬೇರೆ ಕವಲುಗಳಲ್ಲಿ ಬೇರ ಬೇರೆ ರೀತಿಯ ಬದಲಾವಣೆಗಳು ನಡೆದುದರಿಂದಾಗಿ ಮೂಡಿಬಂದಿವೆಯೆಂಬುದಾಗಿ ತೋರಿಸಿಕೊಡಲು ಸಾಧ್ಯವಾಗಿದ.

೧.೧.೪ ವ್ಯತ್ಯಾಸ ಮತ್ತು ಸಾಮ್ಯ

ನುಡಿಗಳ ನಡುವಿನ ನಂಟಸ್ತನ ಈ ರೀತಿ ಅವುಗಳ ನಡುವಿರುವ ವ್ಯತ್ಯಾಸಗಳು ಎಂತಹವು ಎಂಬುದನ್ನು ಅವಲಂಬಿಸಿದೆಯಲ್ಲದೆ ಅವುಗಳ ನಡುವೆ ಎಂತಹ ಸಾಮ್ಯವಿದೆ ಇಲ್ಲವೇ ಎಷ್ಟು ಸಾಮ್ಯವಿದೆ ಎಂಬುದನ್ನು ಅವಲಂಬಿಸಿಲ್ಲ. ನುಡಿಗಳ ನಡುವಿರುವ ನಂಟಸ್ತಿಕೆ ಎಷ್ಟು ಹತ್ತಿರದ್ದು ಇಲ್ಲವೇ ಎಷ್ಟು ದೂರದ್ದು ಎಂಬ ವಿಶಯದಲ್ಲಿ ಇದೊಂದು ಅತ್ಯಂತ ಪ್ರಾಮುಕ್ಯವಾದ ಸಂಗತಿ. ಆದರೆ ಹೆಚ್ಚಿನವರು ಇದನ್ನು ಸರಿಯಾಗಿ ಅರ್ತಮಾಡಿ ಕೊಂಡಿರುವುದಿಲ್ಲ.

ಕನ್ನಡ ಮತ್ತು ಸಂಸ್ಕೃತ ನುಡಿಗಳ ನಡುವೆ ಹಲವು ರೀತಿಯ ಸಾಮ್ಯಗಳನ್ನು ಕಾಣಬಲ್ಲೆವು. ಕರ್ಣ – ಕಿವಿ, ಮುಖ – ಮೋರೆ, ಮೊದಲಾದ ಹಲವು ಸಂಸ್ಕೃತ-ಕನ್ನಡ ಪದಗಳ ನಡುವೆ ಸಾಮ್ಯವಿದೆಯೆಂದು ತೋರಬಹುದು; ವ್ಯಾಕರಣದಲ್ಲೂ ಇಂತಹ ಕೆಲವು ಸಾಮ್ಯಗಳನ್ನು ಈ ಎರಡು ನುಡಿಗಳ ನಡುವೆ ಕಾಣಲು ಕಶ್ಟವಾಗದು. ಆದರೆ ಈ ಸಾಮ್ಯಗಳನ್ನವಲಂಬಿಸಿ ಸಂಸ್ಕೃತ ಮತ್ತು ಕನ್ನಡ ನುಡಿಗಳ ನಡುವೆ ನಂಟಸ್ತಿಕೆಯಿದೆಯೆಂದಾಗಲಿ ಇಲ್ಲವೇ ಕನ್ನಡ ಸಂಸ್ಕೃತದಿಂದ ಬೆಳೆದು ('ವಿಕ್ರುತ'ಗೊಂಡು) ಬಂದಿದೆಯೆಂದಾಗಲಿ ವಾದಿಸಲು ಸಾದ್ಯವಾಗದು.

ಇದಕ್ಕೆ ಕಾರಣವೇನೆಂದರೆ, ಎರಡು ನುಡಿಗಳ ನಡುವಿನ ಸಾಮ್ಯಕ್ಕೆ ಹಲವು ಕಾರಣಗಳಿರಬಹುದು. ಅವುಗಳೊಳಗ ಹಲವು ಶತಮಾನಗಳ ಸಂಪರ್ಕವಿದೆಯಾದಲ್ಲಿ ಅವುಗಳಲ್ಲಿ ಒಂದು ಇನ್ನೊಂದರಿಂದ ಹಲವಾರು ಪದಗಳನ್ನು ಇಲ್ಲವೇ ವ್ಯಾಕರಣಾಂಶ ಗಳನ್ನು ಎರವಲಾಗಿ ಪಡೆದಿರಲು ಸಾದ್ಯವಿದ್ದು, ಅದರಿಂದಾಗಿ ಅವುಗಳ ನಡುವೆ ಸಾಮ್ಯ ಕಾಣಿಸಬಲ್ಲುದು.

ಇದಲ್ಲದೆ, ನುಡಿಗಳ ನಡುವಿನ ಸಾಮ್ಯ ಆಕಸ್ಮಿಕವಾದುದಾಗಿರಲೂ ಸಾದ್ಯವಿದೆ. ಎಲ್ಲಾ ನುಡಿಗಳೂ ಮಾನವನ ವಿಕಾಸದ ಒಂದು ಅಂಗವಾಗಿ ಮೂಡಿಬಂದಿವೆಯಾದ ಕಾರಣ, ಅವುಗಳ ನಡುವೆ ಅಂತಹ ಸಾಮ್ಯ ಕಾಣಿಸುವುದರಲ್ಲಿ ಅಚ್ಚರಿಯೇನಿಲ್ಲ.

ಆದರೆ ನುಡಿಗಳ ನಡುವಿನ ನಂಟಸ್ತಿಕೆಯೆಂಬುದು ಒಂದು ಮೂಲನುಡಿಯಲ್ಲಿ ಬೇರೆ ಬೇರೆ ರೀತಿಯ ಬದಲಾವಣೆಗಳಾದುದರಿಂದಾಗಿ ಅದು ಹೇಗೆ ಹಲವು ನುಡಿಗಳಾಗಿ ಒಡೆದುಕೊಂಡಿದೆಯೆಂಬುದನ್ನು ತಿಳಿಸಬೇಕಾಗಿದೆಯಾದ ಕಾರಣ, ಅದಕ್ಕೆ ನುಡಿಗಳ ನಡುವಿನ ಸಾಮ್ಯವನ್ನು ಆದಾರವಾಗಿ ಕೊಡಲು ಸಾದ್ಯವಾಗುವುದಿಲ್ಲ. ಆ ನುಡಿಗಳ ನಡುವಿನ ವ್ಯತ್ಯಾಸಗಳನ್ನೆಲ್ಲ ಒಂದೇ ಮೂಲನುಡಿಯ ಎರಡು ಬೇರೆ ಬೇರೆ ಕವಲುಗಳಲ್ಲಿ ನಡೆದ ಬದಲಾವಣೆಗಳ ಪಲ ಎಂಬುದಾಗಿ ತೋರಿಸಿಕೊಡಲು ಸಾದ್ಯವಾಗುವುದೊಂದೇ ಅದಕ್ಕೆ ಆದಾರವಾಗಬಲ್ಲುದು.

೧.೨ ದ್ರಾವಿಡ ನುಡಿಗಳು

ಒಂದರೊಡನೊಂದು ನಂಟಸ್ತನವನ್ನು ತೋರಿಸುವ (ಎಂದರೆ ಒಂದೇ ಮೂಲನುಡಿ ಯಿಂದ ಬದಲಾಗಿ ಬಂದಿರುವ) ನುಡಿಗಳನ್ನೆಲ್ಲ ಒಟ್ಟಿಗೆ ಒಂದು 'ನುಡಿಕುಟುಂಬ' ವೆಂಬುದಾಗಿ ಪರಿಗಣಿಸಲಾಗುತ್ತದೆ.

ಕನ್ನಡ, ತಮಿಳು, ತೆಲುಗು, ಮಲಯಾಳ ಮೊದಲಾದ ನುಡಿಗಳು 'ದ್ರಾವಿಡ' ಎಂಬ ಒಂದು ನುಡಿಕುಟುಂಬಕ್ಕೆ ಸೇರಿದವುಗಳೆಂಬುದನ್ನು ಮೊದಲಿಗೆ ತೋರಿಸಿ

ಕೊಟ್ಟವರು ರೋಬರ್ಟ್ ಕಾಲ್ಡ್ವೆಲ್ (ಕಾಲ್ಡ್ವೆಲ್ ೧೮೫೬). ಅವರ ಅನಂತರ ಈ ನುಡಿಕುಟುಂಬದ ಮೇಲೆ ಮತ್ತು ಅದಕ್ಕೆ ಸೇರಿದ ನುಡಿಗಳ ಮೇಲೆ ಹಲವು ಮಂದಿ ವಿದ್ವಾಂಸರು ಸಂಶೋದನೆಗಳನ್ನು ನಡೆಸಿದ್ದಾರೆ ಮತ್ತು ಈ ಸಂಶೋದನೆಗಳ ಮೂಲಕ ಈ ವಿಶಯ ಇನ್ನಶ್ಟು ಸ್ಪಶ್ಟ ಮತ್ತು ಕಚಿತವಾಗುವ ಹಾಗೆ ಮಾಡಿದ್ದಾರೆ.

ಒಟ್ಟು ಇಪ್ಪತ್ತಾರಕ್ಕಿಂತಲೂ ಹೆಚ್ಚು ನುಡಿಗಳು ಈ ನುಡಿಕುಟುಂಬಕ್ಕೆ ಸೇರುತ್ತವೆ. ಮೇಲೆ ಸೂಚಿಸಿದ ಹಾಗೆ, ಮೊದಲಿಗೆ ಈ ದ್ರಾವಿಡ ಜನರಲ್ಲಿ ಒಂದೇ ಒಂದು ಮೂಲನುಡಿ ಬಳಕೆಯಲ್ಲಿದ್ದಿರಬೇಕು; ಅನಂತರ ಅದನ್ನಾಡುವ ಈ ಜನರು ಬೇರೆ ಬೇರೆ ಊರುಗಳಿಗೆ ಹೋಗಿ ನೆಲೆಸಿದುದರಿಂದಾಗಿ (ಇಲ್ಲವೇ ಒಂದು ವಿಶಾಲವಾದ ಜಾಗದಲ್ಲಿ ನೆಲೆಸಿದುದರಿಂದಾಗಿ), ಅವರ ಮಾತಿನಲ್ಲಿ ಸಮಯದಿಂದ ಸಮಯಕ್ಕೆ ನಡೆದ ಬದಲಾವಣೆಗಳು ಬೇರೆ ಬೇರೆ ಊರುಗಳಲ್ಲಿ ಬೇರೆ ಬೇರೆ ದಿಕ್ಕುಗಳನ್ನು ಹಿಡಿದಿರಬೇಕು; ಮತ್ತು ಇದರಿಂದಾಗಿ, ಆ ಮೂಲ ನುಡಿ ಹಲವು ನುಡಿಗಳಾಗಿ ಒಡೆದಿರಬೇಕು ಎಂಬುದು ವಿದ್ವಾಂಸರ ಕಲ್ಪನೆಯಾಗಿದೆ.

ಮೊದಲಿಗೆ ಇದ್ದಿರಬಹುದಾದ ಈ ಮೂಲನುಡಿಯನ್ನು 'ಮೂಲದ್ರಾವಿಡ' ಎಂದು ಕರೆಯಲಾಗಿದೆ. ಅದು ತೆಂಕುದ್ರಾವಿಡ, ನಡುದ್ರಾವಿಡ ಮತ್ತು ಬಡಗುದ್ರಾವಿಡ ಎಂಬ ಮೂರು ಕವಲುಗಳಾಗಿ ಒಡೆದಿದ್ದು, ಅವುಗಳಲ್ಲಿ ತೆಂಕುದ್ರಾವಿಡವೆಂಬ ಕವಲಿನಿಂದ ಕನ್ನಡ ನುಡಿ ಬೆಳೆದು ಬಂದಿರಬೇಕು ಎಂಬುದು ಇವತ್ತಿನ ಹಲವು ವಿದ್ವಾಂಸರ ಕಲ್ಪನೆಯಾಗಿದೆ.

೧.೨.೧ ಇವತ್ತಿನ ದ್ರಾವಿಡ ನುಡಿಗಳು

ತೆಂಕುದ್ರಾವಿಡ ಕವಲಿನಿಂದ ಕನ್ನಡ ನುಡಿ (ಜನಸಂಕ್ಯೆ: ಮೂರು ಕೋಟಿ) ಮಾತ್ರವಲ್ಲದೆ, ತಮಿಳು (ಅಯ್ದು ಕೋಟಿ), ಮಲಯಾಳ (ಮೂರು ಕೋಟಿ), ಕೊಡಗು (೯೩ ಸಾವಿರ), ತೊದ (೧,೬೦೦), ಕೋತ (೧,೯೦೦), ಇರುಳ (೫,೨೦೦) ಮತ್ತು ಕುಱುಂಬ (೫೦೦೦) ಎಂಬ ಬೇರೆ ಏಳು ನುಡಿಗಳೂ ಬೆಳೆದು ಬಂದಿವೆ. ಇವುಗಳಲ್ಲಿ ಕೊನೆಯ ನಾಲ್ಕು ನುಡಿಗಳು (ತೊದ, ಕೋತ, ಇರುಳ ಮತ್ತು ಕುಱುಂಬ) ನೀಲಗಿರಿಯ ಗುಡ್ಡಕಾಡುಗಳಲ್ಲಿ ಬಳಕೆಯಲ್ಲಿವೆ.

ಇದಲ್ಲದೆ ಕರ್ನಾಟಕದ ಕರಾವಳಿಯಲ್ಲಿ ಬಳಕೆಯಲ್ಲಿರುವ ತುಳು (ಹದಿನಾರು ಲಕ್ಶ) ಮತ್ತು ಕೊರಗ (ನಾಲ್ಕು ಸಾವಿರ) ನುಡಿಗಳೂ ಈ ಕವಲಿಗೆ ಸೇರುತ್ತವೆಯೆಂದು ಸದ್ಯಕ್ಕೆ ತೀರ್ಮಾನಿಸಲಾಗಿದೆ. ಆದರೆ ಈ ವಿಶಯದಲ್ಲಿ ಕೆಲವು ಸಂದೇಹಗಳು ಇನ್ನೂ ಉಳಿದಿವೆ. ಇವುಗಳಲ್ಲಿ ತುಳುನುಡಿ ತೆಂಕುದ್ರಾವಿಡ ನುಡಿಗಳಿಂದ ಹಲವು

ವಿಶಯಗಳಲ್ಲಿ ಬೇರಾಗಿದ್ದು, ನಡುದ್ರಾವಿಡದ ನುಡಿಗಳೊಂದಿಗೆ ಹತ್ತಿರದ ನಂಟಸ್ತನವನ್ನು ತೋರಿಸುವ ಹಾಗೆ ಕಾಣಿಸುತ್ತದೆ. ಕೊರಗ ನುಡಿಯೂ ಕೆಲವು ವಿಶಯಗಳಲ್ಲಿ ಬಡಗುದ್ರಾವಿಡ ನುಡಿಗಳಿಗೆ ಸಮೀಪವಿರುವ ಹಾಗೆ ಕಾಣಿಸುತ್ತದೆ. ಹಾಗಾಗಿ ಈ ಎರಡು ನುಡಿಗಳ ವಿಶಯವಾಗಿ ಇನ್ನಶ್ಟು ಸಂಶೋದನೆಗಳನ್ನು ನಡೆಸುವ ಅವಶ್ಯಕತೆಯಿದೆ.

ನೀಲಗಿರಿಯಲ್ಲಿ ಬಳಕೆಯಲ್ಲಿರುವ 'ಬಡಗ' ಎಂಬುದು (ಜನಸಂಕ್ಯೆ: ಒಂದೂಕಾಲು ಲಕ್ಶ) ಕನ್ನಡಕ್ಕಿಂತ ಬೇರಾಗಿರುವ ಒಂದು ಸ್ವತಂತ್ರ ನುಡಿಯೆಂಬುದಾಗಿ ಕೆಲವರು ವಾದಿಸಿದ್ದಾರೆ; ಆದರೆ ಇಲ್ಲಿ ಅದನ್ನು ಕನ್ನಡದ ಒಳನುಡಿಯೆಂದೇ ಪರಿಗಣಿಸಲಾಗಿದೆ. ಇದಕ್ಕೆ ಕಾರಣವನ್ನು ಕೆಳಗೆ (೧.೩.೨)ರಲ್ಲಿ ವಿವರಿಸಲಾಗಿದೆ.

ನಡುದ್ರಾವಿಡ ಕವಲಿನಲ್ಲಿ ತೆಲುಗು, ಗೋಂಡಿ, ಕೊಂಡ, ಕೊಯಿ, ಕೂವಿ, ಪೆಂಗೊ, ಮಂಡ, ಕೋಲಾಮಿ, ನಾಯ್ಕಿ, ನಾಯ್ಕುಡಿ, ಪಾರ್ಜಿ, ಒಲ್ಲಾರಿ ಮತ್ತು ಗದಬ ಎಂಬ ಹದಿಮೂರು ನುಡಿಗಳು ಸೇರುತ್ತವೆ. ತೆಲುಗು ನುಡಿಯನ್ನಾಡುವವರ ಜನಸಂಕ್ಯೆ ಸುಮಾರು ಆರೂವರೆ ಕೋಟಿ.

ಉಳಿದವುಗಳಲ್ಲಿ ಗೋಂಡಿ ನುಡಿ ಸುಮಾರು ಇಪ್ಪತ್ತನಾಲ್ಕು ಲಕ್ಶ ಜನರ ಮಾತಾಗಿದ್ದು, ಮದ್ಯಪ್ರದೇಶ, ಮಹಾರಾಶ್ಟ್ರ, ಒರಿಸ್ಸ ಮತ್ತು ಆಂದ್ರಪ್ರದೇಶಗಳಲ್ಲಿ ಬಳಕೆಯಲ್ಲಿದೆ. ಆರೂವರೆ ಲಕ್ಶ ಜನರ ಮಾತಾಗಿರುವ ಕೊಯಿ ನುಡಿ ಒರಿಸ್ಸಾದಲ್ಲಿ ಬಳಕೆಯಲ್ಲಿದೆ.

ಕೂವಿ ನುಡಿ ಸುಮಾರು ಎರಡೂವರೆ ಲಕ್ಶ ಜನರ ಮಾತಾಗಿದ್ದು ಒರಿಸ್ಸಾ ಮತ್ತು ಆಂದ್ರಪ್ರದೇಶ (ವಿಶಾಕಪಟ್ಟಣ)ಗಳಲ್ಲಿ ಬಳಕೆಯಲ್ಲಿದೆ. ಕೊಂಡ ನುಡಿ ಸುಮಾರು ಹದಿನೆಂಟು ಸಾವಿರ ಜನರ ಮಾತಾಗಿದ್ದು ಆಂದ್ರಪ್ರದೇಶದಲ್ಲಿ ಬಳಕೆಯಲ್ಲಿದೆ. ಪೆಂಗೋ ನುಡಿ ಸುಮಾರು ಒಂದೂವರೆ ಸಾವಿರ ಜನರ ಮಾತಾಗಿದ್ದು ಒರಿಸ್ಸಾದ ನವರಂಗಪುರ ಜಿಲ್ಲೆಯಲ್ಲಿ ಬಳಕೆಯಲ್ಲಿದೆ. ಅದೇ ಜಿಲ್ಲೆಯಲ್ಲಿ ಬಳಕೆಯಲ್ಲಿರುವ ಮಂಡ ನುಡಿ ಎಶ್ಟು ಜನರ ಮಾತಾಗಿದೆಯೆಂಬುದನ್ನು ನಿಶ್ಚಿತವಾಗಿ ತಿಳಿದಿಲ್ಲ.

ಬಡಗುದ್ರಾವಿಡ ಕವಲಿನಲ್ಲಿ ಕುಡುಕ್, ಮಾಲ್ತೋ ಮತ್ತು ಬ್ರಾಹುಯಿ ಎಂಬ ಮೂರು ನುಡಿಗಳು ಸೇರುತ್ತವೆ. ಇವುಗಳಲ್ಲಿ ಕುಡುಕ್ ನುಡಿ ಸುಮಾರು ಹದಿನಾಲ್ಕು ಲಕ್ಶ ಜನರ ಮಾತಾಗಿದ್ದು, ಬಿಹಾರ, ಮದ್ಯಪ್ರದೇಶ ಮತ್ತು ಒರಿಸ್ಸಾಗಳಲ್ಲಿ ಬಳಕೆಯಲ್ಲಿದೆ. ನೇಪಾಳದಲ್ಲೂ ಈ ನುಡಿಯನ್ನಾಡುವ ಸುಮಾರು ಹತ್ತು ಸಾವಿರ ಜನರಿದ್ದಾರೆ.

ಸುಮಾರು ಒಂದು ಲಕ್ಶ ಜನರ ಮಾತಾಗಿರುವ ಮಾಲ್ತೋ ನುಡಿ ಬಿಹಾರದ

ರಾಜಮಹಾಲ್ ಗುಡ್ಡಗಳಲ್ಲಿ ಬಳಕೆಯಲ್ಲಿದೆ ಮತ್ತು ಸುಮಾರು ಹದಿನೇಳು ಲಕ್ಶ ಜನರ ಮಾತಾಗಿರುವ ಬ್ರಾಹುಯೀ ನುಡಿ ಪಾಕಿಸ್ತಾನದ ಬಲೂಚಿಸ್ತಾನದಲ್ಲಿ ಬಳಕೆಯಲ್ಲಿದೆ.

ಈ ಹಂಚಿಕೆಗಿಂತ ಸ್ವಲ್ಪ ಮಟ್ಟಿಗೆ ಬೇರಾಗಿರುವ ಹಂಚಿಕೆಯೊಂದನ್ನು ಕ್ರಿಶ್ಣಮೂರ್ತಿ (೨೦೦೩) ಸೂಚಿಸಿದ್ದಾರೆ. ಮೇಲೆ ಕೊಟ್ಟಿರುವ ತೆಂಕುದ್ರಾವಿಡ ನುಡಿಗಳನ್ನು 'ತೆಂಕುದ್ರಾವಿಡ - ೧' ಎಂಬುದಾಗಿ ಮತ್ತು ಮೇಲೆ ನಡುದ್ರಾವಿಡದಲ್ಲಿ ಸೇರಿಸಿದ ತೆಲುಗು, ಗೋಂಡಿ, ಕೊಂಡ, ಕೂಯಿ, ಕೂವಿ, ಪೆಂಗೊ ಮತ್ತು ಮಂಡ ನುಡಿಗಳನ್ನು 'ತೆಂಕುದ್ರಾವಿಡ - ೨' ಎಂಬುದಾಗಿ ಪರಿಗಣಿಸಬೇಕೆಂದು ಅವರು ವಾದಿಸಿದ್ದಾರೆ.

ಇವನ್ನು ಬಿಟ್ಟು ಉಳಿದ ಕೋಲಾಮಿ, ನಾಯ್ಕಿ, ಪಾರ್ಜಿ, ಒಲ್ಲಾರಿ ಮತ್ತು ಗದಬ ನುಡಿಗಳನ್ನು ಮಾತ್ರ 'ನಡುದ್ರಾವಿಡ' ಕವಲಿನಲ್ಲಿ ಇರಿಸಬೇಕೆಂಬುದು ಅವರ ಅಬಿಪ್ರಾಯ. ತಮಿಳು, ಕನ್ನಡ ಮೊದಲಾದ ನುಡಿಗಳಲ್ಲಿ ನಡೆದ ಕೆಲವು ಬದಲಾವಣೆಗಳು ತೆಲುಗು, ಗೋಂಡಿ, ಕೂಯಿ ಮೊದಲಾದ ನುಡಿಗಳಲ್ಲೂ ಕಾಣಿಸುತ್ತಿರುವುದೇ ಅವರ ಈ ಅಬಿಪ್ರಾಯಕ್ಕೆ ಆದಾರ.

೧.೨.೨ ದ್ರಾವಿಡರ ಮೂಲ ನೆಲೆ

ದ್ರಾವಿಡ ನುಡಿಗಳನ್ನಾಡುವ ಜನರು ತೆಂಕು ಪಡುವ ಇಲ್ಲವೇ ಯುರೋಪ್‌ನಿಂದ ಈರಾನ್ ಗುಡಿಪ್ರದೇಶದ ಮೂಲಕ ಬಾರತಕ್ಕೆ ವಲಸೆ ಬಂದಿರಬೇಕೆಂದು ಹೆಚ್ಚಿನ ವಿದ್ವಾಂಸರು ಅಬಿಪ್ರಾಯಪಡುತ್ತಾರೆ. ಇದು ಬಾರತಕ್ಕೆ ಆರ್ಯರು ವಲಸೆ ಬಂದುದಕ್ಕಿಂತ ಸುಮಾರು ಎರಡು ಸಾವಿರ ವರ್ಶಗಳಶ್ಟು ಹಿಂದೆ ನಡೆದಿರಬೇಕೆಂದೂ ಕೂಡ ಅವರು ವಾದಿಸುತ್ತಾರೆ. ಬಾರತಕ್ಕೆ ಆರ್ಯರು ವಲಸೆ ಬಂದುದು ಸುಮಾರು ಮೂರೂವರೆ ಸಾವಿರ ವರ್ಶಗಳಶ್ಟು ಹಿಂದೆ.

ಆದರೆ ಈ ಅಬಿಪ್ರಾಯಗಳಿಗೆ ಸಮಾದಾನಕರವಾದ ಆದಾರವೇನೂ ಇರುವ ಹಾಗೆ ಕಾಣಿಸುವುದಿಲ್ಲ. ದ್ರಾವಿಡ ನುಡಿಗಳಿಗೆ ಉರಾಲ್-ಅಲ್ಟಾಯಿಕ್ ಕುಟುಂಬಕ್ಕೆ ಸೇರಿದ ಹಂಗೇರಿಯನ್, ಪಿನ್ನಿಶ್ ಮೊದಲಾದ ನುಡಿಗಳೊಂದಿಗೆ ನಂಟಸ್ತನವಿದೆಯೆಂದು ಹಲವರು ವಿದ್ವಾಂಸರು ವಾದಿಸಿದ್ದಾರೆ. ಇದಲ್ಲದೆ ಇಲಾಮೈಟ್ ಮತ್ತು ಜಪಾನೀಸ್ ನುಡಿಗಳೊಂದಿಗೂ ದ್ರಾವಿಡ ನುಡಿಗಳಿಗೆ ನಂಟಸ್ತನವಿದೆಯೆಂದು ಸಾದಿಸಲು ಕೆಲವರು ಪ್ರಯತ್ನಿಸಿದ್ದಾರೆ. ಆದರೆ ಇವುಗಳಲ್ಲಿ ಯಾವುದೂ ಇದುವರೆಗೆ ಎಲ್ಲರೂ ಒಪ್ಪುವಂತಹ ಸ್ತಿತಿಗೆ ತಲುಪಿಲ್ಲ.

ಇದಲ್ಲದೆ, ನಮಗೆ ತಿಳಿದಿರುವ ಹಾಗೆ ಇವತ್ತು ಮೂಲದ್ರಾವಿಡದ ಪದ ಮತ್ತು ವ್ಯಾಕರಣ ಸ್ವರೂಪಗಳನ್ನು ಹೆಚ್ಚು ಬದಲಾಯಿಸದೆ ಉಳಿಸಿಕೊಂಡಿರುವುದು ತಮಿಳು.

ಕನ್ನಡ, ಕೊಡಗು, ಮಲಯಾಳ ಮೊದಲಾದ ತೆಂಕುದ್ರಾವಿಡ ನುಡಿಗಳೇ. ಹಾಗಾಗಿ ದ್ರಾವಿಡ ನುಡಿಗಳನ್ನಾಡುವ ಜನರ ವಲಸೆ ಬಾರತದಲ್ಲಿ ತೆಂಕು ದಿಕ್ಕಿನಿಂದ ಬಡಗು ದಿಕ್ಕಿಗೆ ಸಾಗಿರಬೇಕಲ್ಲದೆ ಬಡಗು ದಿಕ್ಕಿನಿಂದ ತೆಂಕು ದಿಕ್ಕಿಗಲ್ಲ (ಕ್ರಿಶ್ಣಮೂರ್ತಿ ೨೦೦೩:೫).

೧.೨.೩ ತೆಂಕುದ್ರಾವಿಡದಲ್ಲಿ ಕನ್ನಡದ ಜಾಗ

ತೆಂಕುದ್ರಾವಿಡ ನುಡಿಗಳಲ್ಲಿ ತುಳು ಮತ್ತು ಕೊರಗ ನುಡಿಗಳು ಮೊತ್ತಮೊದಲಿಗೆ ಬೇರಾಗಿರಬೇಕು. ಅವು ಹಲವು ವಿಶಯಗಳಲ್ಲಿ ಇತರ ತೆಂಕುದ್ರಾವಿಡ ನುಡಿಗಳಿಂದ ಬೇರಾಗಿರುವುದೇ ಈ ನಿರ್ದಾರಕ್ಕೆ ಬರಲು ಕಾರಣ. ಮೇಲೆ ಸೂಚಿಸಿದ ಹಾಗೆ, ಹಲವು ವಿಶಯಗಳಲ್ಲಿ ತುಳುನುಡಿ ನಡುದ್ರಾವಿಡ ನುಡಿಗಳಿಗೆ ಹತ್ತಿರವಿದೆಯೆಂದು ತೋರುವುದು ಇದೇ ಕಾರಣಕ್ಕಾಗಿಯೂ ಇರಬಹುದು.

ಮೇಲಿನ ಎರಡು ನುಡಿಗಳ ಅನಂತರ ತೆಂಕುದ್ರಾವಿಡದಿಂದ ಕನ್ನಡ ನುಡಿ ಬೇರಾಗಿರಬೇಕು ಮತ್ತು ಅದರ ಅನಂತರ ಕೋತ ಹಾಗೂ ತೊದ ನುಡಿಗಳು ಮತ್ತು ಆಮೇಲೆ ಕೊಡಗು ಮತ್ತು ಕುಱುಂಬ ನುಡಿಗಳು ಬೇರಾಗಿರಬೇಕೆಂದು ವಿದ್ವಾಂಸರು ಕಲ್ಪಿಸಿಕೊಂಡಿದ್ದಾರೆ. ಬಾಕಿ ಉಳಿದಿರುವ ನುಡಿಗೆ 'ತಮಿೞು' ಎಂಬ ಹೆಸರು ಬಂದಿದ್ದು, ಅದರಿಂದ ಇತ್ತೀಚೆಗೆ ಅಂದರೆ ಸುಮಾರು ಒಂದೂವರೆ ಸಾವಿರ ವರ್ಶಗಳಶ್ಟು ಹಿಂದೆ ಇರುಳ ಮತ್ತು ಮಲೆಯಾಳ ನುಡಿಗಳು ಬೇರಾಗಿರಬೇಕು.

ನುಡಿಗಳ ಈ ಚರಿತ್ರೆಗಿಂತ ಅವು ಬಳಸುವ ಲಿಪಿಗಳ ಚರಿತ್ರೆ ತೀರ ಬೇರಾದುದೆಂಬುದನ್ನು ಇಲ್ಲಿ ಗಮನಿಸುವುದು ಅವಶ್ಯ. ಕ್ರಿಸ್ತಪೂರ್ವ ಮೂರನೇ ಶತಮಾನದಲ್ಲಿ (ಎಂದರೆ ಅಶೋಕನ ಕಾಲದಲ್ಲಿ) ಪ್ರಾಕ್ರುತ ಶಾಸನಗಳನ್ನು ಬರೆಯಲು ಬಳಕೆಯಾಗುತ್ತಿದ್ದ ಬ್ರಾಹ್ಮೀ ಲಿಪಿಯೇ ಬಾರತದ ಹೆಚ್ಚಿನ ಲಿಪಿಗಳಿಗೂ ಮೂಲ. ದ್ರಾವಿಡ ನುಡಿಗಳು ಬಳಸುವ ಲಿಪಿಗಳೂ ಇದರಿಂದಲೇ ಬೆಳೆದುಬಂದಿವೆಯೆಂದು ವಿದ್ವಾಂಸರು ನಿರ್ಣಯಕ್ಕೆ ಬಂದಿದ್ದಾರೆ.

ಕನ್ನಡ ಮತ್ತು ತೆಲುಗು ನುಡಿಗಳು ಬಳಸುತ್ತಿದ್ದ ಲಿಪಿ ಹದಿನಯ್ದನೇ ಶತಮಾನದ ವರೆಗೂ ಹೆಚ್ಚು ಕಡಿಮೆ ಒಂದೇ ಲಿಪಿಯಾಗಿ ಉಳಿದಿತ್ತು. ಅನಂತರ ಅದು ಎರಡು ಬೇರೆ ಬೇರೆ ಲಿಪಿಗಳಾಗಿ ಒಡೆದುಕೊಂಡಿತು. ಈ ಲಿಪಿಗಳನ್ನು ಮುದ್ರಣಕ್ಕೆ ಅಳವಡಿಸಿಕೊಂಡ ಸಮಯದಲ್ಲಿ ಅವುಗಳ ನಡುವೆ ಬೆಳೆದು ಬಂದಿದ್ದ ವ್ಯತ್ಯಾಸಗಳು ಇನ್ನಶ್ಟು ಸ್ತಿರವಾದುವು.

ಕನ್ನಡ ಮತ್ತು ತೆಲುಗು ಲಿಪಿಗಳ ನಡುವಿರುವ ಈ ಸಾಮ್ಯದಿಂದಾಗಿ ಆ ಎರಡು ನುಡಿಗಳ ನಡುವೆಯೂ ಹತ್ತಿರದ ನಂಟಸ್ತನವಿರಬೇಕೆಂದು ಹಲವು ಮಂದಿ

ಬಾವಿಸುತ್ತಾರೆ. ಆದರೆ ಇದು ತಪ್ಪು. ಹಳೆಗನ್ನಡವನ್ನು ಹಳೆತಮಿಳು ಮತ್ತು ಹಳೆತೆಲುಗುಗಳೊಂದಿಗೆ ಹೋಲಿಸಿ ನೋಡಿದಾಗ ಹಲವು ವಿಶಯಗಳಲ್ಲಿ ಕನ್ನಡನುಡಿ ತೆಲುಗಿಗಿಂತಲೂ ತಮಿಳಿಗೆ ಹೆಚ್ಚು ಹತ್ತಿರವಿರುವುದು ಕಂಡುಬರುತ್ತದೆ.

ತೆಲುಗು ನುಡಿಯನ್ನು ಕನ್ನಡ, ತಮಿಳು ಮೊದಲಾದ ತೆಂಕುದ್ರಾವಿಡ ನುಡಿಗಳಿಂದ ದೂರಮಾಡುವ ಸಂಗತಿಗಳಲ್ಲಿ ಕೆಲವನ್ನು ಇಲ್ಲಿ ಗಮನಿಸಬಹುದು.

೧. ತೆಂಕುದ್ರಾವಿಡ ನುಡಿಗಳಲ್ಲಿ ಮನುಶ್ಯರನ್ನು ಹೊರತುಪಡಿಸಿ ಇತರ ಪ್ರಾಣಿ, ವಸ್ತು. ವಿಶಯ ಮೊದಲಾದುವನ್ನು ಸೂಚಿಸುವ ನಾಮಪದಗಳೊಂದಿಗೆ ಹಲವಚನವನ್ನು ಸೂಚಿಸುವ 'ಗಳ್' ಒಟ್ಟನ್ನು ಬಳಸಲೇಬೇಕೆಂಬ ನಿಯಮವಿಲ್ಲ. ಅವಶ್ಯವಿದ್ದಲ್ಲಿ ಮಾತ್ರ ಅದನ್ನು ಬಳಸಿದರೆ ಸಾಕು. ಆದರೆ ತೆಲುಗು ಮತ್ತು ಇತರ ನಡುದ್ರಾವಿಡ ನುಡಿಗಳಲ್ಲಿ ಹಲವಚನದ ಅರ್ತವಿರುವಲ್ಲೆಲ್ಲ ಈ ಒಟ್ಟನ್ನು ಬಳಸಲೇಬೇಕೆಂಬ ನಿಯಮವಿದೆ.

೨. ತೆಂಕುದ್ರಾವಿಡ ನುಡಿಗಳಲ್ಲಿ ಕಾಣಿಸುವ 'ಅವನ್' – 'ಅವನು' ಎಂಬುದು ತೆಲುಗು ಮತ್ತು ಇತರ ನಡುದ್ರಾವಿಡ ನುಡಿಗಳಲ್ಲಿ 'ಅವನ್ಡ್' ಎಂಬ ರೂಪದಲ್ಲಿದೆ. ತೆಲುಗಿನಲ್ಲಿ ಇದು 'ವಾಡು' ಎಂದಾಗಿದೆ.

೩. ಮುಂದಿನ ಸಮಯವನ್ನು ಸೂಚಿಸುವುದಕ್ಕಾಗಿ ತೆಂಕುದ್ರಾವಿಡ ನುಡಿಗಳಲ್ಲಿ ಮೂಲದ್ರಾವಿಡದ 'ಪ್ಪ್' ಒಟ್ಟು ಬಳಕೆಯಾಗುವುದಾದರೆ (ಹಳೆಗನ್ನಡದ ಪೋಪೆಂ, ಬರ್ಪೆಂ), ತೆಲುಗು ಮತ್ತು ಇತರ ದ್ರಾವಿಡ ನುಡಿಗಳಲ್ಲಿ 'ತ್ತ್' ಒಟ್ಟು ಬಳಕೆಯಾಗುತ್ತದೆ (ಚೇಸ್ತಾನು – ಮಾಡುತ್ತೇನೆ). ಹಳೆಗನ್ನಡದಲ್ಲಿ ಈ 'ತ್ತ್' ಒಟ್ಟು ಅಟ್ಟುತ್ತುಂ. ಒಡೆಯುತ್ತುಂ ಎಂಬಂತಹ ಜೋಡಿಸುವ ರೂಪಗಳಲ್ಲಿ ಮಾತ್ರ ಉಳಿದಿದೆ. ಹೊಸಗನ್ನಡದಲ್ಲಿ ಈ 'ತ್ತ್' ಒಟ್ಟು ಮುಂದಿನ ಸಮಯವನ್ನು ಸೂಚಿಸುವುದಕ್ಕಾಗಿಯೂ ಬಳಕೆಯಾಗುತ್ತದೆಯೇನೋ ನಿಜ (ಮಾಡುತ್ತೇನೆ), ಆದರೆ ಇದಕ್ಕೆ ಕನ್ನಡದಲ್ಲಿ ಇತ್ತೀಚೆಗೆ ನಡೆದ ಬದಲಾವಣೆ ಕಾರಣ.

೪. ನಡುದ್ರಾವಿಡದ ತೆಲುಗು, ಗೋಂಡಿ, ಕೊಂಡ, ಕೂವಿ, ಕೂಯಿ. ಪೆಂಗೊ ಮತ್ತು ಮಂಡ ನುಡಿಗಳಲ್ಲಿ ಎರಡು ಗಿಡ್ಡಸ್ವರಗಳಿರುವ ಪದಗಳಲ್ಲಿ ಮೊದಲನೆಯ ಸ್ವರದ ಅನಂತರ ಟ್, ಡ್. ಲ್. ಳ್, ರ್ ಇಲ್ಲವೇ ೞ್ ಬಂದಿದೆಯಾದರೆ, ಮೊದಲ ಸ್ವರ ಎರಡನೆಯ ಸ್ವರವಿದ್ದಲ್ಲಿಗೆ ಹೋಗಿ ಅದರೊಂದಿಗೆ ಸೇರಿ ಉದ್ದ ಸ್ವರವಾಗುತ್ತದೆ. ಇಕಾರ ಮತ್ತು ಎಕಾರಗಳು ಈ ರೀತಿ ಒಟ್ಟು ಸೇರಿದಾಗ ಏಕಾರವೂ, ಉಕಾರ ಮತ್ತು ಒಕಾರಗಳು ಒಟ್ಟು ಸೇರಿದಾಗ ಓಕಾರವೂ ದೊರೆಯುತ್ತವೆ. ಈ ಬದಲಾವಣೆ ತೆಂಕುದ್ರಾವಿಡ ನುಡಿಗಳಲ್ಲಿ ನಡೆದಿಲ್ಲ.

ಕನ್ನಡ	ತೆಲುಗು
ಮರ(ನ್)	ಮ್ರಾನು
ಒರಳು	ರೋಲು
ಎಳ	ಲೇ
ಬರೆ(ಯು)	ವ್ರಾಯು, ರಾಯು
ಒಳ(ಗ)	ಲೋನು
ಕಿಳ್ (ಕೆಳಗೆ)	ಕ್ರೀ
ಕುರುಡ	ಗ್ರುಡ್ಡಿ
ಕೊಳವೆ	ಕ್ರೋವಿ
ಅಡಗು	ಡಾಗು

೧.೩ ಕನ್ನಡ ನುಡಿ ಒಳನುಡಿಗಳಾಗಿ ಒಡೆದುಕೊಂಡ ಬಗೆ

ಮೂಲ ತೆಂಕುದ್ರಾವಿಡದಿಂದ ಕನ್ನಡ ಒಂದು ಸ್ವತಂತ್ರ ನುಡಿಯಾಗಿ ಒಡೆದು ಕೊಂಡ ಮೇಲೆ ಅದು ಹಲವು ಒಳನುಡಿಗಳಾಗಿ ಒಡೆದುಕೊಂಡಿದೆ. ಇದು ಯಾವ ರೀತಿಯಲ್ಲಿ ನಡೆದಿರಬೇಕು ಎಂಬುದನ್ನು ಅದರ ಇಪತ್ತಿನ ಒಳನುಡಿಗಳ ನಡುವೆ ಕಾಣಸುವ ಸಾಮ್ಯ ಮತ್ತು ವ್ಯತ್ಯಾಸಗಳ ಪರಿಶೀಲನೆಯ ಮೂಲಕ ತಿಳಿದುಕೊಳ್ಳಬಹುದು.

ಮೇಲೆ ೧.೧.೨ರಲ್ಲಿ ಸೂಚಿಸಿದ ಹಾಗೆ, ಕನ್ನಡ ನುಡಿಯನ್ನಾಡುವ ಜನರಲ್ಲಿ ಕೆಲವರು ಕರಾವಳಿಯಲ್ಲೂ ಇನ್ನು ಕೆಲವರು ಒಳನಾಡಿನಲ್ಲೂ ನೆಲೆಸಿರಬೇಕು ಮತ್ತು ಹೀಗೆ ನೆಲೆಸಿದ ಮೇಲೆ ಈ ಎರಡು ಗುಂಪುಗಳ ನಡುವಿನ ಸಂಪರ್ಕ ಪೂರ್ತಿ ತಪ್ಪಿ ಹೋಗಿರಬೇಕು. ಇದರಿಂದಾಗಿ ಅನಂತರ ಕನ್ನಡ ನುಡಿಯಲ್ಲಿ ನಡೆದ ಬದಲಾವಣೆಗಳಲ್ಲಿ ಹೆಚ್ಚಿನವು ಈ ಎರಡು ಪ್ರದೇಶಗಳಲ್ಲಿ ತೀರ ಬೇರಾಗಿರುವ ದಿಕ್ಕುಗಳಲ್ಲಿ ನಡೆದಿರಬೇಕು.

ಕರಾವಳಿ ಮತ್ತು ಒಳನಾಡುಗಳ ಒಳನುಡಿಗಳಾಗಿ ಈ ರೀತಿ ಒಡೆದು ಕೊಂಡಿರುವುದೇ ಕನ್ನಡದ ಅತ್ಯಂತ ಹಳೆಯ ಕವಲೊಡೆತವಾಗಿದೆ. ಈ ಕವಲೊಡೆತವನ್ನು ಬೆಂಬಲಿಸುವಂತಹ ಬದಲಾವಣೆಗಳಲ್ಲಿ ಕೆಲವನ್ನು ಕೆಳಗೆ (೧.೩.೧ರಲ್ಲಿ) ಸೂಚಿಸಲಾಗಿದೆ. ಅವುಗಳ ಕುರಿತು ಹೆಚ್ಚಿನ ವಿವರಗಳನ್ನು ಮುಂದಿನ ಅದ್ಯಾಯಗಳಲ್ಲಿ ಕೊಡಲಾಗುವುದು.

ಈ ಒಳನುಡಿಗಳೊಂದಿಗೆ ಬಡಗ ಒಳನುಡಿಯನ್ನು ಹೋಲಿಸಿದಾಗ ಕೆಲವು ವಿಶಯಗಳಲ್ಲಿ ಅದು ಕರಾವಳಿಯ ಒಳನುಡಿಗಳ ಹಾಗೆ ಮತ್ತು ಬೇರೆ ಕೆಲವು

ವಿಶಯಗಳಲ್ಲಿ ಒಳನಾಡಿನ ಒಳನುಡಿಗಳ ಹಾಗೆ ಕಾಣಿಸುತ್ತದೆ. ಇದಕ್ಕೆ ಕಾರಣವೇನಿರಬಹುದೆಂಬುದನ್ನು ೧.೩.೨ ರಲ್ಲಿ ಸೂಚಿಸಲಾಗಿದೆ.

೧.೩.೧ ಕರಾವಳಿ ಮತ್ತು ಒಳನಾಡಿನ ಒಳನಡಿಗಳು

ಕರಾವಳಿಯ ಒಳನುಡಿಗಳಿಗೂ ಒಳನಾಡಿನ ಒಳನುಡಿಗಳಿಗೂ ನಡುವೆ ಹಲವು ವ್ಯತ್ಯಾಸಗಳಿವೆ. ಇವುಗಳಲ್ಲಿ ಕೆಲವು ಅವುಗಳ ನಡುವಿನ ಒಡೆತವನ್ನು ಅತ್ಯಂತ ಪ್ರಾಚೀನವಾದ ಕನ್ನಡ ಬರಹಗಳಿಂದಲೂ ಹಿಂದಕ್ಕೆ ಕೊಂಡುಹೋಗುತ್ತವೆ.

೧. ತಂಕುದ್ರಾವಿಡದಲ್ಲಿ ಆಗುವಿಕೆಯನ್ನು ಸೂಚಿಸುವ ಕ್ರಿಯಾಪದಗಳಿಗೆ 'ತ್' ಒಟ್ಟನ್ನು ಸೇರಿಸಿ ಅವನ್ನು ಮಾಡುವಿಕೆಗಳನ್ನಾಗಿ ಬದಲಾಯಿಸಲು ಸಾದ್ಯವಿತ್ತು. ಒಳನಾಡಿನ ಒಳನುಡಿಗಳಲ್ಲಿ ಇದು ಪೂರ್ತಿ ಇಲ್ಲವಾಗಿದೆ; ಆದರೆ ಕರಾವಳಿಯ ಹವ್ಯಕ ಒಳನುಡಿಯಲ್ಲಿ ಇದರ ಅವಶೇಶಗಳನ್ನು ಹಲವು ಕ್ರಿಯಾಪದಗಳಲ್ಲಿ ಕಾಣಬಹುದು (ಮುರುತ್ತು – ಮುರಿಯಿತು, ಮುರುದತ್ತು – ಮುರಿದ; ಸಿಗುತ್ತು – ಸಿಗಿಯಿತು, ಸಿಗುದತ್ತು – ಸಿಗಿದ).

೨. ನಡುವಿನ ಗಿಡ್ಡ ಸ್ವರಗಳು (ಎಕಾರ, ಒಕಾರಗಳು) ಅವುಗಳ ಅನಂತರ ಮೇಲಿನ ಸ್ವರಗಳು (ಇ ಇಲ್ಲವೇ ಉ) ಬಂದಾಗ ಮೇಲಿನ ಗಿಡ್ಡ ಸ್ವರಗಳಾಗುವಂತಹ ಬದಲಾವಣೆಯೊಂದು ಕನ್ನಡದಲ್ಲಿ ಎಂಟು - ಒಂಬತ್ತನೇ ಶತಮಾನದಲ್ಲಿ ನಡೆದಿರಬೇಕೆಂದು ಶಾಸನಗಳ ಆದಾರದ ಮೇಲೆ ಹೇಳಲಾಗುತ್ತದೆ. ಈ ಬದಲಾವಣೆ ಕನ್ನಡದ ಒಳನಾಡಿನ ಒಳನುಡಿಗಳಲ್ಲಿ ನಡೆದಿದೆ. ಆದರೆ ಕರಾವಳಿಯ ಒಳನುಡಿಗಳಲ್ಲಿ ನಡೆದಿಲ್ಲ (ಕೆಮಿ – ಕಿವಿ, ಬೆಳಿ – ಬಿಳಿ, ಹೊಡಿ – ಪುಡಿ, ಕೊಡಿ – ಕುಡಿ, ತುದಿ).

೩. ತಡೆಯುಲಿಯ ಮೊದಲು ಬಂದಿದ್ದ ಮೂಗುಲಿ ಉದ್ದ ಸ್ವರದ ಅನಂತರ ಇಲ್ಲವೇ ಎರಡು ಗಿಡ್ಡ ಸ್ವರಗಳ ಅನಂತರ ಬಿದ್ದುಹೋಗುವ ಬದಲಾವಣೆ ಹಳೆಗನ್ನಡದ ಸಮಯದಲ್ಲಿ ನಡೆದಿತ್ತು. ಒಳನಾಡಿನ ಒಳನುಡಿಗಳಲ್ಲಿ ಈ ಮೂಗುಲಿ ಉಳಿದಿಲ್ಲ, ಆದರೆ ಕರಾವಳಿಯ ಒಳನುಡಿಗಳ ಹಲವು ಪದಗಳಲ್ಲಿ ಅದು ಉಳಿದಿದೆ (ಸಾಂಕು – ಸಾಕು, ನೂಂಕು – ನೂಕು, ಕಲಂಕು – ಕಲಕು, ಮುರುಂಟು – ಮುರುಟು, ಮರಂಗೊ – ಮರಗಳು).

೪. ಎರಡು ಗಿಡ್ಡ ಸ್ವರಗಳ ಅನಂತರ ಬಂದಿದ್ದ ಇಮ್ಮಡಿ ತಡೆಯುಲಿ ಹಳೆಗನ್ನಡಕ್ಕಿಂತಲೂ ಹಿಂದಿನ ಸಮಯದಲ್ಲೇನೇ ಬಿದ್ದುಹೋಗಲು ತೊಡಗಿರಬೇಕು. ಹಳೆಗನ್ನಡದಲ್ಲಿ ಇಂತಹ ಕೆಲವು ಪದಗಳು ಮಾತ್ರ ಉಳಿದುಕೊಂಡಿವೆ. ಒಳನಾಡಿನ ಒಳನುಡಿಗಳಲ್ಲೂ ಈ ಬದಲಾವಣೆ ನಡೆದಿದೆ. ಆದರೆ ಕರಾವಳಿಯ ಹವ್ಯಕ ಕನ್ನಡದಲ್ಲಿ

ಟಕಾರವನ್ನು ಹೊರತು ಪಡಿಸಿ ಇತರ ತಡೆಯುಲಿಗಳಲ್ಲಿ ಅದು ನಡೆದಿಲ್ಲ (ಅರಚ್ಚು – ಅರಚು, ಅಡಕೆ – ಅಡಿಕೆ, ಹುರುಪ್ಪು – ಹುರುಪು, ಅಳತ್ತೆ – ಅಳತೆ).

೫. ಮೂಲದ್ರಾವಿಡದಲ್ಲಿ ಆಡುಗ ಮತ್ತು ಕೇಳುಗರ ಕೂಡಿಕೆಯನ್ನು ಸೂಚಿಸುವುದಕ್ಕಾಗಿ 'ಯಾಮ್' ಪದವನ್ನು ಬಳಸಲಾಗುತ್ತಿತ್ತು ಮತ್ತು ಆಡುಗ ಮತ್ತು ಇತರರ ಕೂಡಿಕೆಯನ್ನು ಸೂಚಿಸುವುದಕ್ಕಾಗಿ 'ಞಾಮ್' ಪದವನ್ನು ಬಳಸಲಾಗುತ್ತಿತ್ತು. ಈ ವ್ಯತ್ಯಾಸವನ್ನು ಹಳೆಗನ್ನಡ ಉಳಿಸಿಕೊಂಡಿದೆ (ಆಮ್ ಮತ್ತು ನಾಮ್ ಪದಗಳ ಮೂಲಕ) ಮತ್ತು ಕರಾವಳಿಯ ಒಳನುಡಿಗಳೂ ಉಳಿಸಿಕೊಂಡಿವೆ (ಹವ್ಯಕದಲ್ಲಿ 'ಎಂಗೊ' ಮತ್ತು 'ನಾವು' ಪದಗಳು ಇದಕ್ಕಾಗಿ ಬಳಕೆಯಾಗುತ್ತವೆ). ಆದರೆ ಒಳನಾಡಿನ ಒಳನುಡಿಗಳು ಇದನ್ನು ಉಳಿಸಿಕೊಂಡಿಲ್ಲ.

೬. ಮೂಲದ್ರಾವಿಡದ ಕ್ರಿಯಾರೂಪಗಳಲ್ಲೂ ಮೇಲಿನ ವ್ಯತ್ಯಾಸ ಕಾಣಿಸುತ್ತಿದ್ದಿರಬೇಕು. ಅವುಗಳ ಕೊನೆಯಲ್ಲಿ ಬರುವ 'ಅಮ್' ಒಟ್ಟು ಆಡುಗ ಮತ್ತು ಕೇಳುಗರ ಕೂಡಿಕೆಯನ್ನು ಸೂಚಿಸುವುದಾದರೆ 'ಏಮ್' ಒಟ್ಟು ಆಡುಗ ಮತ್ತು ಇತರರ (ಕೇಳುಗನನ್ನು ಹೊರತುಪಡಿಸಿ) ಕೂಡಿಕೆಯನ್ನು ಸೂಚಿಸುತ್ತದೆ.

ಈ ವ್ಯತ್ಯಾಸವನ್ನು ಹಳೆಗನ್ನಡ ಉಳಿಸಿಲ್ಲ ಮತ್ತು ಒಳನಾಡಿನ ಒಳನುಡಿಗಳೂ ಉಳಿಸಿಲ್ಲ. ಆದರೆ ಕರಾವಳಿಯ ಹವ್ಯಕ ಕನ್ನಡ ಬೇರೆ ವಿಧಾನದ ಮೂಲಕ ('ಅಮ್' ಒಟ್ಟಿನ ಬದಲು 'ತು' ಒಟ್ಟನ್ನು ಬಳಸುವ ಮೂಲಕ) ಉಳಿಸಿಕೊಂಡಿದೆ.

೭. ಹಳಗನ್ನಡದ 'ವ' (ಪ) ಒಟ್ಟನ್ನು ಒಳನಾಡಿನ ಒಳನುಡಿಗಳು ಕ್ರಿಯಾಪದಗಳ ಸಂಬಂಧಿಸುವ ರೂಪಗಳಲ್ಲಿ (ಮಾಡುವ, ಕೊಡುವ) ಮಾತ್ರ ಉಳಿಸಿಕೊಂಡಿವೆ. ಆದರೆ ಕರಾವಳಿಯ ಒಳನುಡಿಗಳು ಅದನ್ನು ಕೆಲಸವನ್ನು ತಿಳಿಸುವ ಕ್ರಿಯಾರೂಪಗಳಲ್ಲೂ ಉಳಿಸಿಕೊಂಡಿವೆ.

ಈ ರೂಪಕ್ಕೆ ಮುಂದಿನ ಕೆಲಸದ ಕುರಿತಾಗಿ ಆಡುಗನ ಊಹೆಯನ್ನು ತಿಳಿಸುವ ಅರ್ತ ಬಂದಿದೆಯೆಂಬುದು ಮಾತ್ರ ಕರಾವಳಿಯಲ್ಲಿ ನಡೆದ ಬದಲಾವಣೆ (ಹವ್ಯಕದ 'ಹೋಪೆ' – ಹೋದೇನು, 'ಕೊಡುವೆ' – ಕೊಟ್ಟೇನು).

೮. ಹಳಗನ್ನಡದ 'ಬಂದಪೆಂ' – ಬರುತ್ತೇನೆ, 'ಮುರಿದಪೆಂ' – ಮುರಿಯುತ್ತೇನೆ ಎಂಬಂತಹ ಕ್ರಿಯಾರೂಪಗಳು ಕರಾವಳಿಯ ಒಳನುಡಿಗಳಲ್ಲಿ ಮುಂದಿನ ಸಮಯದ ಅರ್ತವನ್ನೇ ಸೂಚಿಸುತ್ತವೆ ('ಕೊಟ್ಟನೆ' – ಕೊಡುತ್ತೇನೆ); ಆದರೆ ಒಳನಾಡಿನ ಒಳನುಡಿಗಳಲ್ಲಿ ಅವು ಆ ಕೆಲಸಗಳ ಕುರಿತಾಗಿ ಆಡುಗನ ಊಹೆಯನ್ನು ತಿಳಿಸುತ್ತವೆ (ಕೊಟ್ಟೇನು); ಮುಂದಿನ ಸಮಯವನ್ನು ಸೂಚಿಸಲು 'ಉತ್ತ' ಒಟ್ಟು ಬಳಕೆಗೆ ಬಂದಿದೆ (ಕೊಡುತ್ತೇನೆ).

೯. ಹಳೆಗನ್ನಡದಲ್ಲಿ ಮುಂದಿನ ಸಮಯದ ಕೆಲಸದ ಕುರಿತು ಆಡುಗನ ಊಹೆಯನ್ನು ಸೂಚಿಸುವುದಕ್ಕಾಗಿ ಕ್ರಿಯಾಪದದೊಂದಿಗೆ 'ಕುಂ' (ಗುಂ) ಒಟ್ಟನ್ನು ಬಳಸಲಾಗುತ್ತಿತ್ತು. ಒಳನಾಡಿನ ಒಳನುಡಿಗಳಲ್ಲಿ ಈ ಒಟ್ಟು ಉಳಿದಿಲ್ಲ. ಆದರೆ ಕರಾವಳಿಯ ಹವ್ಯಕ ಕನ್ನಡದಲ್ಲಿ ಇದು ಆಡುಗ ಮತ್ತು ಕೇಳುಗರನ್ನು ಹೊರತುಪಡಿಸಿ ಇತರರ ಕೆಲಸದ ಕುರಿತು ಆಡುಗನ ಊಹೆಯನ್ನು ಸೂಚಿಸುವುದಕ್ಕಾಗಿ ಬಳಕೆಯಾಗುತ್ತದೆ.

ಇದಲ್ಲದೆ, ಹಿಂದಿನ ಸಮಯದಲ್ಲಿ ರೂಢಿಯಲ್ಲಿದ್ದ ಕೆಲಸವೊಂದನ್ನು ಸೂಚಿಸುವುದಕ್ಕಾಗಿಯೂ ಈ ಒಟ್ಟನ್ನು ಹಳೆಗನ್ನಡದಲ್ಲಿ ಬಳಸಲಾಗುತ್ತಿತ್ತು; ಇಂತಹುದೇ ಬಳಕೆ ಹವ್ಯಕದಲ್ಲಿಯೂ ಇದೆ.

೧೦. ಮುಂದಿನ ಸಮಯದ ಕೆಲಸಗಳನ್ನು ಸೂಚಿಸುವುದಕ್ಕಾಗಿ ಕನ್ನಡದ ಎಲ್ಲಾ ಒಳನುಡಿಗಳೂ ಕ್ರಿಯಾಪದಕ್ಕೆ 'ಉತ್ತ' ಒಟ್ಟನ್ನು ಸೇರಿಸಿರುವ ರೂಪಗಳನ್ನು ಬಳಸುತ್ತವೆ (ಬಡಗ ಕನ್ನಡ ಇದಕ್ಕೆ ಅಪವಾದ – ೧.೩.೨ ನೋಡಿ). ಆದರೆ ಈ ಒಟ್ಟಿನ ಅನಂತರ ಬರುವ ಆಡುಗ ಒಟ್ಟಿನ ಸ್ವರೂಪದಲ್ಲಿ ಕರಾವಳಿಯ ಒಳನುಡಿಗಳು ಒಳನಾಡಿನ ಒಳನುಡಿಗಳಿಂದ ಬೇರಾಗಿವೆ.

ಒಳನಾಡಿನ ಒಳನುಡಿಗಳು 'ಆಗು' ಕ್ರಿಯಾಪದದ ಮುಂದಿನ ಸಮಯದ ರೂಪಗಳಿಂದ ಸಿದ್ಧವಾದ 'ಏನೆ', 'ಏವೆ', 'ಈರಿ' ಮೊದಲಾದ ಒಟ್ಟುಗಳನ್ನು ಬಳಸುತ್ತವೆ (ಮಾಡುತ್ತೇನೆ, ಕೊಡುತ್ತೇನೆ). ಆದರೆ ಕರಾವಳಿಯ ಒಳನುಡಿಗಳು ಹಿಂದಿನ ಸಮಯದ ಒಟ್ಟಿನೊಂದಿಗೆ ಬರುವ ಆಡುಗ ಒಟ್ಟುಗಳನ್ನೇ ಇಲ್ಲಿಯೂ ಬಳಸುತ್ತವೆ (ಮಾಡುತ್ತೆ, ಕೊಡುತ್ತೆ).

೧೧. ಮೂಲದ್ರಾವಿಡದ ಅಲ್ಲಗಳೆಯುವ ಕ್ರಿಯಾರೂಪ ಹಳೆಗನ್ನಡದಲ್ಲಿ ಉಳಿದಿದೆ ('ನೋಡಂ' – ನಾವು ನೋಡುವುದಿಲ್ಲ, 'ನೋಡರ್' – ಅವರು ನೋಡುವುದಿಲ್ಲ) ಮತ್ತು ಕರಾವಳಿಯ ಒಳನುಡಿಗಳಲ್ಲಿಯೂ ಉಳಿದಿದೆ: (ಇದರ ಅರ್ಥದಲ್ಲಿ ಮಾತ್ರ ಸ್ವಲ್ಪ ಬದಲಾವಣೆಯಾಗಿದೆ: ಹವ್ಯಕದ 'ಮಾಡೆ' – ನಾವು ಮಾಡಲಿಕ್ಕಿಲ್ಲ, 'ನೋಡವು' – ಅವರು ನೋಡಲಿಕ್ಕಿಲ್ಲ). ಬಡಗ ಒಳನುಡಿಯಲ್ಲೂ ಉಳಿದಿದೆ ('ಬರೋ' – ನಾವು ಬರಲಿಕ್ಕಿಲ್ಲ). ಆದರೆ ಒಳನಾಡಿನ ಒಳನುಡಿಗಳಲ್ಲಿ ಇದು ಉಳಿದಿಲ್ಲ.

೧೨. ಹಳೆಗನ್ನಡದಲ್ಲಿ ಶರತ್ತನ್ನು ಸೂಚಿಸುವ 'ಒಡೆ' ಒಟ್ಟನ್ನು ನೇರವಾಗಿ ಹಿಂದಿನ ಇಲ್ಲವೇ ಮುಂದಿನ ಸಮಯದ ಒಟ್ಟುಗಳ ಅನಂತರ ಮತ್ತು ಅಲ್ಲಗಳೆಯುವ ಒಟ್ಟಿನ ಅನಂತರ ಬಳಸಲು ಸಾಧ್ಯವಿತ್ತು (ಬಂದೊಡೆ – ಬಂದರೆ, ಬಪ್ಪೊಡೆ – ಬರುವುದಿದ್ದರೆ, ಬಾರದೊಡೆ – ಬಾರದಿದ್ದರೆ).

ಕರಾವಳಿಯ ಹವ್ಯಕ ಕನ್ನಡದಲ್ಲೂ ಇದೇ ರೀತಿಯಲ್ಲಿ ಶರತ್ತನ್ನು ಸೂಚಿಸುವ

ಅರ ಒತ್ತನ್ನು ಹಿಂದಿನ ಮತ್ತು ಮುಂದಿನ ಸಮಯದ ಒತ್ತುಗಳ ಅನಂತರ ಇಲ್ಲವೇ ಅಲ್ಲಗಳೆಯುವ ಒತ್ತಿನ ಅನಂತರ ಬಳಸಲು ಸಾಧ್ಯವಿದೆ (ಬಂದರ – ಬಂದರೆ, ಬತ್ತರ – ಬರುವುದಿದ್ದರೆ, ಬಾರದ್ದರೆ – ಬಾರದಿದ್ದರೆ).

ಆದರೆ ಒಳನಾಡಿನ ಒಳನುಡಿಗಳಲ್ಲಿ ಶರತ್ತನ್ನು ಸೂಚಿಸುವ ಅರ ಒತ್ತನ್ನು ಮುಂದಿನ ಸಮಯದ ಒತ್ತಿನ ಅನಂತರ ಇಲ್ಲವೇ ಅಲ್ಲಗಳೆಯುವ ಒತ್ತಿನ ಅನಂತರ ನೇರವಾಗಿ ಬಳಸಲು ಸಾಧ್ಯವಾಗದು.

ಕರಾವಳಿ ಮತ್ತು ಒಳನಾಡಿನ ಕನ್ನಡ ಒಳನುಡಿಗಳಲ್ಲಿ ಇಂತಹ ಹಲವು ಬದಲಾವಣೆಗಳು ಬೇರೆ ಬೇರೆ ದಿಕ್ಕುಗಳಲ್ಲಿ ನಡೆದಿದ್ದು, ಅವು ಈ ಎರಡು ಒಳನುಡಿಗಳ ನಡುವೆ ಇವತ್ತು ಕಾಣಿಸುವ ವ್ಯತ್ಯಾಸಗಳಿಗೆ ಕಾರಣಗಳಾಗಿವೆ. ಕನ್ನಡದ ಒಳನುಡಿಗಳ ಒಡೆತದಲ್ಲಿ ಕರಾವಳಿ ಮತ್ತು ಒಳನಾಡುಗಳ ನಡುವಿನ ಒಡೆತವೇ ಅತ್ಯಂತ ಹಳೆಯದೆಂಬುದು ಈ ವ್ಯತ್ಯಾಸಗಳಿಂದ ಸ್ಪಷ್ಟವಾಗುತ್ತದೆ.

೧.೩.೨ ಬಡಗ ಒಳನುಡಿ

ಬಡಗ ಕನ್ನಡ ಕೆಲವು ವಿಶಯಗಳಲ್ಲಿ ಕರಾವಳಿಯ ಒಳನುಡಿಗಳನ್ನು ಹೋಲುತ್ತದೆ ಮತ್ತು ಬೇರೆ ಕೆಲವು ವಿಶಯಗಳಲ್ಲಿ ಒಳನಾಡಿನ ಒಳನುಡಿಗಳನ್ನು ಹೋಲುತ್ತದೆ. ಇದಲ್ಲದೆ, ಇನ್ನು ಕೆಲವು ವಿಶಯಗಳಲ್ಲಿ ಅದು ತನ್ನವೇ ಆದ ಬದಲಾವಣೆಗಳನ್ನೂ ಮಾಡಿಕೊಂಡಿದೆ.

ಈ ಎಲ್ಲಾ ವಿಶಯಗಳನ್ನೂ ವಿವರಿಸುವುದಕ್ಕಾಗಿ, ಅದನ್ನಾಡುವ ಜನ ಮೊದಲಿಗೆ ಕರಾವಳಿಯಲ್ಲಿದ್ದಿರಬೇಕೆಂದು ಮತ್ತು ಅನಂತರ ಅಲ್ಲಿಂದ ಒಳನಾಡಿಗೆ (ಮೈಸೂರಿಗೆ) ವಲಸೆ ಹೋಗಿರಬೇಕೆಂದು ಕಲ್ಪಿಸಿಕೊಳ್ಳಬಹುದು. ಇದರ ಅನಂತರ ಅವರು ನೀಲಗಿರಿಗೆ ವಲಸೆ ಹೋದುದರಿಂದಾಗಿ ಅವರ ನುಡಿಯಲ್ಲಿ ಅವರದೇ ಆದ ಕೆಲವು ಬದಲಾವಣೆಗಳು ನಡೆದಿರಬೇಕು.

೧. ಕ್ರಿಯಾಪದಗಳಲ್ಲಿ ಕಾಣಿಸುವ ಆಗುವಿಕೆ - ಮಾಡುವಿಕೆ ವ್ಯತ್ಯಾಸ ಕರಾವಳಿಯ ಹವ್ಯಕದಲ್ಲಿದೆ ಮತ್ತು ಬಡಗದಲ್ಲೂ ಇದೆ ('ಒಣಗು' – ಒಣಗು. 'ಒಣಕು' – ಒಣಗಿಸು, 'ಸಿಗುದುತ್ತು' – ಹರಿಯಿತು, 'ಸಿಗುದ' – ಹರಿದೆ); ಆದರೆ ಒಳನಾಡಿನ ಒಳನುಡಿಗಳಲ್ಲಿರುವ ಹಾಗೆ ಕಾಣಿಸುವುದಿಲ್ಲ.

೨. ಕರಾವಳಿಯ ಒಳನುಡಿಗಳ ಹಾಗೆ ಬಡಗವೂ ಮುಂದಿನ ಸಮಯದ 'ವ್' (ಪ್) ಒತ್ತನ್ನು ಉಳಿಸಿಕೊಂಡಿದೆ ಮತ್ತು ಸುಳ್ಯದ ಗೌಡ ಕನ್ನಡದ ಹಾಗೆ ಹಳೆಗನ್ನಡದ 'ದಪ' ಕ್ರಿಯಾರೂಪದ ಬದಲು 'ಉತ್ತ' ರೂಪವನ್ನು ಬಳಸದೇ ಅದನ್ನೇ ಉಳಿಸಿಕೊಂಡಿದೆ.

೩. ಅಲ್ಲಗಳೆಯುವ ಕ್ರಿಯಾರೂಪವನ್ನು ಕರಾವಳಿಯ ಒಳನುಡಿಗಳ ಹಾಗೆ ಬಡಗವೂ ಉಳಿಸಿಕೊಂಡಿದೆ. ಇದಲ್ಲದ 'ಇಲ್ಲ' ಪದವನ್ನು (ಬಡಗದಲ್ಲಿ 'ಇಲೆ' ಎಂಬುದನ್ನು) ಹಿಂದಿನ, ಮುಂದಿನ ಮತ್ತು ಅಲ್ಲಗಳೆಯುವ ಕ್ರಿಯಾರೂಪಗಳೊಂದಿಗೆ ಬಳಸುವ ಕರಾವಳಿಯ ವಿಧಾನ ಬಡಗದಲ್ಲೂ ಉಳಿದಿದೆ.

೪. ಆಡುಗ ಪದಗಳಲ್ಲಿ ಮತ್ತು ಕ್ರಿಯಾರೂಪಗಳಲ್ಲಿ ಆಡುಗನೊಂದಿಗೆ ಕೇಳುಗನನ್ನು ಸೇರಿಸಿ ಮತ್ತು ಸೇರಿಸದೆ ಹೇಳುವಂತಹ ಎರಡು ರೀತಿಯ ಕೂಡಿಕೆಯ ರೂಪಗಳನ್ನು ಕರಾವಳಿಯ ಒಳನುಡಿಗಳ ಹಾಗೆ ಬಡಗವೂ ಉಳಿಸಿಕೊಂಡಿದೆ.

೫. ಆಡುಗ ಮತ್ತು ಕೇಳುಗರನ್ನು ಸೂಚಿಸುವ ಪದಗಳ ಹಲವಚನದ ರೂಪಗಳಲ್ಲಿ ಕರಾವಳಿಯ ಒಳನುಡಿಗಳ ಹಾಗೆ ಬಡಗವೂ 'ಗ' (ಗಳ್) ಒಟ್ಟನ್ನು ಬಳಸುತ್ತದೆ.

೬. ಹಲವಚನವನ್ನು ಸೂಚಿಸುವ 'ಗಳ್' ಒಟ್ಟು 'ಗೊ' ಎಂದಾಗಿರುವಲ್ಲಿ ಬಡಗ ಕರಾವಳಿಯ ಒಳನುಡಿಗಳನ್ನು ಹೋಲುತ್ತದೆ.

೭. ಕ್ರಿಯಾರೂಪಗಳಲ್ಲಿ ಮನುಷ್ಯರನ್ನು ಹೊರತುಪಡಿಸಿ ಇತರರನ್ನು ಸೂಚಿಸುವ 'ಇತು' ಒಟ್ಟನ್ನು ಮನುಷ್ಯರನ್ನು ಸೂಚಿಸುವುದಕ್ಕಾಗಿಯೂ ಬಳಸುವ ವಿಧಾನ ಕರಾವಳಿಯ ಒಳನುಡಿಗಳಲ್ಲಿರುವ ಹಾಗೆ ಬಡಗದಲ್ಲಿಯೂ ಇದೆ.

೮. ಏಳು - ಎಂಟನೇ ಶತಮಾನದಲ್ಲಿ ನಡೆದ ನಡುವಿನ ಗಿಡ್ಡ ಸ್ವರಗಳು ಮೇಲಿನ ಸ್ವರಗಳಾಗುವ ಬದಲಾವಣೆ ಬಡಗ ಕನ್ನಡದಲ್ಲೂ ನಡೆದಿದೆ. ಇದು ಈ ಒಳನುಡಿಯನ್ನಾಡುವವರು ಮಯ್ಸೂರಿಗೆ ವಲಸೆಹೋದ ಅನಂತರ ನಡೆದಿರಬೇಕು. ಯಾಕೆಂದರೆ, ಕರಾವಳಿಯಲ್ಲಿ ಈ ಬದಲಾವಣೆ ನಡೆದಿಲ್ಲ.

೯. ಉದ್ದ ಸ್ವರದ ಅನಂತರ ಮತ್ತು ಎರಡು ಗಿಡ್ಡಸ್ವರಗಳ ಅನಂತರ ತಡೆಯುಲಿಯ ಮೊದಲು ಬಂದಿದ್ದ ಮೂಗುಲಿ ಕರಾವಳಿಯ ಒಳನುಡಿಗಳಲ್ಲಿ ಉಳಿದುಕೊಂಡಿದೆ. ಇದು ಬಡಗ ಕನ್ನಡದ ಕೆಲವು ಪದಗಳಲ್ಲಿ ಉಳಿದಿದೆಯಾದರೂ ('ಏಂಗು' – ಹಂಬಲಿಸು, 'ನೀಂದು' – ಈಜು. 'ತಾಂಡು' – ಹಾರಿ ದಾಟು, 'ತಾಂಗು' – ತಾಳ್ಮೆ), ಬೇರೆ ಕೆಲವು ಪದಗಳಲ್ಲಿ ಉಳಿದಿಲ್ಲ ('ನೂಕು' (ಹವ್ಯಕ – 'ನೂಂಕು'), 'ಸಾಕು' (ಹವ್ಯಕ – 'ಸಾಂಕು'), 'ತಾಟು' (ಹವ್ಯಕ – 'ತಾಂಟು'), 'ಮರಗೊ' (ಹವ್ಯಕ – 'ಮರಂಗೊ').

೧೦. ನೀಲಗಿರಿಗೆ ವಲಸೆಹೋದ ಮೇಲೆ ಅದರಲ್ಲಿ ನಡೆದಿರುವ ಬದಲಾವಣೆಗಳಲ್ಲಿ – (ಕ) ಮೊದಲನೆಯ ಗಿಡ್ಡ ಸ್ವರದ ಅನಂತರ ಬಂದಿದ್ದ ಮೂಗುಲಿ ಮತ್ತು ಕೊರಳಿಸದ ತಡೆಯುಲಿಗಳ ಸೇರಿಕೆ ಇಮ್ಮಡಿ ತಡೆಯುಲಿಯಾಗಿ ಬದಲಾಗಿರುವುದು

('ಸತ್ತೆ' – ಸಂತೆ, 'ಒಟ್ಟಿ' – ಒಂಟಿ, 'ಕುಟ್ಟು' – ಕುಂಟು, 'ನಟ್ಟರು' – ನಂಟರು) ಮತ್ತು (ಚ) ಳಕಾರ ಮತ್ತು ಱಕಾರ ಬಿದ್ದುಹೋಗಿ ಅವುಗಳ ಹತ್ತಿರ ಇದ್ದ ಸ್ವರಗಳು ಮಡಿಚಿದ ಸ್ವರಗಳಾಗಿ ಬದಲಾಗಿರುವುದು ('ದೂ' – ದೂಳು, 'ಊ' – ಉಳು, 'ಮೂಗು' – ಮುಳುಗು, 'ಓಗ' – ಒಳಗೆ) ಮುಕ್ಯವಾದವುಗಳು.

೧.೩.೩ ಇತರ ಒಡೆತಗಳು

ಕನ್ನಡದಲ್ಲಿ ಮೇಲಿನ ಒಳನುಡಿಗಳ ಒಡೆತ ಮಾತ್ರವಲ್ಲದೆ ಬೇರೆಯೂ ಹಲವು ಒಡೆತಗಳು ನಡೆದಿರುವುದನ್ನು ಕಾಣಬಹುದು. ಇವುಗಳ ಸ್ವರೂಪ ಎಂತಹ ದೆಂಬುದಿನ್ನೂ ಸ್ಪಶ್ಟವಾಗಿಲ್ಲ. ಕನ್ನಡಿಗರು ಕರ್ನಾಟಕದ ಬೇರೆ ಬೇರೆ ಬಾಗಗಳಲ್ಲಿ ನೆಲೆಸಿದ್ದು, ಈ ಬಾಗಗಳ ನಡುವಿನ ಅಂತರದಿಂದಾಗಿ ಅವರು ಬಳಸುವ ನುಡಿಯಲ್ಲಿ ವ್ಯತ್ಯಾಸಗಳೇರ್ಪಟ್ಟಿವೆ. ಒಳನಾಡಿನಲ್ಲೇನೇ ಕಾಣಿಸುವ ಬಡಗು (ದಾರವಾಡ) ಮತ್ತು ತೆಂಕು (ಮಯ್ಸೂರು) ಎಂಬ ವ್ಯತ್ಯಾಸ ಇಂತಹದು.

ಕರಾವಳಿಯ ಹವ್ಯಕದಲ್ಲೂ ತೆಂಕು ಹವ್ಯಕ, ಬಡಗು ಹವ್ಯಕ ಮತ್ತು ಗಟ್ಟದ ಮೇಲಿನ ಹವ್ಯಕ ಎಂದೆಲ್ಲ ವ್ಯತ್ಯಾಸಗಳಿವೆ. ಆದರೆ ಈ ಯಾವ ಒಡೆತಗಳೂ ಮೇಲೆ ಸೂಚಿಸಿದ ಕರಾವಳಿ - ಒಳನಾಡು ಒಡೆತದಶ್ಟು ಮುಕ್ಯವಾದುವಲ್ಲ.

ಇಂತಹ ನುಡಿಯನ್ನಾಡುವವರ ಬಾಗವನ್ನವಲಂಬಿಸಿದ ಒಡೆತಗಳು ಮಾತ್ರವಲ್ಲದೆ ಒಂದೇ ಬಾಗದಲ್ಲೂ ಬೇರೆ ಬೇರೆ ಸಮಾಜ (ಜಾತಿ)ಗಳಲ್ಲಿ ಬಳಕೆಯಾಗುವ ಕನ್ನಡವೂ ಬೇರೆ ಬೇರಾಗಿದೆ. ಕನ್ನಡದಲ್ಲಿ ಈ ಸಮಾಜ ಇಲ್ಲವೇ ಜಾತಿಗೆ ಸಂಬಂದಿಸಿದ ಒಳನುಡಿಗಳ ನಡುವಿನ ವ್ಯತ್ಯಾಸ ಯಾವ ರೀತಿಯದು ಎಂಬುದರ ಕುರಿತಾಗಿಯೂ ಇನ್ನಶ್ಟು ಸಂಶೋದನೆಗಳನ್ನು ನಡೆಸುವ ಅವಶ್ಯಕತೆಯಿದೆ.

ಈ ಎಲ್ಲ ವ್ಯತ್ಯಾಸಗಳೂ ಕನ್ನಡ ನುಡಿಯನ್ನು ಬಳಸುವ ಈ ಬೇರೆ ಬೇರೆ ರೀತಿಯ ಪಂಗಡಗಳ ನಡುವೆ ಕಳೆದ ನೂರಾರು ವರ್ಶಗಳಲ್ಲಿ ಎಂತಹ ಸಂಪರ್ಕವಿತ್ತು ಎಂಬುದರ ಮೇಲೆ ಅವಲಂಬಿಸಿದೆ ಎಂಬುದನ್ನು ಇಲ್ಲಿ ಮರೆಯಬಾರದು.

೧.೪ ಪುಸ್ತಕದ ಸ್ವರೂಪ

ಮೂಲದ್ರಾವಿಡದಿಂದ ಕನ್ನಡದವರೆಗೆ ಮತ್ತು ಅಲ್ಲಿಂದ ಇವತ್ತಿನ ಕನ್ನಡದ ಒಳನುಡಿಗಳವರೆಗೆ ಕನ್ನಡ ನುಡಿಯ ಚರಿತ್ರೆಯಲ್ಲಿ ಎಂತಹ ಬದಲಾವಣೆಗಳೆಲ್ಲ ನಡೆದಿವೆ ಎಂಬುದನ್ನು ವಿವರಿಸುವುದೇ ಈ ಪುಸ್ತಕದ ಗುರಿಯಾಗಿದೆ. ಮೂಲದ್ರಾವಿಡ ಸ್ವರಗಳು ಬೇರಿನಲ್ಲಿ ಮತ್ತು ಒಟ್ಟಿನಲ್ಲಿ ಬೇರೆ ಬೇರೆ ರೀತಿಯ ಬದಲಾವಣೆ

ಗಳಿಗೊಳಗಾಗಿವೆಯಾದ ಕಾರಣ ಅವನ್ನು ಬೇರೆ ಬೇರಾಗಿ ಎರಡು ಮತ್ತು ಮೂರನೇ ಅದ್ಯಾಯಗಳಲ್ಲಿ ವಿವರಿಸಲಾಗಿದೆ.

ಇದಕ್ಕೆ ಬದಲು ವ್ಯಂಜನಗಳಲ್ಲಿ ನಡೆದ ಬದಲಾವಣೆಗಳನ್ನು ತಡೆಯುಲಿಗಳಲ್ಲಿ ನಡೆದವು ಮತ್ತು ಇತರ ವ್ಯಂಜನಗಳಲ್ಲಿ ನಡೆದವು ಎಂಬುದಾಗಿ ವಿಂಗಡಿಸಿ, ನಾಲ್ಕು ಮತ್ತು ಅಯ್ದನೆಯ ಅದ್ಯಾಯಗಳಲ್ಲಿ ವಿವರಿಸಲಾಗಿದೆ.

ಮೂಲದ್ರಾವಿಡದ ಪದರಚನೆ ಹೇಗಿದ್ದಿರಬೇಕು ಮತ್ತು ಅದರಲ್ಲಿ ಎಂತಹ ಬದಲಾವಣೆಗಳಾದುದರಿಂದಾಗಿ ಕನ್ನಡದ ಪದಗಳು ಸಿದ್ದವಾಗಿವೆ ಎಂಬುದನ್ನು ಆರನೆಯ ಅದ್ಯಾಯದಲ್ಲಿ ವಿವರಿಸಲಾಗಿದೆ.

ಕ್ರಿಯಾಪದಗಳ ಒಳರಚನೆಯ ಕುರಿತು ಹಲವಾರು ಸಂಗತಿಗಳನ್ನು ಈಗಾಗಲೇ ಕಂಡುಹಿಡಿಯಲಾಗಿದೆಯಾದ ಕಾರಣ ಅವನ್ನು ಬೇರೆಯೇ ಒಂದು (ಏಳನೇ) ಅದ್ಯಾಯದಲ್ಲಿ ವಿವರಿಸಲಾಗಿದೆ. ಈ ಪದಗಳಿಂದ ರಚಿಸಬಹುದಾದ ಕ್ರಿಯಾರೂಪಗಳ ಒಳರಚನೆಯನ್ನು ಮತ್ತು ಅದರಲ್ಲಿ ನಡೆದ ಬದಲಾವಣೆಗಳನ್ನು ಎಂಟನೇ ಅದ್ಯಾಯದಲ್ಲಿ ಕೈಗೆತ್ತಿಕೊಳ್ಳಲಾಗಿದೆ.

ನಾಮಪದಗಳ ಮತ್ತು ನಾಮರೂಪಗಳ ಒಳರಚನೆಯಲ್ಲಿ ನಡೆದ ಬದಲಾವಣೆಗಳನ್ನು ಒಂಬತ್ತನೇ ಅದ್ಯಾಯದಲ್ಲೂ, ಆಡುಗ ಮತ್ತು ತೋರುಗ ಪದಗಳ ಒಳರಚನೆಯಲ್ಲಿ ನಡೆದವುಗಳನ್ನು ಹತ್ತನೇ ಅದ್ಯಾಯದಲ್ಲೂ, ಗುಣಪದಗಳ ಒಳರಚನೆಯಲ್ಲಿ ನಡೆದವುಗಳನ್ನು ಹನ್ನೊಂದನೇ ಅದ್ಯಾಯದಲ್ಲೂ ವಿವರಿಸಲಾಗಿದೆ.

ಮೂಲದ್ರಾವಿಡದಲ್ಲಿ ವಾಕ್ಯರಚನೆ ಹೇಗಿದ್ದಿರಬೇಕು ಮತ್ತು ಈ ರಚನೆಯಲ್ಲಿ ಎಂತಹ ಬದಲಾವಣೆಗಳನ್ನು ಕನ್ನಡ ಮಾಡಿಕೊಂಡಿದೆ ಎಂಬುದನ್ನು ಹನ್ನೆರಡನೇ ಅದ್ಯಾಯದಲ್ಲಿ ಪರಿಶೀಲಿಸಲಾಗಿದೆ. ಈ ಪುಸ್ತಕದಲ್ಲಿ ಬಳಕೆಯಾಗಿರುವ ಪಾರಿಬಾಶಿಕ ಪದಗಳನ್ನು ಕೊನೆಯಲ್ಲಿ ವಿವರಿಸಲಾಗಿದೆ.

ಗ್ರಂಥಸೂಚಿ:

೧. ಕಾಲ್ಡ್‌ವೆಲ್ ಆರ್., ೧೯೧೩. ಎ ಕಂಪಾರೇಟಿವ್ ಗ್ರಾಮರ್ ಆಫ್ ದ ದ್ರಾವಿಡಿಯನ್ ಆರ್ ಸೌತ್ ಇಂಡಿಯನ್ ಲ್ಯಾಂಗ್ವೇಜಸ್. ಲಂಡನ್: ಕೇಗನ್. ಪಾಲ್, ಟ್ರೆಂಚ್, ಟ್ರಬ್ನರ್ ಆ್ಯಂಡ್ ಕೋ.ಲಿಮಿಟೆಡ್.

೨. ಕ್ರಿಶ್ಣಮೂರ್ತಿ ಬಿ.. ೨೦೦೩, ದಿ ದ್ರಾವಿಡಿಯನ್ ಲ್ಯಾಂಗ್ವೇಜಸ್. ಕೇಂಬ್ರಿಜ್: ಯೂನಿವರ್ಸಿಟಿ ಪ್ರೆಸ್.

೩. ಹೋಕಿಂಗ್ಸ್ ಪಿ. ಮತ್ತು ಪಯ್ಲಟ್-ರಯ್ಚೂರ್ ಸಿ., ೧೯೯೨. ಎ ಬಡಗ-ಇಂಗ್ಲಿಶ್ ಡಿಕ್ಶನರಿ (ಟ್ರೆಂಡ್ಸ್ ಇನ್ ಲಿಂಗ್ವಿಸ್ಟಿಕ್ಸ್. ಡಾಕ್ಯುಮೆಂಟೇಶನ್ ೮). ಬರ್ಲಿನ್: ಮೌಟೋನ್ ಡೆ ಗ್ರುಯಿಟರ್.

ಶಬ್ದ ಮತ್ತು ಜಗತ್ತು

ಬಿ.ಕೆ. ಮತಿಲಾಲ್

ಕನ್ನಡಕ್ಕೆ: ಎಂ.ಎ. ಹೆಗಡೆ

ಅಧ್ಯಾಯ ೧೧

ಅನುವಾದ ಮತ್ತು ಭರ್ತೃಹರಿಯ ಭಾಷಾ (ಶಬ್ದ) ಕಲ್ಪನೆ

೧. ಅನುವಾದ : ತತ್ತ್ವಶಾಸ್ತ್ರೀಯ ಸಮಸ್ಯೆ

ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಅನುವಾದಿಸುವುದನ್ನು ತತ್ತ್ವಶಾಸ್ತ್ರದ ಸಮಸ್ಯೆಗಳಲ್ಲೊಂದು ಎಂದು ಗುರುತಿಸಲಾಗಿದೆ. ಯಾಕೆಂದರೆ ಅದರ ಹಿಂದೆ ಅನ್ಯ ಸಂಸ್ಕೃತಿಯ ಅರಿವು, ಸಂಸ್ಕೃತಿಯಿಂದಾಚೆಗಿನ ವ್ಯಾಖ್ಯಾನ ಮತ್ತು ಸಂಸ್ಕೃತಿಯಿಂದಾಚೆಗಿನ ಮೌಲ್ಯಮಾಪನಗಳು ಅಡಗಿಕೊಂಡಿರುತ್ತವೆ. ಭಾಷಾತತ್ತ್ವಶಾಸ್ತ್ರದಲ್ಲಿ ಅನುವಾದದ ಸಮಸ್ಯೆಯು ವಿಭಿನ್ನ ಪಂಥಗಳಿಗೆ ಸೇರಿದ ಅನೇಕ ಆಧುನಿಕ ತಾತ್ತ್ವಿಕರ ಗಮನವನ್ನು ಸೆಳೆದಿದೆ. (ಕೆಲವು ಹೆಸರುಗಳನ್ನು ಹೇಳುವುದಾದರೆ – ಕ್ವೈನ್, ವಿಟ್‌ಗೆನ್‌ಸ್ಟೈನ್ ಮತ್ತು ದೆರಿದಾ.) ಈ ಅಧ್ಯಾಯದಲ್ಲಿ ಮೊದಲಿಗೆ ಭಾರತೀಯ ವೈಯಾಕರಣರ ಮೇಲೆ, ಅದರಲ್ಲಿಯೂ ವಿಶೇಷವಾಗಿ ಭರ್ತೃಹರಿಯ ಭಾಷಾತತ್ತ್ವದ ಮೇಲೆ ಈ ಅನುವಾದ ಕಲ್ಪನೆಯು ಮಾಡಬಹುದಾದ ಪರಿಣಾಮಗಳ ಕುರಿತು ಹೇಳುತ್ತೇನೆ. ಈ ಅಧ್ಯಾಯದಲ್ಲಿ ವ್ಯಾಕರಣಶಾಸ್ತ್ರದ ಬಗೆಗೆ ಪ್ರಾಸಂಗಿಕ ಉಲ್ಲೇಖಗಳೂ ಕೊನೆಯಲ್ಲಿ ಭಾಷಾಕೇಂದ್ರವಾದದ ಬಗೆಗೆ ಕೆಲವು ಟೀಕೆ ಟಿಪ್ಪಣಿಗಳೂ ಇವೆ.

೨. ಅನುವಾದ ಸಾಧ್ಯತೆ

‘ಭಾಷೆಯೆಂದರೇನು?’ ಇದು ಈ ಕಾಲದಲ್ಲಿ ದಿನೇ ದಿನೇ ನಮ್ಮ ಗಲಿಬಿಲಿಯನ್ನು ಹೆಚ್ಚಿಸುತ್ತಿರುವ ಪ್ರಶ್ನೆ. ಕೆಲವೊಮ್ಮೆ ಇಂದು ಭಾಷಾವಿಜ್ಞಾನವೆಂದು ಕರೆಸಿಕೊಳ್ಳುತ್ತಿರುವ ಶಾಸ್ತ್ರದ ಅಧ್ಯಯನದ ವಸ್ತುವೇ ಭಾಷೆಯೆಂದು ಹೇಳಿದ್ದೂ ಇದೆ. ಹಾಗೆ

ಅಂತಾದರೆ, ಅದು ಬೇರೆ ಬೇರೆ ಭಾಷಾವಿಜ್ಞಾನಿಗಳು ತಮ್ಮ ಸಿದ್ಧಾಂತಗಳನ್ನು ತೂಗುಹಾಕಬಹುದಾದ ಯಾವಾಗಲೂ ಬೆಳೆಸುತ್ತಿರುವ ಗೂಟವಾಗಿಬಿಡುತ್ತದೆ. 'ಶಬ್ದ'ವೆಂಬುದರ ಮೂಲಕ ಭರ್ತೃಹರಿಯು ಹೇಳಲು ಬಯಸಿದ ಅರ್ಥವೇನೆಂಬುದು ಎಲ್ಲ ಕಡೆಗಳಲ್ಲೂ ನಿಚ್ಚಳವಾಗಿದೆಯೆನ್ನುವಂತಿಲ್ಲ. ಆದರೆ ಅವನು ಅದರ ಬಗೆಗೆ ಬಹಳಷ್ಟು ಸಂಗತಿಗಳನ್ನು ಹೇಳಿದ್ದಾನೆ; ಅಥವಾ ಅದರ ಬಗೆಗೆ ವ್ಯಾಪಕವಾದ ಬರವಣಿಗೆಯನ್ನು ಮುಂದಿನ ಕಾಲಕ್ಕೆ ಬಿಟ್ಟಿದ್ದಾನೆ. ಈ ಬರವಣಿಗೆಗಳನ್ನು ಆಧರಿಸಿ ನಾವು ಭರ್ತೃಹರಿಯ 'ಮಾತು' (ಶಬ್ದ) ಅಥವಾ ಭಾಷೆಯ ಕುರಿತಾದ ಸಿದ್ಧಾಂತದ ಬಗೆಗೆ ಹೇಳಬಹುದು. ಶಬ್ದವನ್ನು ಭಾಷೆಯೆಂದು ನಾನು ಅನುವಾದಿಸಿದ್ದೇನೆ. ಹಾಗೆಂದರೆ ಭಾಷೆಯು ಯಾವಾಗಲೂ ಧ್ವನಿರೂಪದಲ್ಲಿರುವುದೆಂದೋ ಅಥವಾ ಭಾಷೆಯ ಸಾರವು ಧ್ವನಿಯಲ್ಲಿದೆಯೆಂದೋ ನನ್ನ ಅಭಿಪ್ರಾಯವಲ್ಲ. ಯಾಕೆಂದರೆ ಭರ್ತೃಹರಿಯ ದೃಷ್ಟಿಯಲ್ಲಿ ಭಾಷೆಯ ಸಾರಸತ್ತ್ವವು ಧ್ವನಿರಹಿತವಾದದ್ದು. ಅವನು ಧ್ವನಿರಹಿತವಾದ ಮಾತು ಅಥವಾ ಮಾತಿನ ಬೀಜದ ಬಗೆಗೆ ಸಾಕಷ್ಟು ವಿಸ್ತಾರವಾಗಿಯೇ ಹೇಳಿದ್ದಾನೆ. ಅದು ವರ್ತನಾವಾದಿಗಳು ಹೇಳುವ ರೀತಿಯ 'ಮೌನದ ಮಾತು' (Silent Speech) ಅಥವಾ (ಪ್ಲೇಟೋನ ಪದಪುಂಜದಿಂದ ನಿಷ್ಪನ್ನವಾದ) 'ನಮ್ಮೊಳಗೆ ನಾವಾಡಿಕೊಳ್ಳುವ ಮಾತು' ಎಂಬಂತೆ ಸಾಧಾರಣವಾಗಿ ಹೇಳುವಂಥದಲ್ಲ. ಭರ್ತೃಹರಿಯ ದೃಷ್ಟಿಯಲ್ಲಿ ಅದು ಪರಮಪ್ರಧಾನ ಪರಿಕಲ್ಪನೆ. (ಆರನೇ ಅಧ್ಯಾಯವನ್ನು ನೋಡಿ.)

ನಮ್ಮ ಗತಕಾಲದ ಪಯಣವು ಪೂರ್ಣವೂ ಅಲ್ಲ; ಅಂತಿಮವೂ ಅಲ್ಲ. ಇದು ಇಂದು ನಮಗೆ ಲಭ್ಯವಾಗಿರುವ ಸಂಗತಿಗಳ ಮೇಲಿನ ನಮ್ಮ ನಿಯಂತ್ರಣದ ಮೂಲಕ ನಾವು ಬಹಳ ಹಿಂದೆಯೇ ಬಿಟ್ಟುಬಂದ ನಾಡಿನ ಎಲ್ಲೆಕಟ್ಟುಗಳನ್ನು ಪೂರ್ತಿಯಾಗಿ ಶೋಧಿಸಲಾರೆವು ಎಂಬುದಕ್ಕಾಗಿ ಅಲ್ಲ. ಬದಲಿಗೆ ಇಂದು ನಾವು ಪ್ರಾಚೀನ ನೆಲೆಗಳತ್ತ ಹೊಸಪಯಣ ಕೈಗೊಂಡಿದ್ದೇವೆ: ಹೊಸ ದೃಷ್ಟಿಕೋನದಿಂದ ಹೊಸ ಪ್ರದೇಶಗಳನ್ನು ನೋಡಲು ಹೊರಟಿದ್ದೇವೆ. ನಮಗೆ ದೊರೆತ ನಕ್ಷೆಗಳು ಯಾವಾಗಲೂ ಸರಿಯಾಗಿರುತ್ತವೆಂದು ಹೇಳಲಾಗದು. ಆದರೂ ಪ್ರತಿಬಾರಿಯೂ ನಾವು ಹೊಸ ನಕ್ಷೆಯ ಸಂಪಾದನೆಗೆ ಹವಣಿಸುತ್ತೇವೆ.

ಪ್ರಾಚೀನ ಭಾರತದಲ್ಲಿ ವ್ಯಾಕರಣಶಾಸ್ತ್ರವು ಶಾಸ್ತ್ರಗಳ ಕೇಂದ್ರವೆನಿಸಿತ್ತು. ಅದು ವೇದ, ಯಜ್ಞ, ತರ್ಕ ಮತ್ತು ದರ್ಶನ ಶಾಸ್ತ್ರಗಳ ಅಧ್ಯಯನದ ಕೇಂದ್ರಸ್ಥಾನದಲ್ಲಿತ್ತು. ಅದನ್ನೊಂದು ವೇದಾಂಗ ಅಂದರೆ ವೇದಗಳ ಅಧ್ಯಯನಕ್ಕೆ ಸಹಾಯಕವೆಂದು ಪರಿಗಣಿಸಲಾಗಿತ್ತು; ಅದು ಇತರ ಶಾಸ್ತ್ರಗಳ ಅಧ್ಯಯನಕ್ಕೆ ಪ್ರವೇಶದ್ವಾರ (ಮುಖ)

ವಾಗಿತ್ತು. ಭರ್ತೃಹರಿಯು ಮೂಲತಃ ಪಾಣಿನಿಯ ಪರಂಪರೆಗೆ ಸೇರಿದ ವೈಯಾಕರಣ. (ಬಹುಶಃ ಕವಿಯೂ ಹೌದು.) ನಾವು ಇಂದು ಭಾಷಾತತ್ತ್ವಶಾಸ್ತ್ರ ಮತ್ತು ವ್ಯಾಕರಣ-ತತ್ತ್ವಶಾಸ್ತ್ರವೆಂದು ಗುರುತಿಸುವ ಶಾಸ್ತ್ರದ ಮೂಲಭೂತವಾದ ಪುನರ್ ಮೌಲ್ಯಮಾಪನಕ್ಕೆ ಕಾರಣಪುರುಷ. ಅವನ ಪ್ರಮುಖವಾದ ಕೃತಿ 'ವಾಕ್ಯಪದೀಯ' (ವಾಕ್ಯ ಮತ್ತು ಪದಗಳಿಗೆ ಸಂಬಂಧಿಸಿದ್ದು). ಇದರಲ್ಲಿ ಮೂರು ಬೇರೆ ಬೇರೆ ಭಾಗಗಳಿದ್ದು ಸುಮಾರು ೨೦೦೦ ಶ್ಲೋಕಗಳಿವೆ. (ಅವನದೆಂದು ಹೇಳಿ ಬೇರೆಯವರು ಉದ್ಧರಿಸುವ ಅನೇಕ ಶ್ಲೋಕಗಳು ನಮಗೆ ದೊರೆತಿರುವ ಆವೃತ್ತಿಯಲ್ಲಿಲ್ಲ. ಚೀನಾದ ಪ್ರವಾಸಿಯಾದ ಇತ್ಸಿಂಗನು ತನ್ನ ಎಂದಿನ ಅತಿಶಯೋಕ್ತಿಯ ಶೈಲಿಯಲ್ಲಿ ಈ ಗ್ರಂಥದಲ್ಲಿ ೩೨೦೦ ಶ್ಲೋಕಗಳಿದ್ದವೆಂದು ಹೇಳಿದ್ದಾನೆ.) ಭರ್ತೃಹರಿಯು ಮಾತು ಅಥವಾ ಭಾಷೆಗೆ ಸಂಬಂಧಿಸಿದಂತೆ ಅನನ್ಯವಾದ ಸಿದ್ಧಾಂತವೊಂದನ್ನು ಪ್ರತಿಪಾದಿಸಿದ್ದಾನೆ. ಅವನ್ನು ನೈಯಾಯಿಕ, ಬೌದ್ಧ, ಜೈನ ಮತ್ತು ಮೀಮಾಂಸಕರೆಲ್ಲ ಬಲವಾಗಿ ವಿಮರ್ಶಿಸಿದ್ದಾರೆ, ಖಂಡಿಸಿದ್ದಾರೆ. ಆದರೆ ಅವನ ಗುರುತು ಮಾಸಿಲ್ಲ. ಇತರರ ಮೇಲೆ ಅವನ ಪ್ರಭಾವವು ಪರೋಕ್ಷವಾಗಿ ಕಂಡುಬಂದರೆ, ಕಾಶ್ಮೀರ ಶೈವಸಿದ್ಧಾಂತದ ಪ್ರವರ್ತಕರ ಮೇಲೆ, ವಿಶೇಷವಾಗಿ ಉತ್ಪಲ, ಅಭಿನವಗುಪ್ತರ ಮೇಲೆ ನೇರವಾಗಿಯೇ ಕಂಡುಬರುತ್ತದೆ (ನೋಡಿ ಅ. ೧೨). ಅನುವಾದವನ್ನು ಕುರಿತ ನಮ್ಮ ಕಲ್ಪನೆಯ ಮೇಲೆ ಭರ್ತೃಹರಿಯ ಸಿದ್ಧಾಂತವು ಉಂಟುಮಾಡಬಹುದಾದ ಪರಿಣಾಮಗಳನ್ನು ನೋಡುವುದಕ್ಕಾಗಿ ಅವನ ಸಿದ್ಧಾಂತಗಳನ್ನು ಪರಿಚಯಿಸುವ ಪ್ರಯತ್ನ ನನ್ನದು. ಇದೊಂದು 'ಗತಕಾಲದತ್ತ ಪಯಣ'ವೆನಿಸಿದರೂ ಆ ಅನ್ವೇಷಣೆಯು ತುಂಬ ಉಪಯುಕ್ತವೆಂಬುದು ನನ್ನ ನಂಬುಗೆ.

ಅನುವಾದವೆಂಬ ಚಟುವಟಿಕೆಯನ್ನು ತತ್ತ್ವಶಾಸ್ತ್ರಜ್ಞರಾಗಲಿ, ಸಾಮಾಜಿಕ ಮಾನವಶಾಸ್ತ್ರಜ್ಞರಾಗಲಿ, ವಿಚಾರಗಳ ಇತಿಹಾಸಕಾರರಾಗಲಿ ಔದಾಸೀನ್ಯದಿಂದ ನೋಡುವಂತಿಲ್ಲ. ಆಧುನಿಕ ತತ್ತ್ವಶಾಸ್ತ್ರದ ಚಟುವಟಿಕೆಗಳಿಗಂತೂ ಇದು ತುಂಬ ಪ್ರಸ್ತುತವೆನಿಸಿದೆ. ಇದಕ್ಕೆ ಜಗತ್ತಿನ ವಿವಿಧ ಭಾಗಗಳಲ್ಲಿರುವ ತಾತ್ತ್ವಿಕರು ಬಹುಕಾಲದಿಂದಲೂ ವಿವಿಧ ಭಾಷೆಗಳಲ್ಲಿ ಬರೆಯುತ್ತಿದ್ದಾರೆಂಬ ಸ್ಪಷ್ಟ ಮತ್ತು ಅಲ್ಪವಾದ ಸಂಗತಿಯು ಮಾತ್ರ ಕಾರಣವಲ್ಲ. ಇನ್ನೂ ಮಹತ್ತ್ವದ್ದೆಂದರೆ ಇನ್ನಷ್ಟು ಆಳವಾದ ಅರ್ಥದ ಅನುವಾದ ಕ್ರಿಯೆಯು ದಾರ್ಶನಿಕ ಪ್ರಕ್ರಿಯೆಯ ಸ್ವೀಕೃತಶೈಲಿಯ ಒಂದು ಭಾಗವೇ ಆಗಿದೆ. ಸೌಮ್ಯವಾಗಿ ಹೇಳುವುದಾದರೆ ತತ್ತ್ವಶಾಸ್ತ್ರಜ್ಞನೊಬ್ಬನು ಯಾವುದೇ ಪ್ರೇರಣೆಯಿಂದ ಪ್ರಾಚೀನ ಅಥವಾ ಆಧುನಿಕ ತಾತ್ತ್ವಿಕರ ಬರಹಗಳನ್ನು ಓದಲು ಪ್ರಾರಂಭಿಸುವಾಗಲೇ ಅನಲ್ಪ ಅರ್ಥದ 'ಅನುವಾದ'ವು ನಡೆಯುತ್ತಲೇ

ಇರುತ್ತದೆ. ಅದೇ ಸಾಮಗ್ರಿಗಳಿಗೆ ವಿಭಿನ್ನ 'ಓದುವಿಕೆ'ಯಿರಬಹುದು; ಅದರಿಂದ ಅನಿವಾರ್ಯವಾಗಿ ವಿಭಿನ್ನವಾದ 'ಅರ್ಥ'ವುಂಟಾಗಬಹುದು; ವಿಭಿನ್ನ ವ್ಯಾಖ್ಯಾನವಿರಬಹುದು. ಈ ಮಾತಿಗೆ ಸ್ವಲ್ಪ ಹಳಸಲು ವಾಸನೆಯಿದೆಯೆನ್ನಿಸಬಹುದು. ಅದನ್ನು ದೂರಗೊಳಿಸಲು ಮತ್ತೆರಡು ಸಂಗತಿಗಳನ್ನು ಗಮನಿಸುವುದು ಅವಶ್ಯ. 'ಅರ್ಥಗಳು' ಅಥವಾ 'ವ್ಯಾಖ್ಯಾನಗಳು' ಎಂಬುದನ್ನು ತೀರ ಶಬ್ದಶಃ ಅರ್ಥದಲ್ಲಿ ತೆಗೆದುಕೊಳ್ಳಬಾರದು ಮತ್ತು 'ಓದುವಿಕೆ' ಮತ್ತು 'ಅರ್ಥ'ಗಳಲ್ಲಿ ಅವಶ್ಯವಾದ ಭೇದವಿದೆಯೆಂದು ತಿಳಿಯಕೂಡದು. ಪ್ರತಿಯೊಂದು 'ಓದುವಿಕೆ'ಯೂ ಸೃಜನಶೀಲವಾದ ಪ್ರತಿಪಾದನೆಯಾಗಿರುತ್ತದೆ; ಆದ್ದರಿಂದ ಅವನ್ನು ಆಧರಿಸಿದ ಅನುವಾದವು ಸೃಜನಶೀಲ ರೂಪಾಂತರವಾಗುತ್ತದೆ. ಭರ್ತೃಹರಿಯ ಶಬ್ದ ಮತ್ತು ಅರ್ಥಗಳ ಸಿದ್ಧಾಂತವನ್ನು ಗಂಭೀರವಾಗಿ ತೆಗೆದುಕೊಂಡರೆ ಶುದ್ಧವಾಚ್ಯದ ನಿಜವಾದ ವರ್ಗಾವಣೆಯು ಅಸಾಧ್ಯ. ಅಥವಾ ಪದ್ಯವೊಂದರ 'ಕನ್ಯಾತ್ವಸಂಪನ್ನ' ಅರ್ಥವನ್ನು ಇನ್ನೊಂದಕ್ಕೆ ವರ್ಗಾಯಿಸಲು ಸಾಧ್ಯವಿಲ್ಲ. ಯಾಕೆಂದರೆ ಅದು ಮೂಲಪದ್ಯದಿಂದ ಬೇರೆಯಾಗಿ ಅರ್ಥಕ್ಕೆ ತನ್ನದೇ ಆದ ವೈಭವವಿದೆಯೆಂಬ ಸಾರ್ವತ್ರಿಕ ಭ್ರಮೆಯನ್ನು ಆಧರಿಸಿಕೊಂಡಿದೆ. ವಿಚಾರ (ಅರ್ಥ, ಯೋಜನೆ) ಅಥವಾ 'ಹೇಳಿದ್ದೇನು?' ಎಂಬುದನ್ನು ಮಾತಿನಿಂದ ಅಥವಾ ಪದ್ಯದಿಂದ ಬೇರ್ಪಡಿಸಬಹುದೆಂಬ ವಿಚಾರವೇ ಭರ್ತೃಹರಿಯ ಸಪ್ರೋದಿತ ಭಾಷಾಪರಿಕಲ್ಪನೆಗೆ ಹೊಂದುವುದಿಲ್ಲ. ಆದ್ದರಿಂದ ಒಂದು ವೇಷದಲ್ಲಿದ್ದ ವಿಚಾರ (ಯೋಜನೆ)ವನ್ನು ಇನ್ನೊಂದಕ್ಕೆ ವರ್ಗಾಯಿಸುವ ಅನುವಾದವೆಂಬುದೇ ಈ ಸಿದ್ಧಾಂತದ ಪ್ರಕಾರ ಅಸಾಧ್ಯವೆನಿಸುತ್ತದೆ.

ವಾಸ್ತವವಾದಿಗಳಾದ ನೈಯಾಯಿಕರು ವಾಚ್ಯ (ವಸ್ತು) ಮತ್ತು ವಾಚಕ (ಶಬ್ದ)ಗಳಲ್ಲಿ ಮೂಲಸ್ವರೂಪದ ಭೇದವಿದೆಯೆಂದು ಹೇಳುತ್ತಾರೆ. ಇದು ಸಾಂಪ್ರದಾಯಿಕ ಪಾಶ್ಚಾತ್ಯ ಆಧುನಿಕ ಭಾಷಾವಿಜ್ಞಾನಿಗಳ ಸರ್ವಸಮ್ಮತ ಅಭಿಪ್ರಾಯಕ್ಕಿಂತ ಬೇರೆಯದಾಗಿಲ್ಲವೆಂಬುದು ಆಶ್ಚರ್ಯಕರ. ಭಾಷೆಯು ವಿಚಾರ ಅಥವಾ ಅರ್ಥದ (thought and meaning) ವಾಹಕವೆಂದು ವಿಮರ್ಶಾರಹಿತವಾಗಿ ಭಾವಿಸುವುದನ್ನು ಬಹುತೇಕವಾಗಿ ಕಾಣಬಹುದು. ಇದರಿಂದ ಬಹುಭಾಷಾಮಯವಾದ ಪ್ರಪಂಚದಲ್ಲಿ ಒಂದೇ ವಿಚಾರವನ್ನು ಬೇರೆ ಬೇರೆ ಭಾಷೆಗಳ ಭಾಗಗಳೆಂದು ಗುರುತಿಸಬಹುದಾದ ಬೇರೆ ಬೇರೆ ಅಭಿವ್ಯಕ್ತಿಗಳಿಂದ ಸಂವಹನಗೊಳಿಸಬಹುದೆಂಬ ವ್ಯಾಪಕ ಕಲ್ಪನೆಯು ಪ್ರವಹಿಸಿದೆ. ಇದನ್ನೇ 'ತತ್ತ್ವಶಾಸ್ತ್ರಜ್ಞರ ಅತೀತವಾಚ್ಯದ ಹುಡುಕಾಟದ ಹಳೆಯ ಹಂಬಲ'ವೆಂದು ಆಧುನಿಕ ತಾತ್ತ್ವಿಕ ಜಾಕ್ಸ್ ದೆರಿದಾ ಕರೆದುದಿರಬೇಕು. ಅಂದರೆ ವಾಚ್ಯ-ವಾಚಕಗಳೆಂಬ ದ್ವೈತ ಮತ್ತು ವಿರೋಧಗಳನ್ನು

ನಮ್ಮ ಮೇಲೆ ಬಲಾತ್ಕಾರವಾಗಿ ಹೇರುವ ಭಾಷೆಯ ಹಂಗಿಲ್ಲದ ಸ್ವತಂತ್ರವಾದುದರ ಪರಿಕಲ್ಪನೆ. ಈ ದ್ವೈತ ಅಥವಾ ಉಭಯಾತ್ಮಕತೆಯ ಆರೋಪಣೆಯಿಂದ ವಿವಿಧ ಭಾಷಾಂತರಗಳ ನಡುವೆಯೂ ಶುದ್ಧ ವಾಚ್ಯವು ಸ್ಥಿರವಾಗಿರುವ ಸರ್ವಸಾಧಾರಣತೆಯು ಸಿದ್ಧಿಸುತ್ತದೆ. ಕರೆನ್ಸಿಯು ಬದಲಾದರೂ ಹಣದ ಮೌಲ್ಯವು ಬದಲಾಗದಿರುವಂತೆ ಭರ್ತೃಹರಿಯ ವಿಚಾರದ ಬೆಳಕಿನಲ್ಲಿ ಹೇಳುವುದಾದರೆ ಈ ಸರ್ವಸಾಧಾರಣತೆಯನ್ನು ನಾವು ತೊರೆಯಬೇಕಾಗುತ್ತದೆ. ಯಾಕೆಂದರೆ ಭರ್ತೃಹರಿಯ ದೃಷ್ಟಿಯಲ್ಲಿ ವಾಚ್ಯ-ವಾಚಕವೆಂಬ ಭೇದವು (ವಾಕ್ ಮತ್ತು ಅರ್ಥ) ವಾಸ್ತವವಲ್ಲ; ಕೇವಲ ಕಲ್ಪನೆ. ಅದೊಂದು ವಿಕಲ್ಪ; ಅನುಕೂಲಕ್ಕಾಗಿ ಕಟ್ಟಿಕೊಂಡ ಕಲ್ಪನೆ. ಅದಕ್ಕೆ ಅಂತಿಮ ಅಥವಾ ಪಾರಮಾರ್ಥಿಕ ಸತ್ಯತೆಯಿಲ್ಲ. ಭರ್ತೃಹರಿಯ ಪ್ರಕಾರ ಅವುಗಳಲ್ಲಿರುವುದು ಅದ್ವೈತ. ಅವುಗಳಲ್ಲಿ ಭೇದವನ್ನು ಕಲ್ಪಿಸುವುದು ಉಪಯುಕ್ತವಾದ ಉಪಾಯ. ಅಂಥ ಉಪಾಯವು ಅನಿವಾರ್ಯವೆನಿಸುತ್ತದೆ. ಯಾಕೆಂದರೆ ಅದರಿಂದ ನಮ್ಮ ತಿಳಿವಿಗೆ ಅನುಕೂಲವೊದಗುತ್ತದೆ. ಅದರ ಸಾರಸತ್ವವೆಲ್ಲ ಹುದುಗಿರುವುದು ಪ್ರಾಕರಣಿಕತೆಯಲ್ಲಿ (ಸಾಂದರ್ಭಿಕತೆ). ಆದ್ದರಿಂದ ಪ್ರಕರಣ ಅಥವಾ ಸಂದರ್ಭದಿಂದಾಚೆಗೆ ಅದಕ್ಕೆ ಅಂತಿಮವಾದ ಮೌಲ್ಯವಿಲ್ಲ. ಅದು ಉಪಾಯವಾಗಿರುವಂತೆ ಆಟವೂ ಹೌದು. ಆಟದಲ್ಲಿ ನಿಯಮಗಳಿರುತ್ತವೆ. ಆಟವಾಡುತ್ತಿರುವಷ್ಟು ಸಮಯವೂ ಅವುಗಳಿಗೆ ಸತ್ಯದ ಮೌಲ್ಯವೇ. ಆದರೆ ಆಟ ಮುಗಿದ ಮೇಲೆ ಅಂಥ ಮೌಲ್ಯ ಅವುಗಳಿಗಿಲ್ಲ. ಈ ಅರ್ಥದಲ್ಲಿಯೇ ವಿಕಲ್ಪವೆಂದು ಕರೆಯುವುದು. ಹೀಗೆ ಭರ್ತೃಹರಿಯ ಸರ್ವೋದಿತ ಭಾಷಾ ಸಿದ್ಧಾಂತದಲ್ಲಿ ವಾಚ್ಯ (signified) ಮತ್ತು ವಾಚಕ (signifier)ಗಳ ಐಕ್ಯವು ಒಂದು ಭಾಗ. ಈ ಸಿದ್ಧಾಂತದ ಪ್ರಕಾರ 'ಅತೀತ' ವೆಂದು ಕರೆಯಬಹುದಾದ ಸ್ವತಂತ್ರ ಅರ್ಥದ ಹುಡುಕಾಟವನ್ನು ಬಿಡಬೇಕಾಗುತ್ತದೆ. ಯಾಕೆಂದರೆ ಅಂಥ ಅರ್ಥವು ಅನುವಾದಗಳಲ್ಲಿ ಸ್ಥಿರವಾದದ್ದೂ, ಭಾಷೆಗಳ ಬದಲಾವಣೆಯೊಂದಿಗೆ ಬದಲಾಗದ್ದೂ ಆಗಿರಬೇಕಾಗುತ್ತದೆ. ಆದರೆ ಅದೇ ಸಿದ್ಧಾಂತವು ಪ್ರಾಕರಣಿಕ (ಸಾಂದರ್ಭಿಕ)ವಾದ ಅರ್ಥ ಅಥವಾ ವಾಚ್ಯವನ್ನು ಒಪ್ಪಿಕೊಳ್ಳುತ್ತದೆ. ಅವು ಬೇರೆ ಬೇರೆ ಭಾಷಿಕ ಅಭಿವ್ಯಕ್ತಿ ಅಥವಾ ವಾಚಕಗಳೊಂದಿಗೆ ಸಹಸಂಬಂಧವನ್ನು ಹೊಂದಿರಬಹುದು; ಆ ಕಾರಣದಿಂದ ಅವುಗಳನ್ನು ಸಮಾನಾರ್ಥಕಗಳೆಂದು ಹೇಳಬಹುದು. ಈ ಸಿದ್ಧಾಂತದಲ್ಲಿ ಭಾಷಿಕ ಅಭಿವ್ಯಕ್ತಿಗಳು ಕೇವಲ ವಿಚಾರಗಳ ವಾಹಕಪಟ್ಟಿಕೆಗಳಲ್ಲವಾದುದರಿಂದ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಮೀಸಲು ಮುರಿಯದ ಅರ್ಥವನ್ನು ಪೂರ್ತಿಯಾಗಿ ಎತ್ತಿಡಲು ಸಾಧ್ಯವಿಲ್ಲ. ಪ್ರತಿಯೊಂದು ವಿಚಾರವೂ ಅದರ ಶಾಬ್ದಿಕ ಆಚ್ಛಾದನದ (ಹೊದಿಕೆಯ) ಅವಿಭಾಜ್ಯ ಅಂಶವೇ ಆಗಿರುತ್ತದೆ. ಅವುಗಳನ್ನು ವಿಭಜಿಸಲು

ಸಾಧ್ಯವಿಲ್ಲ. ಮಹಾಭಾರತದ ಕರ್ಣನು ಕವಚವನ್ನು ಬಿಡದೆಯೇ ಜನ್ಮತಾಳಿದಂತೆ ಬಿಡಲಾರದ ಬೆಸುಗೆ ಶಬ್ದಾರ್ಥಗಳ ಉಸಿರು.

ಇಲ್ಲಿ ಸಹಜವಾಗಿ ಹುಟ್ಟುವ ಪ್ರಶ್ನೆ ಇದು: ಒಳ್ಳೆಯ ಅನುವಾದವನ್ನು ಕೆಟ್ಟ ಅನುವಾದದಿಂದ ಬೇರ್ಪಡಿಸುವುದು ಹೇಗೆ? ವಿರೂಪಗೊಳಿಸಿದ್ದನ್ನೋ ಮಿಥ್ಯಾ ಪ್ರತ್ಯಯವನ್ನೋ ಅನುವಾದದ ಮೂಲಕ ನಿರ್ಧರಿಸುವುದು ಹೇಗೆ? ಒಂದು ಅನುವಾದವು ಇನ್ನೊಂದು ಅನುವಾದದಷ್ಟೇ ಒಳ್ಳೆಯದಾಗಿದೆಯೆಂದು ಹೇಳುವುದಕ್ಕೆ ಮನಸ್ಸು ಒಪ್ಪಲಾರದಲ್ಲವೇ? (ಈ ಕ್ಷಣದಲ್ಲಿ ಅನುವಾದದ ಬಗೆಗೆ ಕೃತಿನಿಷ್ಠ ವಿಚಾರಗಳನ್ನು ಪರಿಗಣಿಸುತ್ತಿಲ್ಲ.) ಇದಕ್ಕೆ ಸಂಭಾವ್ಯ ಉತ್ತರವು ಹೀಗಿರಬಹುದು: ಕೇವಲ ಬೇರೆ ಬೇರೆ ಭಾಷೆಗಳ ಅರ್ಥವಿಜ್ಞಾನದ ನಿಯಮಗಳನ್ನು ಆಧರಿಸಿ ಅನುವಾದವು ಒಳ್ಳೆಯದೋ ಕೆಟ್ಟದ್ದೋ, ವಿರೂಪಗೊಂಡಿದೆಯೋ ಸರಿಯಾಗಿದೆಯೋ ಅಥವಾ ತಪ್ಪಾಗಿದೆಯೋ ಎನ್ನುವುದನ್ನು ಸರಳವಾಗಿ ತೀರ್ಮಾನಿಸಲಿಕ್ಕಾಗುವುದಿಲ್ಲ. ಪ್ರತಿಯೊಂದು ಅನುವಾದವನ್ನು ಎಲ್ಲ ವೈಶಿಷ್ಟ್ಯಗಳಿಂದ ಕೂಡಿದ ಸಮಗ್ರ ಸನ್ನಿವೇಶದಲ್ಲಿ ನೋಡಬೇಕಾಗುತ್ತದೆ. ಅಂದರೆ ಅದು ಹುಟ್ಟಿಸುವ ಎಲ್ಲ ಪ್ರತಿಕ್ರಿಯೆ, ಪರಿಣಾಮ, ಪ್ರೇರಣೆ ಮತ್ತು ಬಲವು ನಿಲುವುಗಳ ಪ್ರಕಾರಗಳನ್ನು ಪರಿಗಣಿಸ ಬೇಕಾಗುತ್ತದೆ. ಅಪೇಕ್ಷಿತ ಪರಿಣಾಮವನ್ನುಂಟುಮಾಡುವುದರ ಸಲುವಾಗಿ ಅರಿತೋ ಅರಿಯದೆಯೋ ಅನುವಾದಕನು ಅನುವಾದಿತ ರೂಪ ಅಥವಾ ಅಭಿವ್ಯಕ್ತಿ ವಿಧಾನಗಳನ್ನು ಬಳಸುತ್ತಾನೆಂಬುದು ಗೊತ್ತಿರುವ ಸಂಗತಿಯೇ ಆಗಿದೆ. ಒಂದು ಮಿತಿಯ ವರಗೆ ಅವನು ಆಯ್ದುಕೊಂಡ ವಿಧಾನಗಳು ಸಹನೀಯವಾಗುತ್ತವೆ. ಅದು ಅಸಹನೀಯ ವಾದಾಗ ಅನುವಾದವು ಕೆಟ್ಟದಾಗುತ್ತದೆ. ಅನುವಾದವು ಕೆಟ್ಟದ್ದೊ ಅಥವಾ ವಿರೂಪಗೊಂಡದ್ದೋ ಎನ್ನುವುದನ್ನು ಅದರ ಅಸಹನೀಯತೆಯ ಆಧಾರದ ಮೇಲೆ ತೀರ್ಮಾನಿಸಬಹುದು.

ಸಂಸ್ಕೃತದ ವಾಚಕ - ವಾಚ್ಯ ಎಂಬುದಕ್ಕೆ ಸಂವಾದಿಯಾಗಿ ನಾನು ಆಧುನಿಕ ಭಾಷಾವಿಜ್ಞಾನಿಗಳ signifier - signified ಎಂಬ ಪದಗಳನ್ನು ಬಳಸಿದ್ದೇನೆ. ಅವುಗಳಲ್ಲಿ ಸಾಕಷ್ಟು ಸಾಮ್ಯವಿದೆಯಾದರೂ ಆ ಪದಾವಳಿಗಳನ್ನು ಬೆಸೆಯುವುದು ಸರಿಯಲ್ಲ. ನಾನು ಅವುಗಳನ್ನು ಹೋಲಿಸಲಿಕ್ಕಾಗಲಿ ಐಕ್ಯತೆಯನ್ನು ಸಾಧಿಸಲಿಕ್ಕಾಗಲಿ ಹೊರಟಿಲ್ಲ. ಬಳಕೆಯು ಸ್ವಲ್ಪ ಶಿಥಿಲವಾಗಿರಲೆಂದು ನಾನು signification ಮತ್ತು designation (ಅರ್ಥಸೂಚನ ಮತ್ತು ಅಭಿಧಾನ) ಗಳನ್ನು ಪರ್ಯಾಯಪದಗಳನ್ನಾಗಿ ಬಳಸುತ್ತೇನೆ. ಇದು ನನ್ನ ಉದ್ದೇಶಕ್ಕೆ ಸಾಕು. ಸಂಸ್ಕೃತದಲ್ಲಿ ವಸ್ತು - ಪದಗಳ ಸಂಬಂಧವನ್ನು ವಾಚ್ಯ - ವಾಚಕ ಭಾವ ಎನ್ನುತ್ತೇವೆ. ಪಾಶ್ಚಾತ್ಯ ಭಾಷಾವಿಜ್ಞಾನಿಗಳ

ಪಾರಿಭಾಷಿಕ ಪದಗಳಾದ signifier - signified ಗಳ ಭೇದಕ್ಕೂ ಇದಕ್ಕೂ ಇರುವುದು ದೂರದ ಅನುರಣನ.

೩. ಶಬ್ದ : ಭರ್ತೃಹರಿಯ ದೃಷ್ಟಿ

ಇಲ್ಲಿ ನಾನು ಭರ್ತೃಹರಿಯ ವಾಕ್ಯಪದೀಯದಿಂದ ಸುಮಾರು ಹನ್ನೆರಡು ಶ್ಲೋಕಗಳನ್ನು ಪ್ರಸ್ತುತಪಡಿಸುತ್ತಿದ್ದೇನೆ. ಅವನ ಶಬ್ದ ಸಿದ್ಧಾಂತವು (ಭಾಷೆಯ ಕುರಿತಾದ ಸಿದ್ಧಾಂತವು) ಅತ್ಯಂತ ಸಂಕೀರ್ಣವಾಗಿದೆ. ಅವನ ದೃಷ್ಟಿಯಲ್ಲಿ ಭಾಷೆಯೆಂಬುದು ಒಂದು ಚಟುವಟಿಕೆ. ಇದು ಮನುಷ್ಯರಲ್ಲ. ಅಷ್ಟೇ ಏಕೆ, ಚೈತನ್ಯವುಳ್ಳ ಜೀವಿಗಳೆಲ್ಲ ತೊಡಗಿಕೊಂಡಿರುವ ಒಂದು ವಿಧವಾದ ಚಟುವಟಿಕೆ. ಇದಕ್ಕೆ ಶಬ್ದನ ಅಥವಾ ಶಬ್ದನವ್ಯಾಪಾರವೆಂದು ಸಂಸ್ಕೃತದಲ್ಲಿ ಕರೆಯಲಾಗಿದೆ. ಇದು 'ಭಾಷೀಕರಣ'. ಭರ್ತೃಹರಿಯ ರೂಪಕವನ್ನು ಹೇಳುವುದಾದರೆ ಇದು ಚೈತನ್ಯದ ಸ್ಪಂದ.

ಈ ಸಿದ್ಧಾಂತಕ್ಕೆ ಅನೇಕ ಮುಖಗಳಿವೆ: ೧. ಭರ್ತೃಹರಿಯ ಪ್ರಕಾರ ನಮ್ಮ ಸಾಂಸ್ಕೃತಿಕ ಬದುಕಿನ ಅರಿವಿನ ಹಲವು ಹಂತಗಳಲ್ಲಿ ಭಾಷೆ ಅಥವಾ ಶಬ್ದವು ವಹಿಸುವ ಪಾತ್ರವು ಅನಿವಾರ್ಯವೆನಿಸಿದೆ. ವಾಸ್ತವವಾಗಿ ಚೇತನವುಳ್ಳ ಜೀವಿಗಳ ನಡುವೆ ವ್ಯವಹಾರವು ಸಾಧ್ಯವಾಗುವುದು ಭಾಷೆಯಿಂದ. ೨. ಜಡ ಮತ್ತು ಚೇತನಗಳ ನಡುವಿನ ಭೇದಕ್ಕೆ ಆಧಾರವಾದುದು ಶಬ್ದ ಅಥವಾ ಭಾಷೆಯೇ ಆಗಿದೆ. ೩. ಎಲ್ಲ ವಿಚಾರಗಳು, ಎಲ್ಲ ಅರಿವುಗಳು ಶಬ್ದದೊಂದಿಗೆ ಬೆಸೆದುಕೊಂಡಿವೆ. ಯಾಕೆಂದರೆ ಶಬ್ದದಿಂದ ಬೆಳಗಲ್ಪಡದಿದ್ದರೆ ಅರಿವಿನ ಪ್ರಕಟನೆ ಸಾಧ್ಯವಿಲ್ಲ. (೧೫ನೆಯ ಅಧ್ಯಾಯವನ್ನು ನೋಡಿ.) ೪. ಎಲ್ಲ ಭಾಷಾವಿಜ್ಞಾನಿಗಳು ಗುರುತಿಸಲೇಬೇಕಾದ ಶಬ್ದ ಅಥವಾ ಭಾಷೆಯ ಎರಡು ಹಂತಗಳಿವೆ. ಅವ್ಯಕ್ತವಾದ ಅಥವಾ ಅಂತರಾಳದ ಮಾತು ಮತ್ತು ಧ್ವನಿಸಹಿತವಾದ ಸದ್ದು. ಮೊದಲನೆಯದು ಸ್ಫೋಟ; ಎರಡನೆಯದು ನಾದ. ಮೊದಲನೆಯದು ಪಾರಮಾರ್ಥಿಕ ಸತ್ಯ; ಅದು ಎರಡನೆಯದಕ್ಕೆ ಆಧಾರ (೮ನೆಯ ಅಧ್ಯಾಯ ನೋಡಿ). ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಎರಡನೆಯದು ಮೊದಲನೆಯದರ ಪರಿಣಾಮವಾಗಿದೆ. ೫. ಎಲ್ಲಕ್ಕಿಂತ ಹೆಚ್ಚಾಗಿ ಭರ್ತೃಹರಿಯು ವಿಶ್ವ ವಿಜ್ಞಾನದ ಸಿದ್ಧಾಂತವನ್ನು ಪ್ರತಿಪಾದಿಸುತ್ತಾನೆ. ಇಡೀ ವಿಶ್ವವು (ಅಥವಾ ಭಾಷಿಕ ವಿಶ್ವವೆಂದು ಹೇಳಬಹುದು) ಎರಡು ವಿಧವಾದ ವಸ್ತುಗಳಿಂದ ತುಂಬಿದೆ – ವಾಚ್ಯ ಮತ್ತು ವಾಚಕ. ವಾಚ್ಯವೆಂದರೆ ಶಬ್ದವು ಸೂಚಿಸುವ ಬಿಡಿತುಣುಕುಗಳಿಂದ ರಚಿತವಾದ ಜಗತ್ತು ಮತ್ತು ಮಾತಿನಲ್ಲಿ ಅದು ಪ್ರಕಟಗೊಂಡ ಬಗೆ ಅಥವಾ ಭಾಷಿಕ ಅಭಿವ್ಯಕ್ತಿ ವಾಚಕಗಳು. ಇವು ಒಂದೇ ಒಂದಾದ ಶಬ್ದತತ್ತ್ವ ಅಥವಾ ಶಬ್ದಬ್ರಹ್ಮದಿಂದ ವಿಕಾಸಗೊಂಡಿವೆ.

ಶಬ್ದಬ್ರಹ್ಮವೆಂಬುದು ಚೇತನದ ಶಾಶ್ವತ ವಿಸ್ತಾರವೆನಿಸಿದೆ. ಇದು ದೇವತಾಶಾಸ್ತ್ರೀಯ ಅಥವಾ ಅತಿಭೌತಶಾಸ್ತ್ರೀಯವಾದ ಸಿದ್ಧಾಂತವೆಂದು ತಳ್ಳಿಹಾಕಬಹುದಾದರೂ ಇಲ್ಲೊಂದು ಮಹತ್ವದ ಸತ್ಯ ಹುದುಗಿದೆ. ದೃಷ್ಟಿಗೋಚರ ಪ್ರಪಂಚವು ವ್ಯಾಖ್ಯಾನಗೋಚರವೂ ಹೌದು. ಈ ವ್ಯಾಖ್ಯಾನವು ಒಂದಲ್ಲೊಂದು ಭಾಷೆಯಲ್ಲಿರಬೇಕಾದುದು ನಿಯತವಷ್ಟೇ? ಈ ವ್ಯಾಖ್ಯಾನವೇ ಶಬ್ದನ ಅಥವಾ ಭಾಷೀಕರಣ. ಭರ್ತೃಹರಿಯ ಪ್ರಕಾರ ಶಬ್ದ ಮತ್ತು ಜಗತ್ತು (ಶಬ್ದ ಅಥವಾ ಭಾಷೆ ಮತ್ತು ಅದು ಸೂಚಿಸುವ ಅರ್ಥ) ಇವೆರಡೂ ಅವಿಭಾಜ್ಯವೂ ಅಖಂಡವೂ ಆಗಿವೆ. ಈ ಸಿದ್ಧಾಂತದ ಬೆಳಕಿನಲ್ಲಿ ಪರಿಭಾವಿಸಿದಾಗ ವಾಚ್ಯ - ವಾಚಕ ಭೇದವು ಕೃತಕವೂ ತಾತ್ಕಾಲಿಕವೂ ಅಂತಿಮವಾಗಿ ತಾನು ಉದಯಿಸಿದ ಅಖಂಡದಲ್ಲಿ ವಿಲೀನಗೊಳ್ಳುವಂಥದೂ ಆಗಿದೆ.

'ವಾಕ್ಯಪದೀಯ'ವೆಂಬ ಮಹಾಕೃತಿಯ ಮೊದಲ ಶ್ಲೋಕ ಹೀಗಿದೆ:

> ಶಬ್ದತತ್ತ್ವಕ್ಕೆ ಆದಿಯೂ ಇಲ್ಲ; ಅಂತ್ಯವೂ ಇಲ್ಲ. ಅದು ಪಾರಮಾರ್ಥಿಕ ಚೈತನ್ಯವಾದ ಅವಿನಾಶಿಯಾದ ಬ್ರಹ್ಮವೇ ಆಗಿದೆ. ಅದು ಅರ್ಥದ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ ಮತ್ತು ಜಗತ್ತಿನ ವ್ಯವಹಾರಗಳನ್ನು ಪ್ರವರ್ತಿಸುತ್ತದೆ. (ವಾ. ೧.೧.)

ಭಾಷೆಗೆ ಹುಟ್ಟು, ಮೊದಲ ಆರಂಭವೆಂಬುದು ಇಲ್ಲವೇ ಇಲ್ಲ. ಭಾಷೆಯು ನಿರಂತರ ಪ್ರವಾಹ. ಅದು ಮನುಷ್ಯರು ಅಥವಾ ಚೇತನವುಳ್ಳ ಜೀವಿಗಳೊಂದಿಗೆ ನಿರಂತರ ಸಾಹಚರ್ಯವನ್ನು ಹೊಂದಿದೆ. ಇದನ್ನು ಸಮರ್ಥಿಸಲು ಸರಳವಾದ ವಾದವನ್ನು ಹೂಡಲಾಗಿದೆ. ಇದು ಪ್ರಾಚೀನ ಮೀಮಾಂಸಕರು ನೈಯಾಯಿಕರ ವಿರುದ್ಧ ಮಾಡಿದ ವಾದವೇ ಆಗಿದೆ. ನೈಯಾಯಿಕರು ಭಾಷೆಯ ವಿಷಯದಲ್ಲಿ ಸಂಪ್ರದಾಯವಾದಿಗಳು. ಅವರ ಪ್ರಕಾರ ಭಾಷೆಯು ಸ್ವೇಚ್ಛಾನಿರ್ಮಿತ ಮತ್ತು ಸಾಂಪ್ರದಾಯಿಕ ಉಪಕರಣ; ಶಬ್ದ ಮತ್ತು ಅರ್ಥಗಳ ಸಂಬಂಧವು ಕೃತಕ ಅಥವಾ ನಿರ್ಮಿತ. ಅದನ್ನು ಸಂಪ್ರದಾಯ ಅಥವಾ ರೂಢಿಯ ಮೂಲಕ ಕಲಿಯಬೇಕಾಗುತ್ತದೆ. 'ಆಕಳು' ಎಂಬ ಶಬ್ದಕ್ಕೂ ಅದರ ಅರ್ಥವೆನಿಸಿದ 'ಆಕಳು' ಎಂಬ ಪ್ರಾಣಿಗೂ ನಿಜವಾದ ಸಂಬಂಧವಿಲ್ಲ. ಭರ್ತೃಹರಿಯು ಇದನ್ನೊಪ್ಪುವುದಿಲ್ಲ. ಅವನ ಪ್ರಕಾರ ಭಾಷೆಯು ನಿಷ್ಪಾದಿತವಲ್ಲ. ಶಬ್ದ - ಅರ್ಥಗಳ ಸಂಬಂಧವು ನಿತ್ಯವಾಗಿದೆ; ಅದು ನಮಗೆ ದತ್ತವಾಗಿದೆ ಅಥವಾ ಪ್ರಾಪ್ತವಾಗಿದೆ. ಶಬ್ದಾರ್ಥಗಳ ಸಂಬಂಧವನ್ನು ನಮಗೆ ತಿಳಿಯದ ಯಾವುದೋ ಕಾಲದಲ್ಲಿ ಕೆಲವು ಮನುಷ್ಯರು ಸೇರಿಕೊಂಡೋ ಅಥವಾ ಈಶ್ವರನೋ ನಿರ್ಮಿಸಿರಬಹುದು ಎನ್ನುವಂತಿಲ್ಲ. ಯಾಕೆಂದರೆ ಅದನ್ನು ಸಮರ್ಥಿಸುವ ಪ್ರಮಾಣಗಳಿಲ್ಲ. ಅಲ್ಲದೆ ರೂಢಿ ಅಥವಾ ಸಂಪ್ರದಾಯಕ್ಕೆ ಪೂರ್ವದಲ್ಲಿ ಭಾಷೆಯಿರಬೇಕಾಗುತ್ತದೆ. ಇದು ಅನ್ಯೋನ್ಯಾಶ್ರಯ ದೋಷ. ಅದು ಈಶ್ವರಕೃತವೆಂದರೂ ಅನ್ಯೋನ್ಯಾಶ್ರಯ ದೋಷ

ತಪ್ಪುವುದಿಲ್ಲ. ಈಶ್ವರನಾದರೂ ತನ್ನ ಇಚ್ಛೆಯನ್ನು ಪ್ರಕಟಿಸಬೇಕಲ್ಲವೆ? ಪ್ರಕಟಿಸಲು ಭಾಷೆಯೇ ಬೇಕಲ್ಲವೇ? ಅಥವಾ ಭಾಷೆಯೇ ಇಲ್ಲದ ರೂಢಿಯನ್ನು ವಿವರಿಸುವುದಾದರೂ ಹೇಗೆ? ಇಲ್ಲಿ ಜೆ. ಡೆರಿಡಾನ ಚಾಟೂಕ್ತಿಯೊಂದನ್ನು ಉದಾಹರಿಸಬಹುದು: 'ಪ್ರತಿಯೊಂದರ ಪ್ರಾರಂಭವೂ ಹಿಂದಿನದನ್ನು ಸೂಚಿಸುವುದರಿಂದಲೇ ಆಗುತ್ತದೆ: ಹಾಗೆಂದರೆ, ಆರಂಭವೆಂಬುದೇ ಇಲ್ಲ'.

ಭರ್ತೃಹರಿಯ ಶಬ್ದಸಿದ್ಧಾಂತವನ್ನು ಸ್ಪಷ್ಟಪಡಿಸಲು ಅವನ ಶ್ಲೋಕಗಳ ವಿವರಣವನ್ನು ಮಾಡುತ್ತಿದ್ದೇನೆ. ಒಂದನೆಯ ಅಧ್ಯಾಯದಲ್ಲಿ ಇವು ಉದ್ಧೃತವಾದವುಗಳೇ ಆಗಿವೆ ಮತ್ತು ಅವುಗಳ ಮೇಲೆ ಸಂಕ್ಷಿಪ್ತ ವಿವರಣೆಯನ್ನು ನೀಡಲಾಗಿದೆ. ಇಲ್ಲಿರುವುದು ಪುನರಾವೃತ್ತಿ. ಇವಕ್ಕೆ ಅವುಗಳ ಮಹತ್ವದ ವಿವಿಧ ಮುಖಗಳನ್ನು ಒತ್ತಿ ಹೇಳುವುದು ಉದ್ದೇಶ.

> *ಅರ್ಥಬೋಧಕವಾದ ಶಬ್ದಗಳಲ್ಲಿ (= ಉಪಾದಾನ ಶಬ್ದಗಳಲ್ಲಿ) ಎರಡು ಭೇದಗಳಿವೆಯೆಂದು ಶಬ್ದವಿದರು (ಭಾಷಾಶಾಸ್ತ್ರಜ್ಞರು?) ತಿಳಿಯುತ್ತಾರೆ. ಶಬ್ದಗಳ ಅಭಿವ್ಯಕ್ತಿಗೆ ಕಾರಣಭೂತವಾದುದು ಒಂದು: ಅರ್ಥಬೋಧಕ್ಕಾಗಿ ಉಚ್ಚರಿಸಲ್ಪಡುವುದು ಇನ್ನೊಂದು. (ವಾ.೧.೪೪)*

ಭರ್ತೃಹರಿಯ ಕೇಂದ್ರ ಸಿದ್ಧಾಂತವೆಂದರೆ ಸ್ಫೋಟ-ನಾದಗಳ ಭೇದ. ಬಹುಶಃ ಇಲ್ಲಿ ಅದರ ಅನುದ್ದಿಷ್ಟ ಆರಂಭವಿರಬಹುದು. ಇಲ್ಲಿ ಗಮನಿಸಬೇಕಾದ ಮತ್ತೊಂದು ಶ್ಲೋಕವಿದೆ. ಅದನ್ನು ಮುದ್ರಿತ ಆವೃತ್ತಿಗಳಲ್ಲಿ ಕೈಬಿಡಲಾಗಿದೆ. ಅದರ ವ್ಯಾಖ್ಯಾನಕಾರರು ಇದನ್ನು ವ್ಯಾಖ್ಯಾನದಲ್ಲಿ ಗುರುತಿಸಿದ್ದಾರೆ. ಇದು ಆ ಭೇದವನ್ನು ಮತ್ತಷ್ಟು ಸ್ಪಷ್ಟವಾಗಿ ಹೇಳುತ್ತದೆ.

> *ಅರ್ಥಬೋಧಕವಾದ ಶಬ್ದವು ಕ್ರಮರಹಿತವಾದ ಅಖಂಡ ಘಟಕವಾಗಿದೆ. ಅದರ ಅದು ವಿಭಕ್ತವಾಗಿ ಪ್ರಕಟಗೊಳ್ಳುತ್ತದೆ. (ಅಂದರೆ, ಅದರ ವಾಸ್ತವಿಕ ಸದ್ದುಗಳು ಬಿಡಿಬಿಡಿಯಾಗಿ ಒಂದು ಬಾರಿ ಹುಟ್ಟುತ್ತವೆ.) ಈ ಎರಡನೆಯ ಅಂಶವು ವಸ್ತು-ಅರ್ಥದೊಂದಿಗೆ ಹೊಂದಿಕೊಂಡಿದೆ. ಯಾಕೆಂದರೆ ಅದು ವಸ್ತು ಅರ್ಥಗಳ ಮೂಲ ಸ್ವರೂಪವೇ ಆಗಿದೆ.'*

'ನಾದ'ವನ್ನು 'ಧ್ವನಿ'ಯೆಂದೂ ಕರೆಯಲಾಗಿದೆ. (ನಾದಕ್ಕೆ ಮತ್ತೊಂದು ಹೆಸರು ಧ್ವನಿ.) ಅದು 'ಸಿಡಿಯುವಿಕೆ' (bang) ಎಂಬುದಕ್ಕೆ ಸಂವಾದಿ. ಅದೇ ಭಾಷೆಯ ಧ್ವನ್ಯಾತ್ಮಕತೆ. ಸ್ಫೋಟವು ಶಬ್ದಶಃ 'ಸ್ಫೋಟಕ' ರೂಪದ ಭಾಷೆ. ಸಿಡಿಯುವ ಪೂರ್ವದ ಸ್ಥಿತಿ. ಭರ್ತೃಹರಿಯ ದೃಷ್ಟಿಯಲ್ಲಿ ಸ್ಫೋಟವೇ ನಿಜವಾದ 'ಶಬ್ದ' ಅಥವಾ 'ಭಾಷೆ'. ಅದರ ಕಾರ್ಯರೂಪದಲ್ಲಿರುವುದು ಧ್ವನಿ. ಮೂಲತಃ ಸ್ಫೋಟವನ್ನು ಒಪ್ಪಿಕೊಳ್ಳಬೇಕಾದ ಆವಶ್ಯಕತೆ ಬರುವುದು ಹೀಗೆ – ಒಂದಾದ ನಂತರ ಒಂದರಂತೆ ಕ್ರಮವಾಗಿ

ಉಚ್ಚರಿಸಲ್ಪಟ್ಟ ಬಿಡಿ ವರ್ಣಗಳಿಂದ ಇಡಿಯಾದ ಅರ್ಥವನ್ನು ಹಿಡಿಯುವ ಬಗೆಯನ್ನು ವಿವರಿಸುವುದು ಹೇಗೆ? ಈ ಪ್ರಶ್ನೆಗೆ ಸಂಸ್ಕೃತ ವ್ಯಾಕರಣದ ಆರಂಭಿಕ ಉತ್ತರವೇ ಸ್ಫೋಟ. ಭಾಷೆಯ ಎರಡು ಹಂತಗಳಾದ ನಾದ ಮತ್ತು ಸ್ಫೋಟಗಳಲ್ಲಿ ಅಭಿವ್ಯಂಜಕ - ಅಭಿವ್ಯಂಗ್ಯ ಸಂಬಂಧವಿದೆ. ನಾದವು ಸ್ಫೋಟವನ್ನು ಅಭಿವ್ಯಕ್ತಗೊಳಿಸುತ್ತದೆ. ಅಲ್ಲದೆ ನಾದವು ಸ್ಫೋಟದ ಕಾರ್ಯರೂಪವೂ ಆಗಿದೆ.

> ನಾದವು ಒಂದೊಂದಾಗಿ ಕ್ರಮವಾಗಿ ಹುಟ್ಟುತ್ತದೆ. ಸ್ಫೋಟಕ್ಕೆ ಪೂರ್ವ ಮತ್ತು ಅಪರಗಳಿಲ್ಲ; ಕ್ರಮವಿಲ್ಲ. ಆದರೆ ಸಕ್ರಮವಾದ ನಾದದಿಂದ ಅಭಿವ್ಯಂಗ್ಯವಾದ ಕಾರಣ ಕ್ರಮ ಮತ್ತು ಭೇದವುಳ್ಳದ್ದಾಗಿ ಕಾಣಿಸಿ ಕೊಳ್ಳುತ್ತದೆ. (ವಾ. ೧.೪೮)

ಈ ಎರಡು ಹಂತಗಳು ಪೂರ್ತಿಯಾಗಿ ಬೇರೆಬೇರೆಯಲ್ಲ. ಯಾಕೆಂದರೆ ಒಂದರಲ್ಲಿರುವ ಮೂಲಾಂಶಗಳೇ ಮತ್ತೊಂದಕ್ಕೆ ವರ್ಗಾವಣೆ ಹೊಂದುತ್ತವೆ. ಅವು ಒಂದೇ ನಾಣ್ಯದ ಎರಡು ಮುಖಗಳಂತೆ.

> ಎಲ್ಲೋ ಇರುವ ವಸ್ತುವಿನ ಪ್ರತಿಬಿಂಬವು ನೀರಿನಲ್ಲಿ ಕಾಣುವಾಗ (ಅಲೆಗಳ ಚಲನೆಯೇ ಮುಂತಾದ) ಕ್ರಿಯೆಯಿಂದ ಅದೇ ಧರ್ಮಗಳನ್ನು (ಅಲೆ ಅಲೆ ಚಲನೆಯನ್ನು) ಹೊಂದಿರುವ ಹಾಗೆ ಕಾಣುವಂತೆ ನಾದ ಮತ್ತು ಸ್ಫೋಟಗಳು ಧರ್ಮಗಳನ್ನು (ಅಂತಹವೇ ರೂಪ-ಗುಣಗಳನ್ನು) ಹೊಂದುತ್ತವೆ. (ವಾ. ೧.೪೯)

ಭರ್ತೃಹರಿಯು ತನ್ನ ಭಾಷಾಸಿದ್ಧಾಂತವನ್ನು ವಿವರಿಸಲು ಕೊಡುವ ಅನೇಕ ಹೋಲಿಕೆಗಳಲ್ಲಿ ಒಂದೆರಡು ಉದಾಹರಣೆಗಳನ್ನು ಇಲ್ಲಿ ಗಮನಿಸಬಹುದು.

> ಶಬ್ದವೆಂಬ ಹೆಸರಿನ ಕ್ರತುವು (ಜ್ಞಾನವು) ಮೊಟ್ಟೆಯೊಳಗಿನ ದ್ರವದಂತೆ ಐಕ್ಯವಾಗಿರುತ್ತದೆ. ಅದಕ್ಕೆ ಸಂಬಂಧಿಸಿದ ಅಂತಃಕರಣ -ವೃತ್ತಿಯು ಕ್ರಿಯಾರೂಪವನ್ನು ತಳೆದು ಒಂದೊಂದು ಭಾಗವಾಗಿ ಕ್ರಮವನ್ನು ಪಡೆಯುತ್ತದೆ. (ವಾ. ೧.೫೧)

ಇಲ್ಲಿಯ ವಿಚಾರ ಹೀಗೆ: ಶಬ್ದವೆಂಬ ಹೆಸರಿನ ಮೂಲಕ್ರತುವು ಒಂದು ಅಖಂಡ ವಸ್ತು. ಅಲ್ಲಿ ಭಾಗಗಳಾಗಲಿ ಕ್ರಮವಾಗಲಿ ಇಲ್ಲ. ಆದರೆ ನಾದರೂಪದಲ್ಲಿ ಪರಿಣಮಿಸುವಾಗ ಅದು ಭಾಗವುಳ್ಳದ್ದಾಗಿ ಕ್ರಮವುಳ್ಳದ್ದಾಗಿ ಕಲುಷ್ಯವು (ಉಚ್ಚಾರಣೆಯ ಕಾರಣದಿಂದ) ಅಪೂರ್ಣತೆಯುಳ್ಳದ್ದಾಗಿ ಕಾಣಿಸಿಕೊಳ್ಳುತ್ತದೆ.

> (ಮೂಲಮಾದರಿಯಾದ ಒಂದು ವಸ್ತುವಿದೆ.) ಚಿತ್ರಕಾರನು ಆ ವಸ್ತುವಿನ ಆಕೃತಿಯನ್ನು ಏಕಬುದ್ಧಿಗೆ ವಿಷಯವಾಗಿ ಗ್ರಹಿಸುತ್ತಾನೆ. ಅನಂತರ ಅದೇ ಬಗೆಯ [illegible] ಪೂರ್ಣವೂ ಆಗಿರುವ ಆಕೃತಿಯನ್ನು ಚಿತ್ರಿಸುತ್ತಾನೆ. ಅಂತೆಯೇ ಇಲ್ಲಿ [illegible] ಘಟಕವಾದ ಶಬ್ದದಲ್ಲಿ — ಸಕ್ರಮ, ಅಕ್ರಮ ಮತ್ತು (ಪುನಃ) ಸಕ್ರಮಗಳೆಂಬ ಮೂರು ಹಂತಗಳು ಅಥವಾ ಸ್ಥಿತಿಗಳು ಕಂಡುಬರುತ್ತವೆ. (ವಾ. ೧.೫೨)

ಇಲ್ಲಿನ ವಿಚಾರ ಸುಮಾರಾಗಿ ಹೀಗೆ: ಮೂಲಮಾದರಿ = ಮೂಲ ಭಾಷಿಕ ಘಟಕ, ಏನನ್ನು ತಿಳಿಸುತ್ತದೆಂಬುದರ ಸಹಿತವಾದ ವಾಕ್ಯಾತ್ಮಕ ಅಭಿವ್ಯಕ್ತಿ; ಚಿತ್ರಕಾರನು ತನ್ನ ಮನಸ್ಸಿನಲ್ಲಿ ಗ್ರಹಿಸಿದ ಆಕೃತಿ = ವಕ್ತಾರನ ಮನಸ್ಸಿನಲ್ಲಿರುವ ಭಾಷಿಕ ವಾಸ್ತವ; ಚಿತ್ರ = ವಕ್ತಾರನ ಮಾತು.

ಸ್ಫೋಟ - ವಾದಗಳ ಭೇದವನ್ನು ಕುರಿತಾದ ತನ್ನ ಹಿಂದಿನವರ ಅಭಿಪ್ರಾಯಗಳನ್ನು ಭರ್ತೃಹರಿಯು ಉಲ್ಲೇಖಿಸಿದ್ದಾನೆ. ಬಹುಶಃ ಆ ಅಭಿಪ್ರಾಯಗಳ ವಿವರಣೆ ಮತ್ತು ವಿಮರ್ಶೆಗಳಿಂದ ಅವನ ಮತವು ಹರಳುಗಟ್ಟಿಕೊಂಡಿರಬೇಕು. ಈ ಅಭಿಪ್ರಾಯಗಳ ಚರ್ಚೆಯನ್ನು ೮ ನೆಯ ಅಧ್ಯಾಯದಲ್ಲಿ ಮಾಡಲಾಗಿದೆ. ನಾವು ಪರೀಕ್ಷಿಸಿದ ಅಭಿಮತಗಳಲ್ಲೊಂದರ ಪ್ರಕಾರ (ಶ್ಲೋ. ೯೩) ಸ್ಫೋಟವು ಶಬ್ದಗತವಾದ ಜಾತಿಯೇ ಹೊರತು ವರ್ಣ, ಪದ, ವಾಕ್ಯಗಳಲ್ಲ. ಮತ್ತೊಂದು ಮತದ ಪ್ರಕಾರ (ಶ್ಲೋ. ೯೪) ಸ್ಫೋಟವು ಅವಿಕಾರ್ಯ (ಬದಲಾಯಿಸಲಾಗದ್ದು). ಆದರೆ ಶಬ್ದಗಳು ನಾನಾ ರೂಪಗಳನ್ನು ಧರಿಸುತ್ತವಾದ್ದರಿಂದ ವಿಕೃತ (ಬದಲಾವಣೆಗೆ ಒಳಗಾಗುವಂಥದ್ದು). ಅವು ಬೆಳಕಿನಂತೆ ಸ್ಫೋಟದ ಉಪಲಬ್ಧಿಗೆ ನಿಮಿತ್ತ. ಇವುಗಳ ವಿಮರ್ಶೆಯಿಂದಂತೆ ಭರ್ತೃಹರಿ ಮಾನವನ ವರ್ತನೆಯ ಮೇಲೆ ಭಾಷೆಯ ಪ್ರಭಾವವನ್ನು ಕುರಿತು ಹೇಳುತ್ತಾನೆ.

> *ಈ ಲೋಕದಲ್ಲಿ ಇದನ್ನು ಹೀಗೆ ಮಾಡಬೇಕು (ಇತಿಕರ್ತವ್ಯತಾ) ಎಂಬ ಕರ್ತವ್ಯ ಜ್ಞಾನವೆಲ್ಲವೂ ಭಾಷೆಯನ್ನೇ ಅವಲಂಬಿಸಿದೆ. ಬಾಲಕನು ಕೂಡ ಜನ್ಮಾಂತರದ ಶಬ್ದ ಸಂಸ್ಕಾರದ ಉಳಿಕೆಯ ಬಲದಿಂದ ಕರ್ತವ್ಯಜ್ಞಾನವನ್ನು (ಏನನ್ನು ಮಾಡಬೇಕು ಎಂಬಂತಹ ಕ್ರಿಯೆಯ ಅರಿವು) ಹೊಂದುತ್ತಾನೆ. (ವಾ. ೧.೧೨೧)*

ಮಗುವಿನಲ್ಲಿ ಭಾಷೆಯಿಲ್ಲದಿದ್ದರೆ ಧ್ವನ್ಯಂಗಗಳನ್ನು ಬಳಸಿ ಧ್ವನಿಯನ್ನು ಹೊರಡಿಸುವ ಪ್ರಯತ್ನವನ್ನು ಮಾಡುತ್ತಿರಲಿಲ್ಲವೆಂದು ಕೂಡ ಇದೇ ಸಂದರ್ಭದಲ್ಲಿ ವಾದಿಸಲಾಗಿದೆ. ಹಾಗಾಗಿ ಭಾಷೆಯನ್ನು ಅಪರಿಚಿತ ಮತ್ತು ಬಾಹ್ಯ ವಸ್ತುವೆಂದು ಕಲಿಯುವುದಿಲ್ಲ. ಅದು ನಮ್ಮ ಅರಿವಿನಲ್ಲಿಯೇ ಹುದುಗಿದೆ. ಸುಪ್ತಾವಸ್ಥೆಯಲ್ಲಿರುವ ಭಾಷೆಯು ನಮ್ಮ ಕಲಿಕೆಯ ಪ್ರಕ್ರಿಯೆಯು ಪ್ರಾರಂಭವಾದಾಗ ಜಾಗ್ರತವಾಗುತ್ತದೆ.

ಭಾಷೆ ಮತ್ತು ಅರಿವುಗಳಲ್ಲಿ ಅವಿಭಾಜ್ಯ ಸಂಬಂಧವಿದೆಯೆಂದು ಭರ್ತೃಹರಿಯು ಪ್ರತಿಪಾದಿಸುವಂತಿದೆ. ಈ ಪ್ರತಿಪಾದನೆಯನ್ನು ಹೀಗೆ ವ್ಯಕ್ತಪಡಿಸಲಾಗಿದೆ:

> *ಶಬ್ದಸಂಸ್ಪರ್ಶವಿಲ್ಲದ ಯಾವ ಅರಿವೂ ಲೋಕದಲ್ಲಿಲ್ಲ. ಸಮಸ್ತ ಜ್ಞಾನವೂ ಶಬ್ದಾನುವಿದ್ಧವಾಗಿರುವಂತೆ ಭಾಸವಾಗುತ್ತದೆ. (ವಾ. ೧.೧೩೧)*
>
> ಜ್ಞಾನದ ವಾಗ್ರೂಪತೆಯು ಶಾಶ್ವತವಾಗಿದ್ದು, ಒಂದುವೇಳೆ ಅದು ಹೊರಟು ಹೋದರೆ ಅರಿವೆಂಬ ಬೆಳಕು ಅರಿಯದಂತಾಗಿ ಯಾವ ಜ್ಞಾನವೂ ಉಂಟಾಗ

ಲಿಕ್ಕಿಲ್ಲ. ಏಕೆಂದರೆ ಜ್ಞಾನಪ್ರಕಾಶವು ಪ್ರಕಾಶಿಸಲಿಕ್ಕೆ ಅದೇ ಕಾರಣವಾಗಿದೆ (ವಾ. ೧.೧೨೪)

ಈ ಮಾತು ಭರ್ತೃಹರಿಯ ಬಲವಾದ ಪ್ರತಿಪಾದನೆಯನ್ನು ಸೂಚಿಸೀತು:

ಬಿ ೧. ಅರಿವಿನ ಘಟನೆಗಳೆಲ್ಲ ಶಾಬ್ದಿಕ ವಿಚಾರಗಳಿಗೆ ಸಮಾನವಾಗಿವೆ.

ಅಥವಾ, ಇದು ದುರ್ಬಲವಾದ ಇನ್ನೊಂದು ಪ್ರತಿಪಾದನೆಯನ್ನು ಸೂಚಿಸೀತು:

ಬಿ ೨. ನಾವು ವ್ಯವಹರಿಸುವ ಹೆಚ್ಚಿನ ಅರಿವಿನ ಘಟನೆಗಳೆಲ್ಲ ಅನಿವಾರ್ಯವಾಗಿ ಅವ್ಯಕ್ತ ಹಂತದಲ್ಲಿಯಾದರೂ ಶಾಬ್ದಿಕ ವಿಚಾರಗಳಾಗಿವೆ.

ಈ ಸಿದ್ಧಾಂತಕ್ಕೆ ಎರಡು ಮಗ್ಗುಲುಗಳಿವೆ. ಮೊದಲನೆಯದು ಪ್ರಮಾಣ-ಮೀಮಾಂಸಾತ್ಮಕ (ಎಪಿಸ್ಟಮೋಲಾಜಿಕಲ್) ಪರಿಣಾಮ. ಅದನ್ನು ಮುಂದಿನ ಅಧ್ಯಾಯದಲ್ಲಿ ನೋಡೋಣ. ಎರಡನೆಯದು ಅರ್ಥವಿಜ್ಞಾನ(ಸೆಮಾಂಟಿಕ್ಸ್)ಕ್ಕೆ ಸಂಬಂಧಿಸಿದ್ದು – ಶಬ್ದ ಮತ್ತು ವಸ್ತುಗಳ ನಡುವಿನ ಅರ್ಥವಿಜ್ಞಾನಾತ್ಮಕ ಸಂಬಂಧ ಏನಾಗುತ್ತದೆ?

'ಪ್ರಕಾಶಿಸುವುದು' ಮತ್ತು 'ಅರಿವು' ಮುಂತಾದ ರೂಪಕಗಳನ್ನು ಭೇದಿಸಿ ತಿರುಳನ್ನು ಹೀಗಿಡಬಹುದು: ಜ್ಞಾನದ ಪ್ರಕಾಶನಶಕ್ತಿಯು ವಾಗ್ರೂಪತಾ ಅಥವಾ ಶಬ್ದನದೊಂದಿಗೆ ಬೆರತುಕೊಂಡಿದೆ. ಕಾಶ್ಮೀರ ಶೈವಸಿದ್ಧಾಂತದ (ಉತ್ಪಲ ಮತ್ತು ಅಭಿನವಗುಪ್ತ) ನೆರವನ್ನು ಪಡೆದು ಅರಿವಿನ ಸಿದ್ಧಾಂತವನ್ನು ವಿವರಿಸಬಹುದು. ಅರಿವಿನ ಘಟನೆಯಲ್ಲಿ ಎರಡು ಸಹಜ ಶಕ್ತಿಗಳಿವೆ – ಪ್ರಕಟಿಸುವ ಅಥವಾ ಬೆಳಗುವ ಶಕ್ತಿ (ಪ್ರಕಾಶ) ಮತ್ತು ಬೇರ್ಪಡಿಸುವ ಅಥವಾ ವಿವೇಚಿಸುವ ಶಕ್ತಿ (ವಿಮರ್ಶ). ಎರಡನೆಯದು ಶಬ್ದನ ಅಥವಾ ಶಾಬ್ದಿಕ ವಿವೇಚನೆಗೆ ಸಮಾನವಾಗಿದ್ದು, ಮೊದಲನೆಯದರ ಅಸ್ತಿತ್ವವಿಲ್ಲವಾದರೆ ಅದು ಅಸ್ತಿತ್ವವನ್ನು ಹೊಂದಲಾರದು. ಇದರಿಂದ ಸೂಚಿತವಾಗುವುದಿಷ್ಟು: ಶುದ್ಧಜ್ಞಾನವೆಂದರೆ ಅರಿವು; ಮತ್ತು ಅರಿವಿನ ವಸ್ತುಗಳು ಪ್ರತ್ಯೇಕಗೊಳಿಸಲಾರದ್ದು; ಅರಿತುದನ್ನು ಶಬ್ದಗಳ ಮೂಲಕ ಅಭಿವ್ಯಂಜಿಸಲಾರದ್ದು ಅಥವಾ ಅದರ ಬಗೆಗೆ ವಿಕಲ್ಪನೆಗಳನ್ನು ಹೊಂದಲಾರದ ಜ್ಞಾನ ಎಂದು ಹೇಳುವುದುಂಟು. (ಆಗ, ಅಂತಹ ಶುದ್ಧಗ್ರಹಿಕೆ ಅಥವಾ ಶುದ್ಧಜ್ಞಾನವೆನ್ನುವುದು ಅಸಾಧ್ಯವೆಂದಾಗುತ್ತದೆ.) ಆದರೆ ಅಂಥ ಜ್ಞಾನವನ್ನು ಭರ್ತೃಹರಿಯು ಒಪ್ಪುವುದಿಲ್ಲವೆಂಬುದನ್ನು ಸೂಚಿಸಿದ್ದಾನೆ. ಆದರೆ ಬೌದ್ಧರನ್ನೊಳಗೊಂಡು ಅನೇಕ ಪ್ರಮುಖ ದಾರ್ಶನಿಕ ಪಂಥಗಳು ಇಂಥ ಜ್ಞಾನವನ್ನು ಒಪ್ಪಿಕೊಳ್ಳುತ್ತವೆ. ಭರ್ತೃಹರಿಯ ವಾದವೆಂದರೆ ಇಂದ್ರಿಯಗಳಿಂದ ಗ್ರಾಹ್ಯವಾದುದು ಅರಿವಿನ ಪರಿಧಿಯನ್ನು ಪ್ರವೇಶಿಸಿದ ಕ್ಷಣದಲ್ಲಿಯೇ ಅದು ಶಬ್ದನದ ಮೂಲಕ ಅವ್ಯಕ್ತವಾಗಿಯಾದರೂ ಪ್ರತ್ಯೇಕ

ಗೊಂಡಿರುತ್ತದೆ. ಈ ಬಗೆಗೆ ಮುಂದಿನ ಅಧ್ಯಾಯದಲ್ಲಿ ಇನ್ನಷ್ಟು ಗಮನಿಸೋಣ. ವಾಚಕದ ಅಸ್ತಿತ್ವವಿಲ್ಲದಿದ್ದಲ್ಲಿ ನಮ್ಮ ಅರಿವಿನಲ್ಲಿ ವಾಚ್ಯವು ಅಸ್ತಿತ್ವವನ್ನು ಪಡೆಯಲಾರದು.

೪. ವಾಚ್ಯ-ವಾಚಕ ಸಂಬಂಧ

ಭರ್ತೃಹರಿಯು ತನ್ನ ಗ್ರಂಥದಲ್ಲಿ ವಾಚ್ಯ - ವಾಚಕ ಸಂಬಂಧವನ್ನು ಕುರಿತು ಅನೇಕ ರೀತಿಗಳಲ್ಲಿ ಚರ್ಚಿಸಿದ್ದಾನೆ. ಅವನ್ನು ಇಲ್ಲಿ ಸಂಕ್ಷಿಪ್ತವಾಗಿ ಗಮನಿಸಬಹುದು. ಈ ಸಂಬಂಧವು ಒಂದು ರೀತಿಯಲ್ಲಿ ತಾದಾತ್ಮ್ಯ ಸಂಬಂಧವಾಗಿದೆ. ಮತ್ತೊಂದು ರೀತಿಯಿಂದ ಇದನ್ನು ವಾಚ್ಯ-ವಾಚಕ ಭಾವವೆಂದು ಕರೆಯಲಾಗಿದೆ. ವಾಕ್ಯಪದೀಯದ ಮೂರನೆಯ ಕಾಂಡದ ಮೊದಲನೆಯ ಶ್ಲೋಕವು ಹೀಗೆ ಹೇಳುತ್ತದೆ:

> ಶಬ್ದಗಳನ್ನು ಉಚ್ಚರಿಸಿದಾಗ ವಕ್ತೃವಿನ ವಿಚಾರ, ಬಾಹ್ಯವಸ್ತು ಹಾಗೂ ಶಬ್ದರೂಪಗಳು ತಿಳಿದುಬರುತ್ತವೆ. ಆದ್ದರಿಂದ (ಶಬ್ದ ಮತ್ತು ಇತರ ಮೂರರ ನಡುವೆ) ಸಂಬಂಧವಿದೆ.

ಈ ಒಗಟಿನಂಥ ಹೇಳಿಕೆಯನ್ನು ಪ್ರಸ್ತುತಪಡಿಸಿದ ವ್ಯಾಖ್ಯಾನದಲ್ಲಿ ಭರ್ತೃಹರಿಯು ಶಬ್ದಸಂಕೇತವನ್ನು ಉಚ್ಚರಿಸಿದೊಡನೆ ತಿಳಿದುಬರುವ ಮೊದಲ ಅರ್ಥವೆಂದರೆ ಶಬ್ದದ ರೂಪವೆಂಬ ಸಿದ್ಧಾಂತವನ್ನು ಪುನರಾವರ್ತಿಸುತ್ತಾನೆ. ಆ ಕುರಿತು ಅವನ ಗ್ರಂಥದ ಮೊದಲಭಾಗದಲ್ಲಿ ಸಾಕಷ್ಟು ವಿಸ್ತಾರವಾಗಿ ಚರ್ಚಿಸಲಾಗಿದೆ. ಆದ್ದರಿಂದ ಶಬ್ದ ಮತ್ತು ಶಬ್ದದ ಈ ತರನಾದ ಅರ್ಥ ಅಥವಾ ಭಾಷಿಕ ಘಟಕವಾದ ಮಟ್ಟಿಗಷ್ಟು, ವಾಕ್ಯ ಇವುಗಳ ಅರ್ಥದ ನಡುವಿನ ಸಂಬಂಧವು ಸಹಜ. ಅಕೃತಕ ಮತ್ತು ನಿತ್ಯವೆಂಬುದು ನಿಸ್ಸಂದೇಹ. ಆದರಿಂದ ನಾವು ಮೊದಲಿನ ಸಂಗತಿಯನ್ನು (ಶಬ್ದರೂಪವನ್ನು) ಅರ್ಥವೆಂದು ಗ್ರಹಿಸಿದರೆ ಶಬ್ದ ಮತ್ತು ಅರ್ಥಗಳಲ್ಲಿ ತಾದಾತ್ಮ್ಯವಿದೆಯೆಂದು ಸುಲಭವಾಗಿ ಹೇಳಿಬಿಡಬಹುದು. ಪದ್ಯದಲ್ಲಿರುವ ಎರಡನೆಯ ಸಂಗತಿಯು ಸ್ವಾರಸ್ಯಕರವಾದ ಸಾಧ್ಯತೆಗಳನ್ನು ತೆರೆದಿಡುತ್ತದೆ. ಇದೂ ಕೂಡ ಭರ್ತೃಹರಿಯ ವಿಚಾರವಾಗಿರಬಹುದೆಂದು ನನ್ನ ನಂಬಿಗೆ. ಅದನ್ನು ಹೀಗೆ ನಿರೂಪಿಸಬಹುದು: ಭಾಷಿಕ ಅಭಿವ್ಯಕ್ತಿಯು (ಭರ್ತೃಹರಿಯ ದೃಷ್ಟಿಯಲ್ಲಿ ವಾಕ್ಯವೇ ಪ್ರಾಥಮಿಕ ಘಟಕ, ಪದಗಳಲ್ಲ) ತನ್ನ ಸ್ವರೂಪವನ್ನು ಮೊದಲು ಸೂಚಿಸಿದ ಮೇಲೆ ವಕ್ತೃವಿನ ಕಲ್ಪನೆ ಅಥವಾ ವಿಚಾರವನ್ನು ಬೋಧಿಸುತ್ತದೆ. ಹೀಗೆ ಸೂಚಿತವಾದ ವಸ್ತುಗಳು ಬಾಹ್ಯಪ್ರಪಂಚಕ್ಕೆ ಸೇರಿದವುಗಳಾಗಿರುತ್ತವೆಂದು ವಾಸ್ತವವಾದಿಗಳು ಹೇಳುತ್ತಾರೆ. ಭರ್ತೃಹರಿಯು ಅದೊಂದು ಮನ್ನಣೆಗೆ ಪಾತ್ರವಾದ ನಿಲುವೆಂದು

ಉಲ್ಲೇಖಿಸಿದ್ದಾನೆ. ಆದರೆ ಎಲ್ಲಿಯೂ ಅದನ್ನು ಸ್ಪಷ್ಟವಾಗಿ ಬಿಂಬಿಸಿಲ್ಲ. ಅವನು ಆ ಅರ್ಥದ ವಾಸ್ತವವಾದಿಯಲ್ಲ. ಅವನ ದೃಷ್ಟಿಯಲ್ಲಿ ವಸ್ತುವೆಂದರೆ ವಕ್ತೃವಿನ ಅರಿವಿನಲ್ಲಿ ಗ್ರಹಿಸಲ್ಪಟ್ಟ ವಸ್ತುವೇ ಹೊರತು ಹೊರ ಜಗತ್ತಿಗೆ ಸೇರಿದ ವಸ್ತುವಲ್ಲ. ಅಂದರೆ ಅದು ಜ್ಞಾನದ ಕ್ಷೇತ್ರಕ್ಕೆ ಸೇರಿದ್ದು. ಭಾಷೆಯಿಂದ ಹೊರತಾದ ನಾವು ಬಾಹ್ಯ ವಸ್ತುಗಳಾದ ಕುದುರೆ, ಆಕಳು ಮುಂತಾದವುಗಳೊಂದಿಗೆ ವ್ಯವಹರಿಸುತ್ತೇವೆಯೆಂಬುದು ನಿಜ. ಆದರೆ ಭಾಷೆಯು ಅವುಗಳನ್ನು ಸೂಚಿಸುತ್ತದೆಯೆಂದಾಗಲಿ, ಅವೇ ಅರ್ಥಗಳೆಂದಾಗಲಿ ತಿಳಿಯುವಂತಿಲ್ಲ. ಅವುಗಳನ್ನು ಅರ್ಥಗಳೆಂದು ತಿಳಿಯುವುದು ವ್ಯಾವಹಾರಿಕ ಅನುಕೂಲಕ್ಕಾಗಿ. ಯಾಕೆಂದರೆ ಹಾಗೆ ತಿಳಿಯದಿದ್ದರೆ ನಮ್ಮ ಚಟುವಟಿಕೆಗಳೆಲ್ಲ ನಿಂತುಹೋಗುತ್ತವೆ. ಅನ್ನವನ್ನು ಕೇಳಿದಾಗ ವಕ್ತಾರನು ತನ್ನ ಮನಸ್ಸಿನಲ್ಲಿರುವ ಅನ್ನವನ್ನು ಬಡಿಸಲಾರನಲ್ಲ? ಆದರೂ ಭಾಷಿಕ ಅಭಿಧಾನದ ಕ್ಷೇತ್ರವೇ ಬೇರೆ.

ಈ ಸಂಬಂಧದಲ್ಲಿ ಭರ್ತೃಹರಿಯು ವಾಚ್ಯ - ವಾಚಕ ಸಂಬಂಧ ಹಾಗೂ ಸಂಬಂಧಸಾಮಾನ್ಯಗಳನ್ನು ಕುರಿತು ಸ್ವಾರಸ್ಯಕರವಾಗಿ ವಿವರಿಸಿದ್ದಾನೆ. ಇದನ್ನು ಎಚ್. ಹರ್ಜ್‌ಬರ್ಗರ್ ಹಾಗೂ ಆರ್. ಹರ್ಜ್‌ಬರ್ಗರ್ (೧೯೮೧) ಅವರು 'ಭರ್ತೃಹರಿಯ ವಿರೋಧಾಭಾಸ' (Bhartrihari's Paradox) ಎಂದು ಕರೆದು ತುಂಬ ಸೊಗಸಾಗಿ ವಿವರಿಸಿದ್ದಾರೆ. ಭರ್ತೃಹರಿಯ ವಾದ ಹೀಗೆ: ವಾಚ್ಯ - ವಾಚಕ ಸಂಬಂಧವು ವಾಚ್ಯವಾಗಲಾರದು. ಅದನ್ನು ವಾಚ್ಯವೆಂದು ಪರಿಗಣಿಸಿದರೆ ಅದೊಂದು ವಸ್ತುವಾಗಿಬಿಡುತ್ತದೆ. ಅದನ್ನು ವಸ್ತುವೆಂದು ಪರಿಗಣಿಸಿದರೆ ಮತ್ತೊಂದು ವಾಚ್ಯ - ವಾಚಕ ಸಂಬಂಧವನ್ನು ಕಲ್ಪಿಸಬೇಕಾಗುತ್ತದೆ. ಅದು ಸಂಬಂಧಸಾಮಾನ್ಯ ಅಥವಾ ಸಂಬಂಧದ ಕುರಿತಾದ ಸಾಮಾನ್ಯ ಕಲ್ಪನೆಯನ್ನು ಅನುಸರಿಸುತ್ತದೆ. ಅದನ್ನು ಹೀಗೆ ಹೇಳಬಹುದು: ಸಂಬಂಧವು ಮತ್ತೊಂದು ಸಂಬಂಧವನ್ನು ಹೊಂದಿರುವುದಿಲ್ಲ. ಹಾಗಿದ್ದರೂ ಷಷ್ಠೀ ವಿಭಕ್ತಿಯಿಂದ ವಾಚ್ಯ - ವಾಚಕ ಸಂಬಂಧವು ನಮ್ಮ ಅರಿವಿಗೆ ಬರುವುದು ಎನ್ನುತ್ತಾನೆ.

> ಇದು ಅದರ ವಾಚಕ. ಅದು ಇದರ ವಾಚ್ಯ. ಶಬ್ದ ಮತ್ತು ಅದು ಸೂಚಿಸುವ ಅರ್ಥದ ನಡುವಿನ ಸಂಬಂಧ ತತ್ತ್ವವು (= 'ಅದು' 'ತನ') ಷಷ್ಠೀ ವಿಭಕ್ತಿಯಿಂದ ಅರಿವಾಗುತ್ತದೆ. ಹೀಗೆ ಅದರ ಸ್ವರೂಪವು ವಾಚ್ಯವಾಗುತ್ತದೆ. (ವಾ. ೩.೩.೪

ವಾಚ್ಯ - ವಾಚಕ ಸಂಬಂಧವು ವಾಚ್ಯರಹಿತವೆಂಬುದನ್ನು ಸಮರ್ಥಿಸಲು ಇನ್ನೊಂದು ವಾದವೂ ಇದೆ. ಸಾಮಾನ್ಯವಾಗಿ ವಾಚಕವು ವಾಚ್ಯವನ್ನು ಬೋಧಿಸುವುದು ವಾಚ್ಯವಸ್ತುವಿನಲ್ಲಿರುವ ಯಾವುದಾದರೊಂದು ಧರ್ಮ ಅಥವಾ ಆ ವಸ್ತುವಿನ

ಯಾವುದಾದರೊಂದು ಅಂಶವನ್ನು ಆಧರಿಸಿ. ಆದರೆ ವಾಚ್ಯ - ವಾಚಕ ಸಂಬಂಧವು ಧರ್ಮ ಅಥವಾ ಅಂಶಗಳನ್ನು ವ್ಯಕ್ತಪಡಿಸುವುದರೊಂದಿಗೆ ಪೂರ್ತಿಯಾಗಿ ಶಕ್ತಿಯನ್ನು ಕಳೆದುಕೊಂಡು 'ವರ್ಣರಹಿತ'ವಾಗಿಬಿಡುತ್ತದೆ. ಅದು ಮತ್ತಾವುದಕ್ಕೂ ವಾಚ್ಯವಾಗಲಾರದು.

> *ಸಂಬಂಧವು ತನ್ನಲ್ಲಿರುವ ಧರ್ಮಗಳ ಆಧಾರದ ಮೇಲೆ ತನ್ನ ವಾಚಕವಾಗಲಾರದು. ಅದು ತನಗೆ ಸಂಬಂಧಿಸಿದ ಇತರ (ಎರಡು) ಸಂಗತಿಗಳನ್ನು ಸೂಚಿಸಿ ಕ್ಷೀಣವಾಗುತ್ತದೆ. ಅದರ ಧರ್ಮಗಳು ವಾಚ್ಯವಾಗಲಾರವು. (ವಾ. ೩.೩.೪)*

ವಾಚ್ಯ - ವಾಚಕ ಸಂಬಂಧವು ನಿಜವಾಗಿಯೂ ವಾಚ್ಯರಹಿತವಾಗಿದ್ದು, ಅದು ವಾಚ್ಯ - ವಾಚಕಗಳನ್ನು ಸಹಜವಾಗಿ ಸೇರಿಸಿ ತಾದಾತ್ಮ್ಯವನ್ನುಂಟುಮಾಡುತ್ತದೆ. ಭರ್ತೃಹರಿಯು ಇದನ್ನು ಮನದಟ್ಟುಮಾಡಿಕೊಡುವುದಕ್ಕೆ ಭಾಷೆಯ ಕುರಿತಾದ ಅರೆಪೌರಾಣಿಕ ನಿರೂಪಣೆಯನ್ನು ಅವಲಂಬಿಸಿದ್ದಾನೆ. ಅದರ ಪ್ರಕಾರ ಚೇತನ ವಸ್ತುವಿನ ಮನದಾಳದಲ್ಲಿ ವಾಚ್ಯ - ವಾಚಕಗಳೆಂಬ ಭೇದವೇ ಇಲ್ಲದ 'ಪಶ್ಯಂತೀ' ಎಂಬ ಹಂತವೊಂದಿದೆ. ಅನಂತರದ್ದು 'ಮಧ್ಯಮಾ' ಎಂಬ ಹಂತ. ಅಲ್ಲಿ ವಾಚ್ಯ- ವಾಚಕ ಭೇದವು ಕಂಡರೂ ಕಾಣದಂತಿರುತ್ತದೆ; ಅಂದರೆ ಭೇದವು ಸ್ಪಷ್ಟಾಸ್ಪಷ್ಟವಾಗಿರುತ್ತದೆ. ಮೂರನೆಯದಾದ 'ವೈಖರೀ' ಎಂಬ ಹಂತದಲ್ಲಿ ಕೇಳಬಹುದಾದ ಮಾತು ಹುಟ್ಟುತ್ತದೆ. ಅಲ್ಲಿ ವಾಚ್ಯ - ವಾಚಕ ಭೇದವು ಸ್ಫುಟವಾಗಿರುತ್ತದೆ. ವಾಚ್ಯ ಅಥವಾ ಅರ್ಥವನ್ನು ಬೋಧಿಸುವುದಕ್ಕೋಸ್ಕರ ಅಥವಾ ಸಂವಹನ ಮಾಡುವುದಕ್ಕೋಸ್ಕರ ವಕ್ತೃವು ವಾಚಕ ಅಥವಾ ಶಬ್ದವನ್ನು ಉಚ್ಚರಿಸುತ್ತಾನೆಂದು ಭರ್ತೃಹರಿಯು ಮತ್ತೆ ಮತ್ತೆ ಪ್ರತಿಪಾದಿಸುತ್ತಾನೆ. ಇಂಥ ಒಂದೊಂದು ಉಚ್ಚಾರಣೆಯೂ ಇದು (=ಶಬ್ದ) ಅದರೊಂದಿಗೆ (= ಅರ್ಥದೊಂದಿಗೆ) ತಾದಾತ್ಮ್ಯವನ್ನು ಹೊಂದಿದೆ ಎಂಬುದನ್ನು ಸೂಚ್ಯವಾಗಿ ತಿಳಿಸುತ್ತದೆ. ಇದು ಬರವಣಿಗೆಗೂ ಅನ್ವಯಿಸುತ್ತದೆ. ಇದು ವಾಚ್ಯ- ವಾಚಕಗಳಲ್ಲಿ ತಾದಾತ್ಮ್ಯವಿದೆಯೆಂಬುದಕ್ಕೆ ಪ್ರಮಾಣವಾಗಿದೆ.

೫. ಧ್ವನಿವ್ಯಾಮೋಹ ಮತ್ತು ಲಿಪಿವ್ಯಾಮೋಹ

ಈವರೆಗೆ ಭರ್ತೃಹರಿಯ ಪಠ್ಯದ ಸ್ಥೂಲವಾದ ಸಮೀಕ್ಷೆಯನ್ನು ಮಾಡಿದ್ದೇವೆ. ಉಪಸಂಹರಿಸುವುದಕ್ಕೆ ಮುನ್ನ ಕೆಲವು ಸಾಮಾನ್ಯ ಟಿಪ್ಪಣಿಗಳನ್ನು ಮಾಡುತ್ತಿದ್ದೇನೆ. ಇಂದು ನಮಗೆ ಪ್ರಸ್ತುತವಾಗಿರುವುದು ಮಾತು ಮತ್ತು ಲಿಪಿಗಳ ನಡುವಿನ ವಿರೋಧ. ಭಾಷೆಯ ಶ್ರಾವ್ಯ ವಿಭಾಗವನ್ನು ಮಾತು ಪ್ರತಿನಿಧಿಸಿದ್ದರೆ ಲಿಪಿಯು ದೃಶ್ಯಭಾಗವನ್ನು ಪ್ರತಿನಿಧಿಸುತ್ತಿದೆ. (ಮಾತು ಮತ್ತು ಲಿಪಿಗಳು ಕ್ರಮವಾಗಿ ಭಾಷೆಯ ಶ್ರವ್ಯ ಮತ್ತು ದೃಶ್ಯ

ವಿಭಾಗಗಳನ್ನು ಪ್ರತಿನಿಧಿಸುತ್ತವೆ.) ಆಧುನಿಕ ಪಾಶ್ಚಾತ್ಯ ಭಾಷಾವಿಜ್ಞಾನಿಗಳಲ್ಲಿ ಸಸ್ಯೂರ್ ಮತ್ತು ಇತರರು ಮಾತು ಅಥವಾ ಆಡುಭಾಷೆಯ ಪ್ರಾಧಾನ್ಯವನ್ನು ಎತ್ತಿಹಿಡಿಯುತ್ತಾರೆ. ಅವರ ಪ್ರಕಾರ ಭಾಷಾವಿಜ್ಞಾನಕ್ಕೆ ಮಾತು ಅಥವಾ ಆಡುಭಾಷೆಯು ತಳಹದಿಯಾಗಿರಬೇಕಾದುದು ಅನಿವಾರ್ಯ. ಸಸ್ಯೂರ್ ೧೯ನೆಯ ಶತಮಾನದ ವೈಯಾಕರಣರನ್ನು ಅವರ ಲಿಪಿವ್ಯಾಮೋಹಕ್ಕಾಗಿ ಟೀಕಿಸಿದ್ದಾನೆ. ಅವರು ಬರವಣಿಗೆಯನ್ನು ಭಾಷೆಯೆಂದು, ಅಕ್ಷರಗಳನ್ನು ಧ್ವನಿಗಳೆಂದು ಭಾವಿಸಿದರೆಂಬುದು ಆರೋಪ. ಸಸ್ಯೂರ್ ಅದನ್ನು 'ಲಿಪಿಯ ದಬ್ಬಾಳಿಕೆ' (tyranny of writing) ಎಂದು ಕರೆದುದಲ್ಲದೆ ಅದು 'ರಾಕ್ಷಸೀಯತೆ' ಅಥವಾ ವಿಕೃತಿಯೆಂದು ಕರೆಯುತ್ತಾನೆ. ಇಂಥ ತೀವ್ರವಾದ ಎಚ್ಚರಿಕೆಯ ಹೊರತಾಗಿಯೂ ಭಾಷಾವಿಜ್ಞಾನದ ಹಲವಾರು ವಿಭಾಗಗಳಲ್ಲಿ ಈ ಲಿಪಿವ್ಯಾಮೋಹವು ಉಳಿದುಕೊಂಡಿದೆಯೆಂಬುದನ್ನು ಈಚಿನ ಕೆಲವು ಭಾಷಾವಿಜ್ಞಾನಿಗಳು (ಹ್ಯಾರಿಸ್ ೧೯೮೦, ೮: ಲಿಯೋನ್ ೧೯೬೮, ೯) ತೋರಿಸಿ ಕೊಟ್ಟಿದ್ದಾರೆ. ಭಾಷೆಯನ್ನು ಬರಹವಾಗಿಸಿ ವಿಶ್ಲೇಷಿಸುವ ತುಡಿತಕ್ಕೆ ಅನೇಕ ಆಧುನಿಕ ಭಾಷಾವಿಜ್ಞಾನಿಗಳು ತಮಗರಿವಿಲ್ಲದೆಯೇ ಬಲಿಯಾಗಿದ್ದಾರೆಂದೂ ಹೇಳಲಾಗಿದೆ. (ಲಯೋನ್ ಇದನ್ನು orthological dogma -- ಕಾಗುಣಿತ ಶರಣತೆ ಎನ್ನುತ್ತಾನೆ.) ಆದರೆ ಜೆ. ದೆರಿದಾನ ವಿಚಾರಗಳ ಪರಿಚಯವುಳ್ಳವರಿಗೆ ಇದರ ವಿರುದ್ಧ ನಿಲುವಿನ ಅರಿವಿರುತ್ತದೆ. ಅವನ ಅಭಿಪ್ರಾಯದಲ್ಲಿ logocentrism -- ಅಂದರೆ, ಧ್ವನಿ ಪಾರಮ್ಯವಾದವು (= ಭಾಷೆಯಲ್ಲಿ ಮಾತು ಅಥವಾ ಧ್ವನ್ಯಾತ್ಮಕ ಅಂಶಗಳೇ ಪ್ರಧಾನವಾದವುಗಳೆಂಬ ಅಭಿಪ್ರಾಯ) ಪೂರ್ವಾಗ್ರಹಪೀಡಿತವಾಗಿದೆ. ಅದು ಭಾಷೆಯ ಕುರಿತಾದ ಮುಕ್ತ ವಿಚಾರವನ್ನು ಹತ್ತಿಕ್ಕುತ್ತದೆ; ಭಾಷೆಯ ಅಧ್ಯಯನದಲ್ಲಿ ಲಿಪಿಯ ಉತ್ಪತ್ತಿ, ಸ್ಥಾನಮಾನ ಮತ್ತು ಯಥೋಚಿತ ಸ್ಥಾನಗಳ ಕುರಿತಾದ ನಮ್ಮ ಚಿಂತನೆಗಳ ಗತಿಯನ್ನು ಕುಂಠಿತಗೊಳಿಸುತ್ತದೆ. ಇಲ್ಲಿ ಪಾಶ್ಚಾತ್ಯ ಅತಿಭೌತಶಾಸ್ತ್ರದ ಖಂಡನೆಯ ಮುಖ್ಯವಾದ ಉದ್ದೇಶವೆಂದರೆ ಸಸ್ಯೂರ್, ರೂಸೋ ಮುಂತಾದವರ ಪಠ್ಯಗಳನ್ನು 'ನಿರಚನ'ಗೊಳಿಸುವುದು ಮತ್ತು ಹೀಗೆ ಮಾಡುವುದರ ಮೂಲಕ ಧ್ವನಿಪಾರಮ್ಯವಾದದ ವಿನಾಶಕಾರೀ ಪರಿಣಾಮ ಮತ್ತು ಅಪಾಯಗಳನ್ನು ತೆರೆದುತೋರುವುದೇ ಆಗಿದೆಯಲ್ಲದೆ ಬರವಣಿಗೆಯ ಕುರಿತಾದ ಲಿಪಿವಿಜ್ಞಾನ (grammatology)ವನ್ನು ಬೆಳೆಸುವುದೂ ಆಗಿದೆ. ಹಾಗೆಂದರೆ ಲಿಪಿಯು ಮಾತಿಗಿಂತ ಉತ್ತಮವಾದುದೆಂದು ತಿಳಿಯಬೇಕಿಲ್ಲ. ಅದರ ಬದಲಿಗೆ, ಮಾತು ಮತ್ತು ಲಿಪಿಗಳಲ್ಲಿ ವಿರೋಧವಿದೆಯೆಂಬ ಭ್ರಮೆಯನ್ನು ನಿವಾರಿಸುವ ಪ್ರಯತ್ನ ಇದು. ತುಂಬ ಪ್ರಾಚೀನಕಾಲದಿಂದಲೂ ಭಾಷೆಯ ಹುಟ್ಟು ಮತ್ತು ಬೆಳವಣಿಗೆಗಳಲ್ಲಿ ಮಾತು ಮತ್ತು ಲಿಪಿಗಳು ಮಹತ್ವದ ಪಾತ್ರಗಳನ್ನು

ಪಡಿಸಿವೆ. 'ಇತಿಹಾಸದ ಗತಿಯನ್ನು ನಿಲ್ಲಿಸಿದಾಗ ಮಾತ್ರ ಭಾಷೆಯನ್ನು ಬರವಣಿಗೆಯಿಂದ ರಕ್ಷಿಸಬಹುದು' (ಡೆರಿಡಾ ೧೯೭೬,೩೨).

ಭರ್ತೃಹರಿಯ ಸ್ಫೋಟ ಅಥವಾ ಭಾಷೆಯು ನಮ್ಮ ಅರಿವಿನ ಅನಿವಾರ್ಯ ಭಾಗವಾಗಿದೆಯೆಂಬ ನಿಲುವಿನ ಪ್ರಕಾರ ಮಾತು ಮತ್ತು ಬರವಣಿಗೆಗಳೆರಡೂ ಸ್ಫೋಟಕ್ಕೆ ಅಭಿವ್ಯಂಜಕಗಳಾದಾವು. ಅವುಗಳಲ್ಲಿ ಒಂದು ಪ್ರಧಾನವೆನಿಸುವುದಾಗಲಿ, ಸ್ಫೋಟವನ್ನು ವಿರೂಪಗೊಳಿಸುವುದಾಗಲಿ ಇಲ್ಲ. ವಾಸ್ತವವಾಗಿ ಅವೆರಡೂ ಸ್ಫೋಟವನ್ನು ವಿಕೃತಗೊಳಿಸಬಹುದು. ಆದರೆ ಅದು ಹೀನಾರ್ಥಕವಾಗಿಯಲ್ಲ. ಬದಲಾವಣೆಯಿಲ್ಲದ್ದನ್ನು ಬದಲಾವಣೆಗೊಳಪಡಿಸುತ್ತದೆ (ಅವಿಕೃತವಾದುದನ್ನು ವಿಕೃತಗೊಳಿಸುತ್ತದೆ) ಎಂಬ ಅರ್ಥದಲ್ಲಿ. ಇಲ್ಲಿ 'ವಿಕಾರ'ವೆಂಬ ಪದವನ್ನು ಬದಲಾವಣೆಯೆಂಬ ಅರ್ಥದಲ್ಲಿ ಸ್ವೀಕರಿಸಬೇಕು. ಸ್ಫೋಟವು ಪ್ರತಿಯೊಬ್ಬನ ಅರಿವಿನ ಅಂಗವಾಗಿದ್ದು, ಪರಿಣಾಮ ಅಥವಾ ಬದಲಾವಣೆಗಳಿಗೆ ಒಳಗಾಗದ್ದು. ಭರ್ತೃಹರಿಯ ಸಿದ್ಧಾಂತದ ಪ್ರಕಾರ ಮೂಲ ಮತ್ತು ಅನುವಾದಗಳೆರಡೂ (ಒಂದುರೀತಿಯಲ್ಲಿ) ಪರಿಣಾಮ ಅಥವಾ ಬದಲಾವಣೆಗೆ ಒಳಗಾದವುಗಳೇ ಆಗಿವೆ.

ಭರ್ತೃಹರಿಯು ಭಾಷೆಯನ್ನು ಶಬ್ದ ಮತ್ತು ಮಾತು ಎಂದು ಸ್ಪಷ್ಟವಾಗಿಯೇ ಹೇಳುತ್ತಾನಾದರೂ ಡೆರಿಡಾ ಹೇಳುವ ಅರ್ಥದಲ್ಲಿ ಅವನು ಧ್ವನಿವ್ಯಾಮೋಹಿಯೆಂದು ಆಪಾದಿಸುವಂತಿಲ್ಲ. ವಾಸ್ತವವಾಗಿ ಭಾರತದಲ್ಲಿ ಮೌಖಿಕ ಪರಂಪರೆಯು ಸಾಕಷ್ಟು ಹಿಂದಿನದು. ವೇದಗಳನ್ನು ಕಂಠಪಾಠ ಮಾಡುವುದೇ ರೂಢಿ. (ವೇದಗಳನ್ನು scriptures – ಧರ್ಮ'ಗ್ರಂಥ'ಗಳು, ಅಂದರೆ 'ಬರೆಯಲ್ಪಟ್ಟವು' ಎಂದು ಹೇಳುವುದು ಸರಿಯಲ್ಲ; ಅವು 'ಶ್ರುತಿ'ಗಳು, ಅಂದರೆ 'ಕೇಳಬೇಕಾದಂಥವು'.) ಬುದ್ಧನ ಸಂಭಾಷಣೆಗಳು ಅವನ ಕಾಲಾನಂತರ ಅನೇಕ ಶತಮಾನಗಳವರೆಗೆ ಲಿಖಿತರೂಪದಲ್ಲಿ ಬಂದಿರಲಿಲ್ಲ. ಜೈನಧರ್ಮಕ್ಕೂ ಇದೇ ಮಾತು ಅನ್ವಯಿಸುತ್ತದೆ. ಶಾಸ್ತ್ರಗಳನ್ನು ಮೊದಲು ಕಂಠಪಾಠಮಾಡಿ ಅನಂತರ ವಿವರಣೆ ಅಥವಾ ತಿಳಿಯುವ ಪ್ರಯತ್ನ ಮಾಡಬೇಕಾಗಿತ್ತು. ಆದ್ದರಿಂದ ಇಲ್ಲಿ ಭಾಷೆಯನ್ನು 'ಶಬ್ದ'ವೆಂದು ಕರೆದುದರಲ್ಲಿ ಆಶ್ಚರ್ಯವೇನೂ ಇಲ್ಲ. ಬರವಣಿಗೆಯ ಸಾಮಗ್ರಿಗಳನ್ನು ಸಿದ್ಧಪಡಿಸುವುದು ಹಾಗೂ ರಕ್ಷಿಸುವುದು ಸುಲಭವಾಗಿರಲಿಲ್ಲ. ಹವಾಮಾನದ ವೈಪರೀತ್ಯ ಮತ್ತು ಇತರ ಕಾರಣಗಳಿಂದಾಗಿ ವಿದ್ವಾಂಸರು ತುಂಬ ಕಷ್ಟಪಡಬೇಕಾಗಿತ್ತು. ಹಾಗಿದ್ದರೂ ಭಾರತೀಯ ಸಂಪ್ರದಾಯವು ಧ್ವನಿವ್ಯಾಮೋಹದಿಂದ ದೂರವಾಗಿದೆ. ಧ್ವನಿವ್ಯಾಮೋಹದ ಪ್ರಮುಖ ಲಕ್ಷಣವೆಂದರೆ ಲಿಪಿಯನ್ನು ನಿಂದಿಸುವುದು; ಹೀಗಳೆಯುವುದು. ಹಾಗಲ್ಲದೆ ಧ್ವನಿಯನ್ನು ಪರಮೋಚ್ಚ ಸ್ಥಾನದಲ್ಲಿ ಪ್ರತಿಷ್ಠಾಪಿಸ

ಲಾಗುವುದಿಲ್ಲ. ದೆರಿದಾನತ್ತ ತಿರುಗಿದರೆ ಇದು ಸ್ಪಷ್ಟ. ಲಿಪಿಯ ನಿಂದೆಯನ್ನು ದೆರಿದಾ ಆಯುಧವಾಗಿ ಬಳಸಿ ಸಸ್ಯೂರ್, ರೂಸೋ ಮುಂತಾದವರ ಬರವಣಿಗೆಯ 'ನಿರಚನ'ಕ್ಕೆ ತೊಡಗುತ್ತಾನೆ. ನನಗೆ ತಿಳಿದಂತೆ ಭಾರತೀಯ ಪರಂಪರೆಯಲ್ಲಿ ಲಿಪಿಯ ನಿಂದೆಯು ಕಾಣುವುದಿಲ್ಲ. ಆದ್ದರಿಂದ ಸ್ಫೋಟಸಿದ್ಧಾಂತವು 'ಧ್ವನಿವ್ಯಾಮೋಹ ವಾದ'ವನ್ನು ಬೆಂಬಲಿಸುವುದಿಲ್ಲ. ಈಗಾಗಲೇ ಹೇಳಿದಂತೆ ಧ್ವನಿ ಹಾಗೂ ಲಿಪಿ ಸಂಕೇತಗಳೆರಡೂ ಸ್ಫೋಟದ ಅಭಿವ್ಯಂಜಕಗಳೆನಿಸುತ್ತವೆ. ಅಭಿವ್ಯಂಜಕಗಳೆಂದ ಮೇಲೆ ಅವುಗಳಲ್ಲಿ ಯಾವುದು ಬೇಕಾದರೂ ಅಭಿವ್ಯಂಗ್ಯದೊಂದಿಗೆ ತಾದಾತ್ಮ್ಯವನ್ನು ಹೊಂದಬಹುದು. ಭರ್ತೃಹರಿಯ ಸರ್ವೋದಿತ ಭಾಷಾಸಿದ್ಧಾಂತದಲ್ಲಿ ಧ್ವನಿ ಹಾಗೂ ಲಿಪಿಗಳೆರಡೂ ಸಂಪೂರ್ಣ ಸಮನ್ವಯವನ್ನು ಹೊಂದಿವೆ.

ಇತ್ತೀಚೆಗೆ ನಿಧನರಾದ
ನೀನಾಸಮ್‌ನ ಸ್ಥಾಪಕ ಸದಸ್ಯರಾಗಿದ್ದ

ಶ್ರೀ ಎ.ಎಸ್. ರಾಮಪ್ಪ

ನೀನಾಸಮ್‌ನ ಸದಸ್ಯ

ಶ್ರೀ ಎಂ. ಉಮೇಶ್

ಕನ್ನಡದ ಹಿರಿಯ ಸಾಹಿತಿ

ಶ್ರೀ ಕೆ.ಪಿ. ಪೂರ್ಣಚಂದ್ರತೇಜಸ್ವಿ

ಕನ್ನಡ ಚಿಂತಕ

ಶ್ರೀ ಕೆ. ರಾಮದಾಸ್

ಮತ್ತು
ಪ್ರಸಿದ್ಧ ಮದ್ದಲೆಗಾರ

ಶ್ರೀ ದುರ್ಗಪ್ಪ ಗುಡಿಗಾರ

ಇವರಿಗೆ
ನೀನಾಸಮ್‌ನ ಶ್ರದ್ಧಾಂಜಲಿ

ನೀನಾಸಮ್ ವರದಿಗಳು

ನೀನಾಸಮ್ ರಂಗಶಿಕ್ಷಣ ಕೇಂದ್ರ: ಫೆಬ್ರವರಿ೨೬ರಿಂದ ಮಾರ್ಚ್ ೪ರವರೆಗೆ ಪಾಂಡಿಚೆರಿಯ ಆದಿಶಕ್ತಿ ತಂಡದ ವೀಣಾಪಾಣಿ ಚಾವ್ಲಾ, ವಿನಯ್ ಮುಂತಾದವರು ಭಾವ ಮತ್ತು ಉಸಿರಾಟದ ಸಂಬಂಧಕ್ಕೆ ಒತ್ತುಕೊಟ್ಟು ಅಭಿನಯ ಕಮ್ಮಟವೊಂದನ್ನು ನಡೆಸಿಕೊಟ್ಟರು. ಏಪ್ರಿಲ್ ಮೊದಲವಾರ ವಿದ್ಯಾರ್ಥಿಗಳಿಗೆ ಅಕ್ಷರ ಕೆ.ವಿ. ಅವರು ರಚಿಸಿ ನಿರ್ದೇಶಿಸಿದ ನಾಟಕದ ಪ್ರದರ್ಶನಗಳು ನಡೆದವು. ನೀನಾಸಮ್ ಆಯೋಜಿಸಿದ ಮಕ್ಕಳ ಶಿಬಿರದಲ್ಲಿ ರಂಗವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಂಡರು. ಮೇ ೧೧ರಿಂದ ೧೫ರವರೆಗೆ ಈ ವರ್ಷ ಪ್ರದರ್ಶಿಸಿದ ಪ್ರಮುಖ ನಾಟಕಗಳನ್ನೊಳಗೊಂಡ ನಾಟಕೋತ್ಸವವನ್ನು ನಡೆಸಲಾಯಿತು. ಮೇ ೧೭ರಿಂದ ೨೬ರವರೆಗೆ ವಾರ್ಷಿಕ ಪರೀಕ್ಷೆಗಳು ನಡೆದವು. ಪರೀಕ್ಷೆಗಳನ್ನು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸಿಕೊಟ್ಟಿತು.

ನೀನಾಸಮ್ ಕಾರ್ಯಕ್ರಮಗಳು: ಏಪ್ರಿಲ್ ೭ರಿಂದ ೯ರವರೆಗೆ ಭಾಷೆ ಮತ್ತು ತತ್ವಶಾಸ್ತ್ರ ಕುರಿತಾದ ಕಮ್ಮಟವೊಂದನ್ನು ಡಾ. ಸುಂದರ ಸಾರುಕ್ಕಾಯಿಯವರು ನಡೆಸಿಕೊಟ್ಟರು. ಪ್ರೊ. ಎಂ.ಎ. ಹೆಗಡೆ, ಶ್ರೀಕಾಂತ ಶಾಸ್ತ್ರಿ, ಮನು ಚಕ್ರವರ್ತಿ, ಶರತ್ ಅನಂತಮೂರ್ತಿ ಮುಂತಾದವರು ಸಂಪನ್ಮೂಲ ವ್ಯಕ್ತಿಗಳಾಗಿದ್ದರು. ಆ ಸಂದರ್ಭದಲ್ಲಿ ಡಾ.ಪ್ರಭಾಕರ ಜೋಶಿ, ಎಂ.ಎ.ಹೆಗಡೆ, ಉಮಾಕಾಂತ ಭಟ್ಟ, ಭಾಗವತ ಪರಮೇಶ್ವರ ಹೆಗಡೆ ಮುಂತಾದವರು 'ಕರ್ಮಜಿಜ್ಞಾಸೆ' ಎಂಬ ಯಕ್ಷಗಾನ ತಾಳಮದ್ದಲೆ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಏಪ್ರಿಲ್ ೧೧ರಿಂದ ೨೫ರವರೆಗೆ ನೀನಾಸಮ್ ಒಂದು ಮಕ್ಕಳ ಶಿಬಿರವನ್ನು ಆಯೋಜಿಸಿತ್ತು. ಸುಮಾರು ೨೨೦ ಮಕ್ಕಳು ಈ ಶಿಬಿರದಲ್ಲಿ ಭಾಗವಹಿಸಿದ್ದರು. ಚನ್ನಕೇಶವ ಅವರು ಈ ಶಿಬಿರವನ್ನು ನಡೆಸಿಕೊಟ್ಟರು.

ನೀನಾಸಮ್ ಮರುತಿರುಗಾಟ: ಈ ಸಾಲಿನ ಮರುತಿರುಗಾಟದಲ್ಲಿ ಆಧುನಿಕ ಮತ್ತು ಆಧುನಿಕಪೂರ್ವ ಕನ್ನಡ ಸಾಹಿತ್ಯದಲ್ಲಿನ – ನಾಗಚಂದ್ರನಿಂದ ಮೊದಲ್ಗೊಂಡು ಕುವೆಂಪು, ಅಡಿಗರವರೆಗಿನ -- ರಾಮಾಯಣ ಕಥಾನಕಗಳನ್ನು ಆಧರಿಸಿ ಸಂಪಾದಿಸಿಕೊಂಡ 'ಕನ್ನಡ ರಾಮಾಯಣ' ಎಂಬ ಪ್ರಯೋಗವನ್ನು ಸಿದ್ಧಪಡಿಸಿ ಪ್ರದರ್ಶಿಸಲಾಯಿತು (ನಿ: ಬಿ.ಆರ್. ವೆಂಕಟರಮಣ ಐತಾಳ). ಫೆಬ್ರವರಿ - ಮಾರ್ಚ್ ಅವಧಿಯಲ್ಲಿ ಕರ್ನಾಟಕದ ಹಲವು ಊರುಗಳಲ್ಲಿ ಒಟ್ಟು ಮೂವತ್ತು ಪ್ರದರ್ಶನಗಳನ್ನು ನೀಡಲಾಯಿತು. ಈ ಸಾಲಿನ ಮರುತಿರುಗಾಟದ ಪ್ರದರ್ಶನಗಳನ್ನು ಕರ್ನಾಟಕ ನಾಟಕ ಅಕಾಡೆಮಿಯು ಆಯೋಜಿಸಿತ್ತು.

ಅಕ್ಷರ ಪ್ರಕಾಶನ

ಹೆಗ್ಗೋಡು (ಸಾಗರ) ಕರ್ನಾಟಕ - ೫೭೭ ೪೧೭

ಈಚಿನ ಪ್ರಕಟಣೆಗಳು

ಶಿವರಾಮ ಕಾರಂತ: ಎರಡು ಅಧ್ಯಯನಗಳು (ವಿಮರ್ಶೆ, ಟಿ.ಪಿ. ಅಶೋಕ)	ರೂ. ೮೫
ದಾವ್ ದ ಜಿಂಗ್ (ಅನುವಾದ: ಯು.ಆರ್. ಅನಂತಮೂರ್ತಿ)	ರೂ. ೭೦
ಕಲ್ಲು ಪಾರಿವಾಳಗಳ ಬೇಟ (ಕವನಗಳು: ಎಸ್. ಮಂಜುನಾಥ್)	ರೂ. ೬೦
ವಿಜ್ಞಾನ-ಸಂಸ್ಕೃತಿ (ರೊದ್ದಂ ನರಸಿಂಹ ಅವರ ಬರಹಗಳ ಅನುವಾದ ಅನು: ಅಕ್ಷರ ಕೆ.ವಿ.)	ರೂ. ೭೦
ನಾಣೇಭಟ್ಟನ ಸ್ವರ್ಗದ ಕನಸು ಮತ್ತು ಇನ್ನೆರಡು ಮಕ್ಕಳ ನಾಟಕಗಳು (ಗಜಾನನ ಶರ್ಮ)	ರೂ. ೭೫
ಕೆ.ವಿ. ಸುಬ್ಬಣ್ಣ ಅವರ ಆಯ್ದ ಲೇಖನಗಳು (ಹದಿನೈದು ಲೇಖನಗಳ ಸಂಕಲನ)	ರೂ. ೧೦೦
ಗಲಿವರಾಯಣ (ಅನುವಾದ: ಬಿ.ಎಸ್. ವಿದ್ಯಾರಣ್ಯ)	ರೂ. ೯೦
ನಾಪತ್ತೆಯಾದ ಗ್ರಾಮಾಫೋನು ಮತ್ತು ಇತರ ಪ್ರಬಂಧಗಳು (ಎಸ್. ದಿವಾಕರ್)	ರೂ. ೧೫೦
ಹೈಬ್ರಿಡ್ ಕಥೆಗಳು (ಆರ್ಯ)	ರೂ.೬೫
ಅಲೆಗಳಲ್ಲಿ ಅಂತರಂಗ (ವೈದೇಹಿ ಕಥೆಗಳು ೧೯೭೯-೨೦೦೪)	ರೂ ೪೦೦
ವಿಮರ್ಶೆಯ ವಿನ್ಯಾಸ (ವಿಮರ್ಶೆ - ಡಾ.ಸಿ.ವಿ. ಪ್ರಭುಸ್ವಾಮಿಮಠ)	ರೂ ೪೦
ಕೊನೆಯ ಬ್ರಾಹ್ಮಣ (ತೆಲುಗು ಆತ್ಮಕಥನವೊಂದರ ಆಯ್ದ ಭಾಗಗಳ ಅನುವಾದ ಮತ್ತು ಪರಿಚಯ - ಡಾ. ರಿ. ವೆಂಕಟ ರಾವ್)	ರೂ ೩೫
ಸ್ತ್ರೀಮತವನುತ್ತರಿಸಲಾಗದೆ? (ಸಾಹಿತ್ಯ-ಸಂಸ್ಕೃತಿ ಕುರಿತ ಲೇಖನಗಳು ಡಾ. ಎಂ.ಎಸ್. ಆಶಾದೇವಿ)	ರೂ ೯೦
ಅರಬಿ ಎಂಬ ಕಡಲು (ಕವನಗಳು - ಹಾ.ಮ. ಕನಕ)	ರೂ ೫೦
ಅಶ್ವಮೇಧ (ಕಾದಂಬರಿ - ಅಶೋಕ ಹೆಗಡೆ)	ರೂ ೧೨೦
ಸಾಹಿತ್ಯ ಕಥನ (ವಿಮರ್ಶೆ- ಡಿ.ಆರ್. ನಾಗರಾಜ್)	ರೂ ೨೦೦
ಶಿಖರಸೂರ್ಯ (ಕಾದಂಬರಿ - ಚಂದ್ರಶೇಖರ ಕಂಬಾರ)	ರೂ ೨೦೦
ಒಂದು ಬದಿ ಕಡಲು (ಕಾದಂಬರಿ - ವಿವೇಕ ಶಾನಭಾಗ)	ರೂ ೧೩೫
ವೆನಿಸ್ಸಿನ ವ್ಯಾಪಾರ ಮತ್ತು ಕ್ರಮವಿಕ್ರಮ (ಶೇಕ್ಸ್ಪಿಯರ್ ನಾಟಕಗಳ ಅನುವಾದ - ಅಕ್ಷ ಕೆ.ವಿ.)	ರೂ ೧೦೦
ಸ್ವಯಂವರಲೋಕ (ನಾಟಕ - ಅಕ್ಷ ಕೆ.ವಿ.)	ರೂ ೬೫
ಐದು ದಶಕದ ಕಥೆಗಳು (ಸಮಗ್ರ ಕಥಾಸಂಕಲನ - ಯು.ಆರ್. ಅನಂತಮೂರ್ತಿ)	ರೂ ೨೪೦